No. MAG (3)/NPP/77/2017-18

RNI No. KARKAN-2012/53684/Dtd. 19-12-2013

ವಾಗ್ರಚನೆಯೆಂಬುದು ಕರ್ಣಾಟವಯ್ಯ

ನೊಳಂಬವಾಣಿ

NOLAMBAVANI Kannada Quarterly

ಕನ್ನಡ ತ್ರೈಮಾಸಿಕ

ಸಂಪಾದಕರು : ಡಾ. ಬಿ.ಸಿ.ರಾಕೇಶ್

Volume-16	January, February, March 2026	Rs. 25/-	Page - 56	Issue-1
ಸಂಪುಟ–16	ಜನವರಿ, ಫೆಬ್ರವರಿ, ಮಾರ್ಚ್ 2026	ರೂ. 25/–	ಪುಟಗಳು – 56	ಸಂಚಿಕೆ–1





853ನೇ ಶ್ರೀಗುರು ಸಿದ್ಧರಾಮೇಶ್ವರರ ಜಯಂತಿ, ಹೊಳಲ್ಕೆರೆ. ಜನವರಿ 2026



ನಮ್ಮ ಸಂಘಕ್ಕೆ ಬೆಂಗಳೂರಿನಲ್ಲಿ ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಕ್ಕೆ ನಿವೇಶನ ಹಾಗೂ ತಿಪಟೂರಿನಲ್ಲಿ ವಿದ್ಯಾರ್ಥಿ ನಿಲಯಕ್ಕಾಗಿ ಒಂದು ಎಕರೆ ಸರ್ಕಾರಿ ಭೂಮಿಯನ್ನು ಮಂಜೂರು ಮಾಡಿರುವುದಕ್ಕೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರನ್ನು ಸಮಾಜದ ಮುಖಂಡರು, ಮಾಜಿ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರು ಮತ್ತು ಸಂಘದ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಂಘದ ಪರವಾಗಿ ಅಭಿನಂದಿಸಲಾಯಿತು.



ನಮ್ಮ ಸಂಘಕ್ಕೆ ತಿಪಟೂರಿನಲ್ಲಿ ವಿದ್ಯಾರ್ಥಿ ನಿಲಯಕ್ಕಾಗಿ ಸರ್ಕಾರದಿಂದ ಒಂದು ಎಕರೆ ಭೂಮಿ ಮಂಜೂರು ಮಾಡಲು ಸಹಕಾರ ನೀಡಿದ ತಿಪಟೂರು ತಾಲ್ಲೂಕಿನ ಶಾಸಕರಾದ ಶ್ರೀ. ಕೆ.ಷಡಾಕ್ಷರಿರವರಿಗೆ ನೊಳಂಬ ಲಿಂಗಾಯತ ಸಂಘದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಕೃತಜ್ಞತೆ ಸಲ್ಲಿಸಿ ಗೌರವಿಸಲಾಯಿತು.

ತಿಪಟೂರಿನಲ್ಲಿ ನಮ್ಮ ಸಂಘಕ್ಕೆ ವಿದ್ಯಾರ್ಥಿನಿಲಯ ನಿರ್ಮಾಣಕ್ಕಾಗಿ ಸರ್ಕಾರದ ವತಿಯಿಂದ ಒಂದು ಎಕರೆ ಜಮೀನನ್ನು,
ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು
ಹಾಗೂ ಕಂದಾಯ ಸಚಿವರಾದ ಶ್ರೀ ಕೃಷ್ಣ ಬೈರೇಗೌಡರವರ ಸಹಕಾರದೊಂದಿಗೆ ಮಂಜೂರಾಗಿದ್ದು
ಅದಕ್ಕಾಗಿ ಶ್ರಮಿಸಿದ ಸಮಾಜದ ಮುಖಂಡರು, ಮಾಜಿ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿಯವರಿಗೆ
ಹಾಗೂ ಪೂರ್ಣ ಸಹಕಾರ ನೀಡಿದ ತಿಪಟೂರಿನ ಶಾಸಕರಾದ ಶ್ರೀ ಕೆ.ಷಡಾಕ್ಷರಿಯವರಿಗೆ
ನೊಳಂಬ ಲಿಂಗಾಯತ ಸಂಘವು ಅಭಾರಿಯಾಗಿದ್ದು, ಎಲ್ಲರಿಗೂ ಸಂಘದ ಪರವಾಗಿ ಅಭಿನಂದನೆಗಳು.



ದೇವಲೋಕದವರಿಗೂ ಬಸವಣ್ಣನೇ ದೇವರು
ಮರ್ತ್ಯಲೋಕದವರಿಗೂ ಬಸವಣ್ಣನೆ ದೇವರು
ನಾಗಲೋಕದವರಿಗೂ ಬಸವಣ್ಣನೆ ದೇವರು
ಮೇರುಗಿರಿ ಮಂದರಗಿರಿ ಮೊದಲಾದವೆಲ್ಲಕ್ಕೂ
ಬಸವಣ್ಣನೆ ದೇವರು ಚೆನ್ನಮಲ್ಲಿಕಾರ್ಜುನಯ್ಯಾ
ನಿಮಗೂ ಎನಗೂ ನಿಮ್ಮ ಶರಣರಿಗೂ ಬಸವಣ್ಣನೆ ದೇವರು



ಸಂಪಾದಕ ಮಂಡಳಿ

ಸಂಪಾದಕರು :

ಡಾ. ರಾಕೇಶ್ ಬಿ.ಸಿ., ಎಂ.ಎ.,ಪಿಹೆಚ್.ಡಿ.,

ಸದಸ್ಯರು

ಕತ್ತಿಗೆ ಬಿ.ಚನ್ನಪ್ಪ, ಎಂ.ಎ., ಬಿ.ಇಡಿ.,

ಎಂ.ದಯಾನಂದಸ್ವಾಮಿ, ಎಂ.ಎ.,
(ಪತ್ರಿಕೋದ್ಯಮ ಡಿಪ್ಲಮೊ)

ಡಾ. ಟಿ.ಬಿ.ಬಸವರಾಜು, ಪಿಹೆಚ್.ಡಿ.,

ಎಸ್.ಎಂ.ಜಯದೇವ್, ಎಂ.ಎ.,

ಎಸ್.ಯೋಗಾನಂದ, ಎಂ.ಎ.ಬಿ.ಇಡಿ., ಕೆ.ಇ.ಎಸ್.

ಬಿ.ಆರ್.ಭುಜೇಂದ್ರ, ಎಂ.ಎ., ಬಿಪಿಇಡಿ., ಎಲ್.ಎಲ್.ಬಿ.,

ಆರ್.ರಂಗನಾಥ್, ಎಂ.ಎ.,

ಎ.ಬಿ.ಬಸವರಾಜು, ಬಿ.ಕಾಂ.,

ಎಂ.ಎನ್.ಪ್ರಸಾದ್, ಎಂ.ಇ.,

ಸುಶೀಲಾ ಸದಾಶಿವಯ್ಯ., ಎಂ.ಎ.,

ಅಕ್ಷರ ವಿನ್ಯಾಸ :

ಸತೀಶ್ ಹೆಬ್ಬಾಕ

ಬೆನಕ ಗ್ರಾಫಿಕ್ಸ್, ತುಮಕೂರು.

ಚಂದಾದರ

ಬಿಡಿ ಸಂಚಿಕೆ	ರೂ. 25/–
ಆಜೀವ ಸದಸ್ಯರು	ರೂ. 2000/–
ಪೋಷಕರು	ರೂ. 10,000/–
ಮಹಾಪೋಷಕರು	ರೂ. 25,000/–

('ನೊಳಂಬ ವಾಣಿ'ಯಲ್ಲಿ ಪ್ರಕಟವಾಗುವ ಲೇಖನ, ವಿಚಾರ, ವಿಶ್ಲೇಷಣೆಗಳಿಗೆ ಲೇಖಕರು ಜವಾಬ್ದಾರರು – ಸಂಪಾದಕರು)

Published From :

B.K.CHANDRASHEKAR
NOLAMBA ADHYAYANA KENDRA
NOLAMBA LINGAYATHA SANGHA (R)
1/A, 1st Cross, 3rd Stage, 4th Block,
Basaveshwara Nagar,
Bengaluru - 560 079. Karnataka.
Phone : 080-48148953
E-mail : nolambavani@gmail.com

Editor :
Dr. Rakesh B.C.
Cell : 9481910181

ಒಳ ಪುಟಗಳಲ್ಲಿ.....

1. ಸಂಪಾದಕೀಯ : ಡಾ. ಬಿ.ಸಿ.ರಾಕೇಶ್	05
2. ಅಧ್ಯಕ್ಷರ ಆಶಯ ನುಡಿ : ಬಿ.ಕೆ.ಚಂದ್ರಶೇಖರ್, ಅಧ್ಯಕ್ಷರು.	06
3. ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು : ಕೆ.ಬಿ.ಶಶಿಧರ್ ಕಾಮನಕೆರೆ	07
4. ಲಿಂಗಾಯತರು ಹಿಂದೂಗಳಲ್ಲವೇ : ಚಂದ್ರಶೇಖರ ತಿ. ಚಿಂದಾಳ	08
5. ಜಗತ್ತಿನ ಎಲ್ಲಾ ಹೆಣ್ಣುಗಳು ನಮಗೆ ತಾಯಂದಿರೆ : ಡಾ. ಹಾಲಪ್ಪ ಹೆಚ್ ಕುಂಟೆ	09
6. ಬಸವ ಸಂವಿಧಾನದಲ್ಲಿ ಕಾಯಕ ಮತ್ತು ಸಮೃದ್ಧತೆ : ಪ್ರೊ. ಟಿ.ಆರ್.ಚಂದ್ರಶೇಖರ್	11
7. ಹೊಸ ಪುಸ್ತಕ ಓದು : ಪ್ರಕಾಶ್ ಗಿರಿಮಲ್ಲನವರ	13
8. ಶ್ರೀಗುರು ಸಿದ್ಧರಾಮೇಶ್ವರರ ವಚನ – ನಿರ್ವಚನ : ಸುಶೀಲ ಸದಾಶಿವಯ್ಯ	18
9. ಹೆಣ್ಣು ಹೆಣ್ಣಲ್ಲ..... ಶಕ್ತಿಧಾತೆ : ಸುಶೀಲ ಸೋಮಶೇಖರ್	19
10. ಶರಣೆಯರ ವಚನಗಳಲ್ಲಿ ಕೌಟುಂಬಿಕ ಸಂಸ್ಕಾರ : ಡಾ. ಮೀನಾಕುಮಾರಿ ಪಾಟೀಲ್	21
11. ಮಾತೃದೇವೋಭವ ಪಿತೃದೇವೋಭವ ಆಚಾರ್ಯ ದೇವೋ ಭವ : ಮಲ್ಲೇಶಪ್ಪ ಟಿ.ಎಸ್.	25
12. ನೊಳಂಬರ ದೇವಾಲಯಗಳು : ಡಾ. ಸುಂಕಂ ಗೋವರ್ಧನ್	28
13. ವಚನಗಳಲ್ಲಿ ಲಂಚದ ವಿಮರ್ಶೆ : ಡಾ. ಜಿ.ವಿ.ಮಂಜುನಾಥ್	30
14. ಉದ್ಯಮಿಯಾಗು ಉದ್ಯೋಗ ಕೊಡು : ವೀರೇಶ್ ಗಡದ	32
15. ಕಾಯಕವೇ ಕೈಲಾಸ : ನಾಗರಾಜಪ್ಪ ಟಿ.	33
16. ಆರೋಗ್ಯಾಮೃತ–41 : ಶ್ರೀ ಶ್ರೀ ಬಸವಾನಂದಸ್ವಾಮಿಗಳು	34
17. ಆರೋಗ್ಯಕ್ಕಾಗಿ ಆಯುರ್ವೇದ : ಡಾ. ಶ್ರೀಪಾದ್ ಎಚ್.ಎಸ್.	36
18. ಸಿದ್ಧರಾಮೇಶ್ವರನ ವಚನವೂ ಸೇರಿ ಕೆಲವು ವಿಶೇಷಗಳ ಶಾಸನ : ಡಾ. ಬಿ.ರಾಜಶೇಖರಪ್ಪ	37
19. ಶಿವಯೋಗಿ ಸಿದ್ಧರಾಮ : ಕತ್ತಿಗೆ ಬಿ. ಚನ್ನಪ್ಪ	41
20. ಯುವಶಕ್ತಿ ಮತ್ತು ವಿಕಸಿತ ಭಾರತ : ಆರ್.ರಂಗನಾಥ್	42
21. ನೊಳಂಬರ ಆರಾಧ್ಯ ದೈವ ಶ್ರೀಗುರು ಸಿದ್ಧರಾಮೇಶ್ವರರು : ಆರ್.ರಾಜಯ್ಯ	43
22. ನೊಳಂಬರ ಕೆರೆ ಕಟ್ಟೆ ಬಾವಿಗಳು : ಶಿವಕುಮಾರ್ ಎಸ್.	45
23. ಕೃತಕ ಬುದ್ಧಿಮತ್ತೆ ಮತ್ತು ಭವಿಷ್ಯದ ಜೀವನ ಕೌಶಲ್ಯಗಳು : ಪ್ರಸಾದ್ ಎಂ.ಎನ್.	47
24. ಎಚ್ಚರ ! ನಕಲಿ ಔಷಧ ನುಂಗಿ ನುಗ್ಗಾದೀರಿ....!! : ಡಾ. ಕರವೀರಪ್ರಭು ಕ್ಯಾಲಕೊಂಡ	49
25. ಮಾಹೆವಾರು ಕೈಗೊಳ್ಳಬೇಕಾದ ಸೂಕ್ತ ಬೇಸಾಯ ಕ್ರಮಗಳು : ಡಾ. ಶಶಿಕುಮಾರ್ ಎಸ್.	50

ಜಾಹಿರಾತು ವಿವರ

1. ಕಪ್ಪು–ಬಿಳುಪು ಕಾಲು ಪುಟ	ರೂ. 2500/–
2. ಕಪ್ಪು–ಬಿಳುಪು ಒಳ ಅರ್ಧಪುಟ	ರೂ. 4000/–
3. ಒಳಪುಟ ಕಾಲುಪುಟ (ಮಲ್ಟಿ ಕಲರ್)	ರೂ. 4000/–
4. ಕಪ್ಪು–ಬಿಳುಪು ಒಳ ಪೂರ್ಣಪುಟ	ರೂ. 6000/–
5. ಒಳಪುಟ ಅರ್ಧಪುಟ (ಮಲ್ಟಿ ಕಲರ್)	ರೂ. 6000/–
6. ಕಪ್ಪು–ಬಿಳುಪು ಸೆಂಟರ್ ಸ್ಪ್ರೆಡ್	ರೂ. 10,000/–
7. ಒಳಪುಟ ಪೂರ್ಣ ಪುಟ (ಮಲ್ಟಿ ಕಲರ್)	ರೂ. 12,000/–
8. ರಕ್ಷಾಪುಟದ 2ನೇ/3ನೇ ಒಳಪುಟ (ಮಲ್ಟಿ ಕಲರ್)	ರೂ. 19,000/–
9. ಸೆಂಟರ್ ಸ್ಪ್ರೆಡ್ ಪುಟ (ಮಲ್ಟಿ ಕಲರ್)	ರೂ 20,000/–.
10. ಹಿಂಬದಿ ರಕ್ಷಾ ಪುಟ (ಮಲ್ಟಿ ಕಲರ್)	ರೂ. 24,000/–

853ನೇ ಶ್ರೀಗುರು ಸಿದ್ಧರಾಮೇಶ್ವರರ ಜಯಂತಿ, ಹೊಳಲ್ಕೆರೆ. ಜನವರಿ 2026















ಸಂಪಾದಕೀಯ



ಮಠಗಳು ಬಹುಹಿಂದಿನಿಂದಲೂ ಧರ್ಮ ಪ್ರಸಾರದ ಪ್ರಮುಖ ಕೇಂದ್ರಗಳಾಗಿ ಬೆಳೆದು ಬಂದಿವೆ. ವೇದೋಪನಿಷತ್ ಕಾಲಗಳಲ್ಲಿ ಗುರುಕುಲಗಳು ಅರಣ್ಯದ ನಿರ್ಜನ ಪ್ರದೇಶದಲ್ಲಿರುತ್ತಿದ್ದವು. ಅಲ್ಲಿ ಲೋಕಾತೀತವಾದ ಬ್ರಹ್ಮಜ್ಞಾನವನ್ನು ಹೊಂದುವುದೇ ಪರಮ ಗುರಿಯಾಗಿದ್ದಿತು. ಕಾಲಕ್ರಮೇಣ ಲೋಕಹಿತಾರ್ಥದ ಅಥವಾ ಸಮಾಜ ಕಲ್ಯಾಣದ ಉದ್ದೇಶದಿಂದ ಮಠಗಳು ಊರು ಪಟ್ಟಣಗಳಲ್ಲಿ, ದೇವಸ್ಥಾನಗಳ ಆಶ್ರಯದಲ್ಲಿ ವಿಕಾಸಗೊಳ್ಳುತ್ತ ಬಂದವು. ಬೌದ್ಧ ಮಠಗಳು ಭಾರತದ ಇತಿಹಾಸದಲ್ಲಿ ಬೌದ್ಧ ಧರ್ಮದ ಉದಯ ಕಾಲಕ್ಕೆ ಸನ್ಯಾಸಿ ಮಠಗಳು ಅಸ್ಥಿತ್ವದಲ್ಲಿದ್ದ ಬಗೆಗೆ ಆಧಾರಗಳಿವೆ. ಮಠ ಇಲ್ಲವೆ ಸನ್ಯಾಸಿಗಳ ನಿವಾಸಕ್ಕೆ ಬೌದ್ಧರು 'ವಿಹಾರ' ಇಲ್ಲವೆ 'ಸಂಘ' ಎನ್ನುತ್ತಿದ್ದರು. ವಿಹಾರವೆಂದರೆ ಸನ್ಯಾಸಿಗಳ ನಿವಾಸವಷ್ಟೆ ಅಲ್ಲ, ಒಂದು ದೇವಾಲಯ ಎಂದು ಅರ್ಥವಾಗುತ್ತದೆ. (ಶಿವರುದ್ರಪ್ಪ ಜಿ., 1996, ಪುಟ 69).

ಬೌದ್ಧ ಧರ್ಮದಲ್ಲಿ ಮಠಗಳ ಮಹತ್ವವು ವಿಶೇಷವಾಗಿ ಕಂಡುಬರುತ್ತದೆ. ಬೌದ್ಧ ಧರ್ಮದಲ್ಲಿ 'ಬುದ್ಧ' ಮತ್ತು 'ಧಮ್ಮ'ಗಳಿಗಿರುವ ಮಹತ್ವ 'ಸಂಘ' ಅಥವಾ 'ವಿಹಾರ'ಕ್ಕೂ ಸಹ ದೊರಕಿದೆ. 'ಬುದ್ಧಂ ಶರಣಂ ಗಚ್ಛಾಮಿ', 'ಸಂಗಂ ಶರಣಂ ಗಚ್ಛಾಮಿ', 'ಧಮ್ಮಂ ಶರಣಂ ಗಚ್ಛಾಮಿ' ಈ ಮೂರು ಸೂತ್ರಗಳನ್ನು ಬೌದ್ಧರು ತ್ರಿರತ್ನಗಳು ಎಂದು ಕರೆಯುತ್ತಾರೆ. ಬೌದ್ಧ ಧರ್ಮ ಭಾರತದಲ್ಲಿ ಪ್ರಸಿದ್ಧಿಯನ್ನು ಗಳಿಸಲು ಎರಡು ಮುಖ್ಯ ಕಾರಣಗಳಿವೆ. ಒಂದು : ಧರ್ಮ ಹಾಗೂ ಆಧ್ಯಾತ್ಮಿಕ ವಿಚಾರಗಳನ್ನು ಜನಸಾಮಾನ್ಯರಿಗೆ ತಲುಪುವಂತೆ ಮಾಡಿದ್ದು, ಇನ್ನೊಂದು : ಈ ವಿಚಾರಗಳ ಪ್ರಚಾರಕ್ಕಾಗಿ ಧರ್ಮ ಭೋಧಕರ ತಂಡಗಳೇ ಬೇಕಾದಾಗ ಸಾ.ಶ. 5–6ನೆಯ ಶತಮಾನದಲ್ಲಿ ಬೌದ್ಧ ವಿಹಾರಗಳು ದೊಡ್ಡ ದೊಡ್ಡ ವಿದ್ಯಾಸಂಸ್ಥೆಗಳಾಗಿ ರೂಪ ತಾಳಿದವು. ಸಾ.ಶ. 7ನೆಯ ಶತಮಾನದಲ್ಲಿ ಎರಡನೆಯ ಪುಲಿಕೇಶಿಯ ಕಾಲದಲ್ಲಿ 100 ವಿಹಾರಗಳಿದ್ದು, 5000 ಬೌದ್ಧ ಯತಿಗಳಿದ್ದರೆಂದು ಚೀನೀ ಯಾತ್ರಿಕ ಹ್ಯುಯೆನ್ ತ್ಸಾಂಗ್‌ನು ತಿಳಿಸಿದ್ದಾನೆ. (ಷಣ್ಮುಖಯ್ಯ ಅಕ್ಕೂರಮಠ, 1996, ಪುಟ 109). ಈ ಕಾಲದಲ್ಲಿ ನಳಂದಾ ಒಂದು ಶ್ರೇಷ್ಠ ವಿದ್ಯಾಕೇಂದ್ರವಾಗಿತ್ತು. ಹ್ಯುಯೆನ್ ತ್ಸಾಂಗ್‌ನು ತನ್ನ ಶಿಕ್ಷಣವನ್ನು ಇಲ್ಲಿಯೇ ಪಡೆದನು. ಬೌದ್ಧ ವಿಹಾರಗಳು ಆರಂಭ ಕಾಲದಲ್ಲಿ ಕೇವಲ ಬೌದ್ಧ ಭಿಕ್ಷು – ಭಿಕ್ಷಿಣಿಯರ ಶಿಕ್ಷಣಕ್ಕಾಗಿ ಮೀಸಲಾಗಿದ್ದವು. ಆದರೆ ಸಾ.ಶ.ಪೂ. 3ನೆಯ ಶತಮಾನದಲ್ಲಿ ಅಂದರೆ ಅಶೋಕನ ಕಾಲಕ್ಕೆ ಜನಸಾಮಾನ್ಯರಿಗೂ ಶಿಕ್ಷಣವನ್ನು ನೀಡಲು ಪ್ರಾರಂಭಿಸಿದವು. (ಅದೇ, ಪುಟ 109).

ಬೌದ್ಧರ ಸಂಘಾರಾಮ ಅಥವಾ ವಿಹಾರಗಳು ನಮ್ಮ ಇಂದಿನ ಮಠಗಳ ಮಾದರಿಯಾಗಿ ತೋರುತ್ತವೆ. ಬೌದ್ಧ ಭಿಕ್ಷುಗಳು ಕೇವಲ ಭಿಕ್ಷಾರ್ಥಿಗಳಾಗಿ ಸಂಚರಿಸದೆ ಶಿಕ್ಷಣ ಮತ್ತು ಶಿಕ್ಷಣ ಪ್ರಸಾರಕ್ಕಾಗಿ ದೂರದ ಪ್ರದೇಶಗಳಿಗೆ ನಡೆದು ಹೋಗುತ್ತಿದ್ದರು. ಜ್ಞಾನ ಸಂಪಾದನೆಯೇ ಅವರ ಮುಖ್ಯ ಉದ್ದೇಶವಾಗಿತ್ತು, ಬೌದ್ಧ ಸನ್ಯಾಸಿಗಳ ಉಲ್ಲೇಖ ಹ್ಯುಯೆನ್ ತ್ಸಾಂಗ್‌ನಲ್ಲಿ ದೊರೆಯುತ್ತದೆ.

ನಿನಗೆ ಕೇಡಿಲ್ಲದಂತೆ

ಬೌದ್ಧ ಭಿಕ್ಷುಗಳಿಗೆ ರಾಜರು, ಶ್ರೀಮಂತ ಶಿಷ್ಯರು, ವ್ಯಾಪಾರಿಗಳು ವಿಹಾರಗಳನ್ನು ಕಟ್ಟಿಸಿಕೊಟ್ಟರು. ಈ ಭಿಕ್ಷುಗಳಿಗೆ ಎರಡು ಮೂಲ ನಿವೇಶನಗಳಿರುತ್ತವೆ. ಒಂದು 'ಆವಾಸ', ಇನ್ನೊಂದು 'ಆರಾಮ'. ಗ್ರಾಮಗಳಲ್ಲಿ ಸನ್ಯಾಸಿಗಳು ಮನೆಗಳನ್ನು ಕಟ್ಟಿಕೊಂಡು ವಾಸಿಸುವ ಸ್ಥಳಗಳೇ 'ಆವಾಸ'ಗಳು, ಶ್ರೀಮಂತ ಶಿಷ್ಯರು ವ್ಯಾಪಾರಿಗಳು ನಗರದ ಹೊರವಲಯದಲ್ಲಿ ಸನ್ಯಾಸಿಗಳಿಗೆ ದಾನ ಮಾಡಿದ ಸ್ಥಳಗಳೇ 'ಆರಾಮ'ಗಳು, ಈ 'ಆವಾಸ', 'ಆರಾಮ'ಗಳಲ್ಲಿ ವಿಹಾರಗಳನ್ನು ಕಟ್ಟಿಸಿಕೊಂಡು ಭಿಕ್ಷುಗಳು ವಾಸಿಸುತ್ತಿದ್ದರು. ಇಂತಹ ವಿಹಾರಗಳ ಖರ್ಚುವೆಚ್ಚವನ್ನು ದಾನಿಗಳೇ ನೋಡಿಕೊಳ್ಳುತ್ತಿದ್ದರು. ಕಾಲಕ್ರಮೇಣ ಈ ವಿಹಾರಗಳು ಸನ್ಯಾಸಿ ಮಠಕ್ಕೆ ಅನ್ವಯವಾಗತೊಡಗಿದವು.

'ಆರಾಮ' ಎಂಬುದು ಒಂದು 'ವನ', ಇದು ಹಣ್ಣಿನ ಅಥವಾ ಹೂವಿನ ತೋಟವಾಗಿರುತ್ತಿತ್ತು. ಇದನ್ನು ಬೌದ್ಧರು 'ಸಂಘಾರಾಮ' ಎಂದು ಕರೆಯುತ್ತಿದ್ದರು. ನಂತರ ಇದು ವಿದ್ಯಾನಿಲಯದ ನಿವೇಶನ ಎನ್ನುವ ಹೆಸರು ಪಡೆದು, ತದನಂತರ ಸನ್ಯಾಸಿಗಳ ಸಮೂಹವು ವಾಸಿಸುವ ವಿಶಾಲ ಮಠವೆಂದು ಹೆಸರು ಪಡೆಯಿತು (ಷಣ್ಮುಖಯ್ಯ, ಅಕ್ಕೂರಮಠ. 1996, ಪುಟ 109). ಅಂದರೆ ಬೌದ್ಧರ ಕಾಲದ ಸನ್ಯಾಸಿಗಳ ವಿಹಾರಗಳಿಗೆ ಮಠವೆಂದು ಕರೆಯುವುದು ರೂಢಿಯಲ್ಲಿತ್ತು.

– ಡಾ. ರಾಕೇಶ್ ಬಿ.ಸಿ., ಸಂಪಾದಕರು

ಅಧ್ಯಕ್ಷರ ಆಶಯ ನುಡಿ



"ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ
ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರು ವಿಫಲ, ವಿಫಲ...."

ಎಂಬ ಮಾತುಗಳನ್ನು ಮೊದಲಿಗೆ ಸ್ಮರಿಸುತ್ತಾ ಎಲ್ಲರಿಗೂ ಜಗದ ಮೊದಲ ತೇದಿ ಯುಗಾದಿಯ ಶುಭ ಕಾಮನೆಗಳು. ಮುಂದಿನ ಪರಾಭವ ಸಂವತ್ಸರ ನಿಮಗೆಲ್ಲರಿಗೂ ಹರುಷ ನೀಡಲೆಂದು ಆಶಿಸುತ್ತೇನೆ.

ಪರಂಪರೆಯಿಂದಲೂ ಯುಗಾದಿಗೆ ತನ್ನದೆ ಚರಿತ್ರೆ ಇತ್ತು. ಹಿರಿಯರ ನೆರಳನಲ್ಲಿ ಸಂಪ್ರದಾಯದ ಆಚರಣೆ ಮೂಲಕ ಅರ್ಥ ನೀಡುತ್ತಿದ್ದ ಇದರ ಆಚರಣೆ ಇಂದು ಮನುಷ್ಯನ ವೇಗದ ಬದುಕಿನ ನಡುವೆ ಮೌಲ್ಯವನ್ನು ಕಳೆದು ಕೊಳ್ಳುತ್ತಿರುವುದು ವಿಷಾದನೀಯ. ಅಷ್ಟೇ ಅಲ್ಲದೆ ನಾವೆಲ್ಲ ಇಂದು ಅತಿ ವೇಗದ ಜಾಗತಿಕ ಯುಗಕ್ಕೆ ಹೆಜ್ಜೆ ಇಟ್ಟಿದ್ದೇವೆ. ಪಾರಂಪರಿಕ ಶಿಕ್ಷಣದ ಮಾರ್ಗಗಳು ತಮ್ಮ ಮೌಲ್ಯವನ್ನು ಕಾಪಾಡಿಕೊಳ್ಳುವಲ್ಲಿ ಸಂಕಷ್ಟವನ್ನು ಎದುರಿಸುತ್ತಿವೆ. ಹಿಂದಿನ ಗುರುಕುಲ ಬೋಧನಾ ಮಾಧ್ಯಮಗಳನ್ನು ಇಂದು ಕೃತಕ ಬುದ್ಧಿಮತ್ತೆ (Artficial Inteligence) ಎಂಬ ತಾಂತ್ರಿಕ ರಂಗದ ನೂತನ ಆವಿಷ್ಕಾರವೊಂದು ನಮ್ಮನ್ನು ಆಳಲು ಸಜ್ಜಾಗುತ್ತಿದೆ. ಇದರ ನಡುವೆ ನಾವೆಲ್ಲರೂ **"ಜ್ಞಾನವೇ ಅನಂತ....."** ಎಂಬ ಮಾತುಗಳನ್ನು ಮತ್ತೆ ಮತ್ತೆ ಉಳಿಸಿಕೊಳ್ಳುವಲ್ಲಿ ಸದಾ ಎಚ್ಚರಿಕೆಯ ಹೆಜ್ಜೆ ಇಡಬೇಕಿದೆ.

ಜಗತ್ತಿನ ಮಾನವರೆದೆಯಲ್ಲಿ ಶಾಂತಿ, ಸಾಮರಸ್ಯಗಳೇ ದಾರಿಯಾಗಬೇಕು ಎಂದು ನುಡಿದ ಶಿವ ಶರಣರು, ಸಂತರು, ಚಿಂತಕರು ಹೇಳಿದ ವಿಚಾರಧಾರೆಗಳೆಲ್ಲ ಇಂದು ಮೂಲೆ ಹಿಡಿಯುತ್ತಿವೆಯೇನೋ ಎಂಬ ಸಂಶಯ ಕಾಡುತ್ತಿದೆ. ವಿಶ್ವದ ದೊಡ್ಡಣ್ಣ ಎಂದು ಪ್ರಖ್ಯಾತವಾಗಿರುವ ಅಮೆರಿಕದ **"ಅಹಂ"**ಗಳಿಂದಲೇ ಇರಾನ್ ಮೇಲೆ ಹೂಡಿರುವ ಯುದ್ಧ ಮೂರನೆಯ ಮಹಾಯುದ್ಧಕ್ಕೆ ವೇದಿಕೆ ಸಿದ್ಧವಾಗುವಂತೆ ಮಾಡುತ್ತಿದೆ. ವಿಶ್ವದ ಬಲಿಷ್ಠ ರಾಷ್ಟ್ರಗಳೆರಡು ಇಂದು ಎರಡು ರಾಷ್ಟ್ರಗಳಿಗೆ ಬೆಂಬಲವಾಗಿ ನಿಂತಿರುವುದು ಶಾಂತಿಯ ಭಂಗಕ್ಕೆ ಕಾರಣವಾಗುತ್ತಿದೆ. ಹೀಗೆ ಯುದ್ಧ ಮುಂದುವರೆದರೆ "ಒಂದು ದಿನ ಭೂಮಿ ಮನುಷ್ಯರೇ ಇಲ್ಲದ ಬರಡು ಭೂಮಿಯಾಗಬಹುದು."

ಈ ಹೊತ್ತಿನಲ್ಲಿ ನಮಗೆ ಬಸವ, ಬುದ್ಧರಂತಹ ದಾರ್ಶನಿಕರ ಮಾತುಗಳು ನೆನಪಾಗಿ ಹಿಂಸೆ, ಕ್ರೌರ್ಯದ ಜಾಗದಲ್ಲಿ ಶಾಂತಿ ಪುನರ್ ಸ್ಥಾಪಿತವಾದರೆ ವಿಶ್ವ ಬೆಳೆಯಲು ಸಾಧ್ಯ. ಈ ಎಲ್ಲ ಅಂಶಗಳು ನಮ್ಮನ್ನು ಒಮ್ಮೆ ಯೋಚಿಸಲಿ ಎಂಬ ಆಶಯದೊಂದಿಗೆ ಬೇವು–ಬೆಲ್ಲಗಳ ಮಿಶ್ರಣದಂತೆ ಬದುಕು ಸಿಹಿ–ಕಹಿಗಳ ಹಾದಿಯಲ್ಲಿ ಸಾಗಲಿ ನೋವಿಗಿಂತ ನಲಿವು ಹೆಚ್ಚಾಗಲಿ ಎಂಬ ಆಶಯದೊಂದಿಗೆ, ಈ ಸಾಲಿನಲ್ಲಿ ಸಂಘದ ಕಾರ್ಯ ಚಟುವಟಿಕೆಗಳು ಮತ್ತಷ್ಟು ಸಕ್ರಿಯವಾಗಲು ನಿಮ್ಮೆಲ್ಲರ ಸಹಕಾರ–ಸಹಭಾಗಿತ್ವವನ್ನು ಬಯಸುತ್ತಾ ತಮಗೆಲ್ಲ ಮತ್ತೊಮ್ಮೆ ಸಂಘದ ಪರವಾಗಿ ಶುಭ ಕೋರುತ್ತೇನೆ.

ಜನವರಿ 14 ಮತ್ತು 15ನೇ 2026ರಂದು ನಡೆದ 853ನೇ ಶ್ರೀಗುರು ಸಿದ್ಧರಾಮೇಶ್ವರ ಜಯಂತಿಯು ಯಶಸ್ವಿಯಾಗಿ ನಡೆಯಲು ತನುಮನ ಧನದಿಂದ ಸಹಕರಿಸಿದ ಹೊಳಲ್ಕೆರೆ ತಾಲ್ಲೂಕಿನ ಹಾಗೂ ನಾಡಿನ ಸಮಾಜದ ಬಂಧು ಬಾಂಧವರಿಗೂ ತುಂಬು ಹೃದಯದ ಅಭಿನಂದನೆಗಳು.

ಕಾರ್ಯಕ್ರಮದಲ್ಲಿ ನಾಡಿನ ಹರಗುರು ಚರಮೂರ್ತಿಗಳು, ರಾಜಕೀಯ ನಾಯಕರು, ಉಪನ್ಯಾಸಕರು, ಸಮಾಜ ಸೇವಕರು, ಕೃಷಿತಜ್ಞರು ಹಾಗೂ ಇತರೆಯವರು ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಅವರಿಗೂ ಕೂಡ ನೊಳಂಬ ಲಿಂಗಾಯತ ಸಂಘದಿಂದ ಅನಂತ ವಂದನೆಗಳು.

ಇಂತಹ ದೊಡ್ಡಮಟ್ಟದ ಕಾರ್ಯಕ್ರಮದಲ್ಲಿ ಸಣ್ಣಪುಟ್ಟ ನ್ಯೂನತೆಗಳನ್ನು ಬದಿಗಿಟ್ಟು, ಸಮಾಜದ ಏಳಿಗೆಗಾಗಿ, ಉನ್ನತಿಗಾಗಿ ಎಲ್ಲರೂ ಶ್ರಮಿಸೋಣ ಎಂದು ಆಶಿಸುತ್ತೇನೆ.

ಶರಣು ಶರಣಾರ್ಥಿಗಳು
ಶ್ರೀ ಬಿ.ಕೆ.ಚಂದ್ರಶೇಖರ್
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

ನೊಳಂಬ ಲಿಂಗಾಯತ ಸಂಘದ ಕಾರ್ಯ ಚಟುವಟಿಕೆಗಳು

1. ದಿನಾಂಕ: 28.12.2025ರಂದು ಸಂಘದ 2024–25ರ ವಾರ್ಷಿಕ ಸಭೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

2. ದಿನಾಂಕ: 14.01.2026 ಮತ್ತು 15.01.2026 ರಂದು ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆಯಲ್ಲಿ 853ನೇ ಶ್ರೀ ಗುರುಸಿದ್ಧರಾಮೇಶ್ವರ ಜಯಂತಿಯನ್ನು ಶ್ರೀ ಕೆ.ಸಿ.ಶಶಿಧರ್ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ಸಮಾಜ ಬಾಂಧವರು ಸೇರಿ ಗುರು–ಹಿರಿಯರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

3. ದಿನಾಂಕ: 26.01.2026ರಂದು ಸೋಮವಾರ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಎಸ್.ಆರ್.ಪಾಟೀಲ್ ರವರು ಧ್ವಜಾರೋಹಣ ಮಾಡುವುದರ ಮೂಲಕ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಉಪಾಧ್ಯಕ್ಷರಾದ ಶ್ರೀ ಹೆಚ್.ರಾಮಲಿಂಗಪ್ಪನವರು, ಮಾಜಿ ಖಜಾಂಚಿಗಳಾದ ಶ್ರೀ ಕೆ.ಬಿ.ರುದ್ರಪ್ಪನವರು, ನಿರ್ದೇಶಕರುಗಳಾದ ಶ್ರೀ ಜಿ.ಪಿ.ಮರಿಸ್ವಾಮಿರವರು ಹಾಗೂ ಶ್ರೀ ಎನ್.ಬಿ.ಶೇಖರ್ ರವರು ಭಾಗವಹಿಸಿ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಗಣರಾಜ್ಯೋತ್ಸವದ ಮಹತ್ವವನ್ನು ತಿಳಿಸಿದರು. ಕೊನೆಯಲ್ಲಿ ಸಿಹಿಯನ್ನು ಹಂಚಲಾಯಿತು.

4. ದಿನಾಂಕ: 07.02.2026 ರಂದು ವ್ಯಕ್ತಿ–ವಿಕಸನ ಕಾರ್ಯಕ್ರಮದಲ್ಲಿ ಮಾನ್ಯ ಸಚಿವರಾದ ಶ್ರೀ ಶಿವಾನಂದ ಪಾಟೀಲ್ ರವರ ಆಪ್ತ ಕಾರ್ಯದರ್ಶಿ ಗಳಾದ ಶ್ರೀ ಕೆ.ಸಿ.ವಿರುಪಾಕ್ಷಪ್ಪರವರು ಮುಖ್ಯ ಅತಿಥಿಯಾಗಿ ಆಗಮಿಸಿ ವಿದ್ಯಾರ್ಥಿ / ವಿದ್ಯಾರ್ಥಿನಿಯರುಗಳಿಗೆ ವ್ಯಕ್ತಿತ್ವ ವಿಕಸನ ಹಾಗೂ ಕೌಶಲ್ಯಾಭಿವೃದ್ಧಿ ಬಗ್ಗೆ ತಿಳಿಸಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಕೆ.ಬಿ.ಶಶಿಧರ್‌ರವರು, ಮಾಜಿ ಖಜಾಂಚಿಗಳಾದ ಶ್ರೀ ಕೆ.ಬಿ.ರುದ್ರಪ್ಪನವರು, ಸಹ–ಕಾರ್ಯದರ್ಶಿಗಳಾದ ಶ್ರೀ ವೈ.ಎಸ್.ಸಿದ್ಧರಾಮೇಗೌಡ (ಸಿರಿ)ರವರು ಹಾಗೂ ಸಮಾಜ ಸೇವಕರಾದ ಶ್ರೀ ಹೆಚ್.ಆರ್.ಮಲ್ಲಿಕಾರ್ಜುನ್‌ರವರು ಭಾಗವಹಿಸಿದ್ದರು. ಸಂಘದ ವ್ಯವಸ್ಥಾಪಕರಾದ ಶ್ರೀ ಆರ್.ರಾಜಯ್ಯನವರು ಕಾರ್ಯಕ್ರಮದ ನಿರೂಪಣೆ ಮಾಡಿದರು.



ಕೆ.ಬಿ.ಶಶಿಧರ್ ಕಾಮನಕೆರೆ
ಗೌರವ ಕಾರ್ಯದರ್ಶಿ
ನೊಳಂಬ ಲಿಂಗಾಯತ
ಸಂಘ (ರಿ) ಬೆಂಗಳೂರು.

5. ನಮ್ಮ ಸಮಾಜದ ಮುಖಂಡರುಗಳಾದ ಹಾಗೂ ತಿಪಟೂರು ಶಾಸಕರಾದ ಶ್ರೀ ಕೆ.ಷಡಕ್ಷರಿರವರು ಹಾಗೂ ಮಾಜಿ ಸಚಿವರಾದ ಶ್ರೀ ಜೆ.ಸಿ.ಮಾಧುಸ್ವಾಮಿರವರು ಹಾಗೂ ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಸತತ ಪರಿಶ್ರಮದಿಂದ ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ಲಿಂಗದಹಳ್ಳಿ ಗ್ರಾಮದ 1 ಎಕರೆ ಗೋಮಾಳ ಜಮೀನನ್ನು ನೊಳಂಬ ಲಿಂಗಾಯತ ಸಂಘಕ್ಕೆ ವಿದ್ಯಾರ್ಥಿನಿಲಯ ನಿರ್ಮಾಣಕ್ಕಾಗಿ ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯನವರ ನೇತೃತ್ವದಲ್ಲಿ ನಡೆದ ರಾಜ್ಯ ಸಂಪುಟ ಸಭೆಯಲ್ಲಿ ಮಂಜೂರು ಮಾಡಿರುವುದು ನಮಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಸಂಘವು ಮಾನ್ಯ ಮುಖ್ಯಮಂತ್ರಿಗಳಿಗೆ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತಿದೆ.

6. ತುರುವೇಕೆರೆ ಸಮುದಾಯಭವನದ ಆವರಣದಲ್ಲಿ ದೇವಾಲಯ ನಿರ್ಮಾಣಕ್ಕಾಗಿ ತುರುವೇಕೆರೆ ಶಾಸಕರಾದ ಶ್ರೀ ಎಂ.ಪಿ.ಕೃಷ್ಣಪ್ಪನವರು ತಮ್ಮ ಶಾಸಕರ ಅನುದಾನದಿಂದ ನಮ್ಮ ಸಂಘಕ್ಕೆ 35 ಲಕ್ಷ ರೂ.ಗಳನ್ನು ಮಂಜೂರು ಮಾಡಿಸಿರುತ್ತಾರೆ. ಅವರಿಗೆ ನಮ್ಮ ಸಂಘದ ಪರವಾಗಿ ಸಂಘವು ಅಭಿನಂದನೆಗಳನ್ನು ಸಲ್ಲಿಸುತ್ತದೆ.

7. ಕಡೂರಿನಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಸಮುದಾಯಭವನದ ನಿರ್ಮಾಣ ಕಾರ್ಯವು ತ್ವರಿತಗತಿಯಲ್ಲಿ ನಡೆಯುತ್ತಿದೆ.

8. ಸಂಘದ ಅಧ್ಯಕ್ಷರಾದ ಶ್ರೀ ಬಿ.ಕೆ.ಚಂದ್ರಶೇಖರ್‌ರವರ ಸಮ್ಮುಖದಲ್ಲಿ ಸಂಘದ ಅಭಿವೃದ್ಧಿ ಕಾರ್ಯಗಳು ಸುಲಲಿತವಾಗಿ ನಡೆಸಲು ಮಾಸಿಕ, ದ್ವೈಮಾಸಿಕ ಸಭೆಗಳನ್ನು ನಡೆಸಲಾಗುತ್ತಿದೆ.

ನೊಳಂಬವಾಣಿ

ಲಿಂಗಾಯತರು ಹಿಂದೂಗಳಲ್ಲವೇ !

ಲಿಂಗಾಯತರನ್ನೂ ಒಳಗೊಂಡಂತೆ ಭಾರತ ದೇಶ ವಾಸಿಗಳಾದ ಜೈನರು, ಬೌದ್ಧರು, ಸಿಕ್ಖರು, ಪಾರಸಿಕರು ಅಷ್ಟೇ ಏಕೆ ಮುಸಲ್ಮಾನರು, ಕ್ರೈಸ್ತರು ಮತ್ತಿನ್ಯಾರೇ ಆದರೂ ಎಲ್ಲರೂ ಹಿಂದೂಗಳೇ. ಹಿಂದೂಸ್ಥಾನದಲ್ಲಿ ನೆಲೆಸಿರುವವರೆಲ್ಲರೂ ಗಹಿಂದೂಗಳೇ ಆಗಿದ್ದಾರೆ.

'ಹಿಂದೂ' ಎಂಬ ಶಬ್ದ, ಧರ್ಮಸೂಚಕ ಪದವಲ್ಲ. 'ಸಿಂಧೂ' ನದಿಯಿಂದಾಚೆಯ ಭೂಭಾಗವೆಲ್ಲವನ್ನೂ ಪಾಶ್ಚಿಮಾತ್ಯ ಪರ್ಶಿಯನ್ ಆಕ್ರಮಣಕೋರರು ಹಿಂದೂಸ್ಥಾನವೆಂದು ಕರೆದರು. ಸಿಂಧೂ ಶಬ್ದ ಯವನರ ಬಾಯಲ್ಲಿ ಹಿಂದೂ ಆದುದರ ಫಲ, ಹಿಂದೂ ಶಬ್ದ ಧರ್ಮಸೂಚಕವಾಗಿ ಹಿಂದೂಧರ್ಮವೆಂದಾಯ್ತು. ಅಂದು ಸಿಂಧೂ ನದಿಯಿಂದಾಚೆಯಲ್ಲಿದ್ದದ್ದು 'ಸನಾತನ' ಧರ್ಮ. ಅಂದಿನ ಸನಾತನ ಧರ್ಮವೇ ಇಂದಿನ ಹಿಂದೂ ಧರ್ಮ.

ಹಿಂದೂ ಧರ್ಮ (ಸನಾತನ ಧರ್ಮ)ದ ಸಮಾಜೋಧಾರ್ಮಿಕ ನೀತಿ, ನ್ಯಾಯ, ಆಚಾರ, ವಿಚಾರ, ನಡೆನುಡಿಗಳ, ತತ್ವಸಿದ್ಧಾಂತಗಳ, ವೇದೋಪನಿಷತ್ತುಗಳ, ಮನುಶೃತಿ, ಸ್ಮೃತಿಗಳ, ರಾಮಾಯಣ ಮಹಾಭಾರತ ಗ್ರಂಥಗಳ, ಆಧಾರಿತ ಐದು ಸಮಾಜ ವ್ಯವಸ್ಥೆಗಳಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಮತ್ತು ದಲಿತಗಳ ಅಡಿಯಲ್ಲಿ ಬರುವ ಅಸಂಖ್ಯಾತ ಜಾತಿ ಪದ್ಧತಿಗಳಿಂದ ಕೂಡಿದ, ಬ್ರಹ್ಮ, ವಿಷ್ಣು, ಮಹೇಶ್ವರ ಎಂಬ ತ್ರಿಮೂರ್ತಿ ವಸಿಷ್ಠ ದೇವರುಗಳ ಮತ್ತು ಮೂವತ್ತು ಮೂರು ಕೋಟಿ ದೇವಾನುದೇವತೆಗಳ ಪರಿವಾರ ದೇವರುಗಳನ್ನು ಯಜ್ಞ ಯಾಗ ಹವನ ಹೋಮ ಮಜ್ಜನಾಭಿಷೇಕದ ಮುಖಾಂತರ ಪೂಜಿಸುವ ಇದಕ್ಕೆ ಪೂರಕವಾಗಿ ಧರ್ಮಸಿದ್ಧಾಂತ, ಪುನರ್ಜನ್ಮ ಸಿದ್ಧಾಂತ ಮತ್ತು ಮೋಕ್ಷ ಸಿದ್ಧಾಂತಗಳನ್ನು ಮಾನ್ಯ ಮಾಡುವ ಧರ್ಮಕ್ಕೆ ಹಿಂದೂ ಧರ್ಮ ಅಥವಾ ಸನಾತನ ಧರ್ಮ ಎಂದು, ಈ ಧರ್ಮವನ್ನು ನಂಬುವ ಮತ್ತು ಅನುಸರಿಸುವವರನ್ನು ಹಿಂದೂಗಳು ಎಂದು ಕರೆಯಲಾಗುತ್ತದೆ.

ಹಾಗಾದರೆ ಲಿಂಗಾಯತರು ಹಿಂದೂ ಧರ್ಮದ ಸಮಾಜೋಧಾರ್ಮಿಕ ವಿಧಿವಿಧಾನಗಳನ್ನು ನಂಬಿ, ಅನುಸರಿಸುವುದಿಲ್ಲವೇ ? ಇಲ್ಲವೆಂದಾದಲ್ಲಿ, ಲಿಂಗಾಯತರು ಅನುಸರಿಸಬೇಕಾದ ಸಾಮಾಜಿಕ, ಧಾರ್ಮಿಕ ವಿಧಿ ವಿಧಾನಗಳಾದರೂ ಯಾವುವು ?

ಶಕವರ್ಷ 12ನೇ ಶತಮಾನದ ಐದನೇ ದಶಕಕ್ಕೂ ಪೂರ್ವದಲ್ಲಿ ಈಗ ಲಿಂಗಾಯತರು ಎಂದೆನೆಸಿಕೊಳ್ಳುತ್ತಿರುವ ವರೆಲ್ಲರೂ ಹಿಂದೂಗಳೇ ಆಗಿದ್ದರು. ಬಸವಣ್ಣನೆಂಬೊಬ್ಬ ಮಹಾಮಹಿಮ, ಮೇಧಾವಿ, ಪ್ರಗತಿಪರ, ಸಮಾಜ ಸುಧಾರಕ ಲಿಂಗಾಯತ ಧರ್ಮ ಸ್ಥಾಪಿಸಿದ. ಬಸವಣ್ಣ ಹಿಂದೂ ಧರ್ಮದ ಸಮಾಜೋಧಾರ್ಮಿಕ ನೀತಿ, ನಿಯಮ, ತತ್ವಸಿದ್ಧಾಂತಗಳೆಲ್ಲವನ್ನೂ ಸಾರಾಸಗಟಾಗಿ ನಿರಾಕರಿಸಿದ. ಲಿಂಗಾಯತ ಧರ್ಮದ ಮುಖ್ಯ ನೀತಿ, ನಿಯಮ, ತತ್ವಸಿದ್ಧಾಂತಗಳಾದ ಮನುಷ್ಯರಾಗಿ ಹುಟ್ಟಿದವರೆಲ್ಲರೂ ಸರಿಸಮಾನರು, ಜಾತಿ, ಭೇದ, ಹೆಣ್ಣು–ಗಂಡು ಎಂಬ ಭೇದ, ಮೇಲು–ಕೀಳು ಭೇದ, ಬಡವ–ಶ್ರೀಮಂತ ಭೇದ, ಒಬ್ಬನೇ ದೇವರು, ಯಾರು ಬೇಕಾದರೂ ಯಾವ ಕೆಲಸವನ್ನಾದರೂ ಮಾಡಲು ಅರ್ಹರು. ಸತ್ಯ ಶುದ್ಧ ನ್ಯಾಯಯುತ ಕೆಲಸ ಮುಖ್ಯ. ದೇವರು ಗುಡಿಗಳಲ್ಲಿ ಇರುವುದಿಲ್ಲ, ಅವನನ್ನು ಪೂಜಿಸಲು ಪೂಜಾರಿಗಳ ಮಧ್ಯಸ್ಥಿಕೆ ಬೇಕಾಗಿಲ್ಲ. ದೇವರಿಗೆ ಯಾವ ರೂಪವೂ ಇರುವುದಿಲ್ಲ. ಶಕ್ತಿಶಾಲಿಯೂ, ಸರ್ವವ್ಯಾಪಿಯೂ, ಕಣ್ಣಿಗೆ ಕಾಣದವನೂ ಆದ ದೇವರನ್ನು ಇಷ್ಟಲಿಂಗ ರೂಪದಲ್ಲಿ ಯಾರು ಬೇಕಾದರೂ ಕೈಯಾರೆ ಪೂಜಿಸಿ ತಮ್ಮ ಕೊರಳಲ್ಲಿ ಕಟ್ಟಿಕೊಂಡು, ದೇಹವನ್ನೇ ದೇವಾಲಯವನ್ನಾಗಿಸಿಕೊಂಡು ನಿರಾಳವಾಗಿರುವುದು. ಇಷ್ಟಲಿಂಗ ಲಿಂಗಾಯತ ಧರ್ಮದ ದೇವರು. ಈ ಎಲ್ಲ ತತ್ವಗಳನ್ನು ನಂಬಿ ನಡೆದುಕೊಳ್ಳುವವರು ಲಿಂಗಾಯತರು.



ಚಂದ್ರಶೇಖರ ತಿ. ಚಿಂದಾಳ
ಅಧ್ಯಕ್ಷರು, ಶ್ರೀಗುರು ಸಿದ್ಧರಾಮೇಶ್ವರ ಜ್ಞಾನಪ್ರಸಾರ ಕೇಂದ್ರ, "ಬಸವ ಚೇತನ", ತೋಟದ ಮನೆ, ಸಿದ್ಧರಾಮನಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
ಮೊ : 6366052331, 9449115995

ಈಗ ಹೇಳಿ ನೀವು ಲಿಂಗಾಯತರೇ ಅಥವಾ ಹಿಂದೂಗಳೇ ನಿರ್ಧಾರ ನಿಮ್ಮದು. ಒಂದು ಅಂದಾಜಿನ ಪ್ರಕಾರ ಲಿಂಗಾಯತರು ಎಂದು ಹೇಳಿಕೊಳ್ಳುವವರಲ್ಲಿ ನೂರಕ್ಕೆ ತೊಬತ್ತೈದು ಜನ ಹಿಂದೂಗಳೇ ಆಗಿದ್ದಾರೆ. ಲೆಕ್ಕಕ್ಕೆ ಮಾತ್ರ ಇವರನ್ನು ಲಿಂಗಾಯತರು ಮತ್ತು ವೀರಶೈವರು ಎಂದು ಹೇಳಬಹುದು.

ಜಗತ್ತಿನ ಎಲ್ಲಾ ಹೆಣ್ಣುಗಳು ನಮಗೆ ತಾಯಂದಿರೆ

ವಿದ್ವತ್ ಇದ್ದರೂ ಬರವಣಿಗೆಯನ್ನು ಅಪರೂಪಕ್ಕೆ ಮಾಡುತ್ತ ವಾಙ್ಮಯದಿಂದಲೇ ತಮ್ಮ ಪ್ರತಿಭಾ ಶಕ್ತಿಯನ್ನು ಜನರಿಗೆ ಹಂಚುತ್ತಿದ್ದ ಕೆಲವು ಸಾಹಿತಿಗಳಿದ್ದಾರೆ. ಅಂತಹವರಲ್ಲಿ ಚಿತ್ರದುರ್ಗ ಭಾಗದ ಪ್ರೊಫೆಸರ್ ಶ್ರೀಶೈಲ ಆರಾಧ್ಯರು ಒಬ್ಬರು. ಶ್ರೀಯುತರನ್ನು ಎರಡು ಸಾವಿರದ ಐದನೇ ಇಸವಿಯಲ್ಲಿ ಭೇಟಿಯಾಗುವ ಸಂದರ್ಭ ಕೂಡಿಬಂದಿತ್ತು. ಆಗ ಜನಪದ ವೈದ್ಯರಿಗಾಗಿ ಚಿತ್ರದುರ್ಗ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡಿದ್ದೆನು. ಆ ಸಮಯದಲ್ಲಿ ಆರಾಧ್ಯರನ್ನು ಸಂದರ್ಶನ ಮಾಡಿ ನನ್ನ ಸಂಶೋಧನೆಯ ವಿಷಯವಾಗಿ ಚರ್ಚೆ ಮಾಡಿದ್ದೆನು. ಪ್ರಾಚೀನರ ಜ್ಞಾನವನ್ನು ಸಂಗ್ರಹಿಸಿ ಉಳಿಸುವ ಪ್ರಯತ್ನ ಮಾಡುತ್ತಿರುವ ನನ್ನ ಕಳಕಳಿಯನ್ನು ನೋಡಿ ಅವರಿಗೆ ಬಹಳ ಸಂತೋಷವಾಯಿತು.

ಇದುವರೆಗಿನ ಅಧ್ಯಯನದ ವೈಖರಿಯನ್ನು ಕಂಡು ಬೆನ್ನು ಚಪ್ಪರಿಸಿ "ನಿಮ್ಮಂತಹ ಯುವ ಸಂಶೋಧಕರು ಈ ಸಮಾಜಕ್ಕೆ ಬೇಕು. ನಿಮ್ಮೊಡನೆ ನಾವಿದ್ದೇವೆ" ಮೊದಲಾಗಿ ಉತ್ಸಾಹ ತುಂಬಿ, ಕಿರಿಯವನಾದ ನನ್ನೊಡನೆ ಉತ್ತಮ ಸ್ನೇಹವನ್ನು ಹೊಂದಿದ್ದರು. ತಮಗೆ ಮಾತಾಡಬೇಕು ಎನ್ನಿಸಿದಾಗ ಫೋನ್ ಮಾಡಿ ಪಂಪನಿಂದ ಚಂಪಾರವರೆಗೆ ಮಾತನಾಡುತ್ತಿದ್ದರು. ಹೀಗೆ ಸಂಭಾಷಣೆ ಮಾಡುವಾಗೊಮ್ಮೆ ದೇಶಿಯ ಬೀಜಗಳ ಬಗ್ಗೆ ಚರ್ಚೆ ಮಾಡುತ್ತಿರುವಾಗ "ತೀರ್ಥಹಳ್ಳಿ ಭಾಗದಲ್ಲಿ ಬಹಳಷ್ಟು ದೇಶಿಯ ಮಾವಿನ ತಳಿಗಳು ಇನ್ನೂ ಉಳಿದಿವೆ ಸರ್, ಬಯಲು ಜಿಲ್ಲೆಗಳಲ್ಲಿ ಈಗಾಗಲೇ ಕಡಿದು ನಾಶ ಮಾಡಿದ್ದಾರೆ" ಎಂದೆನು.

ಆಗವರು 'ಪಂಪ ಕವಿಯು ಆದಿಪುರಾಣದಲ್ಲಿ ಮಾವಿನ ಮರವನ್ನು "ತಳಿರುಗಳಲ್ಲಿ ನೀನೇ ಸುಂದರ, ಮೊಗ್ಗುಗಳಲ್ಲಿ ನೀನೇ ಚಲುವ, ಹೂಗಳಲ್ಲಿ ನೀನೇ ವಿಲಾಸಿ, ಮಿಡಿಗಾಯಿಗಳಲ್ಲಿ ನೀನೇ ಸೊಗಸುಗಾರ, ಮಾಗಿದ ಹಣ್ಣುಗಳಿಂದ ನೀನೇ ಭುವನಕ್ಕಾರಧ್ಯನು, ಮತ್ತೇನು ಎನ್ನೋಣ! ದುಂಬಿ, ಕೋಗಿಲೆ, ಗಿಳಿಗಳಿಗೆ ಪ್ರಿಯನಾದ ಚೂತರಾಜ (ಚೂತ=ಮಾವಿನ ಮರ), ಇತರ ವೃಕ್ಷಗಳು ನಿನ್ನಷ್ಟು ಸುಂದರವಾಗಿವೆಯೇ?" ಎಂದು ಹೊಗಳಿದ್ದಾನೆ[1]. ಮುಂದುವರೆದು ಅಲಂಕಾರ ಪ್ರಿಯಳೊಬ್ಬಳು ಮಿಡಿಗಾಯಿಗಳಿಗೆ ಮನಸೋತು ಅವುಗಳನ್ನು ಹಾರವಾಗಿ ಮಾಡಿಕೊಂಡು ಕೊರಳಲ್ಲಿ ಧರಿಸಿ ನಲಿದಳೆಂದು[2] ವರ್ಣನೆ ಮಾಡಿದ್ದಾನೆ ಕಣ್ರಿ' ಎಂದು ಮೂಲ ಪದ್ಯವನ್ನೆ ಹೇಳಿದ್ದರು. ಓದುಗರಿಗೆ ಅನುಕೂಲವಾಗಲೆಂದು ಇಲ್ಲಿ ಅನುವಾದವನ್ನು ಉಲ್ಲೇಖ ಮಾಡಿರುವೆನು. ಇರಲಿ, ಇದೇ ರೀತಿ ರನ್ನ, ನಾಗಚಂದ್ರ, ರಾಘವಾಂಕ, ಜನ್ನ ಮೊದಲಾದ ಕವಿಗಳ ಪದ್ಯಗಳನ್ನು ಸಂಭಾಷಣೆಯ ನಡುವೆಯೇ ಹೇಳಿಬಿಡುತ್ತಿದ್ದರು. ಈ ಬಗೆಯ ಪಾಂಡಿತ್ಯ ನನಗೆ ಬಹಳ ಇಷ್ಟವಾಗುತ್ತಿದ್ದ ಕಾರಣ, ಆರಾಧ್ಯರೊಡನೆ ಹೆಚ್ಚು ಸಮಯದವರೆಗೆ ಫೋನ್ ಸಂಭಾಷಣೆ ನಡೆಯುತಿತ್ತು.

ಹೀಗೆ ಸಾಹಿತ್ಯ ಸಂಭಾಷಣೆಯಲ್ಲಿ ಹಲವಾರು ಗಹನವಾದ ವಿಷಯಗಳು ಚರ್ಚೆ ಮಾಡಲ್ಪಟ್ಟಿವೆ. ಅಂಥವುಗಳಲ್ಲಿ ಒಂದನ್ನು ಪ್ರಸ್ತಾಪಿಸುತ್ತೇನೆ. ಶ್ರೀಶೈಲ ಆರಾಧ್ಯರು ಇದು 'ಮುರುಘರಾಜೇಂದ್ರ ವಿಜಯ' (ಲೇಖಕರು: ಜಿ.ಎಚ್.ಮುಳಗುಂದ ಹೊಸೂರ, 1940)ದಲ್ಲೂ ದಾಖಲಾಗಿದೆ ಎಂದಿದ್ದರು.

ಅವರು ಹೇಳಿರುವ ಘಟನೆ 'ಮೊದಲೆಲ್ಲಾ ಚಿತ್ರದುರ್ಗದ ಮುರುಘಾ ಮಠದಲ್ಲೇ ದಸರಾ ಉತ್ಸವ ನಡೆಯುತಿತ್ತು. ಆ ವೇಳೆ ಮುರುಘಾಮಠದ ಪೀಠಾಧಿಪತಿಯಾಗಿದ್ದ ಶ್ರೀ ಜಯದೇವ ಜಗದ್ಗುರುಗಳ ತಾಯಿ ದಸರಾ ಸಮಾರಂಭಕ್ಕೆ ಬಂದಿದ್ದಾರೆ. ಎಲ್ಲರಂತೆ ದಾಸೋಹ ಪಂಕ್ತಿಯಲ್ಲಿ ಊಟಕ್ಕೆ ಕುಳಿತಿದ್ದಾರೆ. ಬಡತನದ ಕಾರಣವಾಗಿ ಅವರ ತಾಯಿ ಉಟ್ಟಿದ್ದ ಸೀರೆಯಲ್ಲಾ ಅಲ್ಲಲ್ಲಿ ಹರಿದು ಹೋಗಿದೆ. ಆ ಸಮಯದಲ್ಲಿ ಮಠದ ಕಾರುಬಾರಿಯಾಗಿ ಉಸ್ತುವಾರಿ ನೋಡಿ ಕೊಳ್ಳುತಿದ್ದವರು ಸಿದ್ದರಾಮಪ್ಪ ಎನ್ನುವವರು. ಈತ ಊಟಕ್ಕೆ ಕುಳಿತಿದ್ದ ಗುರುಗಳ ತಾಯಿಯನ್ನು ನೋಡಿ "ಅವ್ವಾ ಯಾವಾಗ ಬಂದ್ರಿ?''ಎಂದು ಕೇಳಿದ್ದಾರೆ. "ಮೊನ್ನೆ ಬಂದೆ ಕಣಪ್ಪ" ಎಂದ್ರಂತೆ. "ಕಾಣಲೇ ಇಲ್ಲವಲ್ಲ ಅಮ್ಮೋರೆ" ಎಂದಿದ್ದಾರೆ. "ಇಲ್ಲೇ ನಮ್ಮ ಊರಿನವರ ಜೊತೆ ಇದ್ದೆ"



ಡಾ॥ ಹಾಲಪ್ಪ ಹೆಚ್.ಕೆ.ಕುಂಟೆ
ಕನ್ನಡ ಉಪನ್ಯಾಸಕರು
ಸರ್ಕಾರಿ ಪದವಿ ಪೂರ್ವ ಕಾಲೇಜು
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ–577432
ಮೊ–9731190236

ಎಂದಾಗ "ಆಮೇಲೆ ಬಂದ್ಹೋಗಿ ತಾಯಿ" ಎಂದು ಹೇಳಿದ್ದಾರೆ. ಪ್ರಸಾದ ಸೇವನೆಯ ನಂತರ ಗುರುಗಳ ತಾಯಿ ಮಠದ ಕಾರುಬಾರಿಯಾದ ಸಿದ್ದರಾಮಪ್ಪ ರನ್ನು ಕಂಡಿದ್ದಾರೆ. ಕಾರುಬಾರಿ "ಏನಮ್ಮ ಸೀರೆ, ರವಿಕೆಯಲ್ಲಾ ತಾತಾ ತೂತಾಗಿ ಹರಿದು ಹೋಗಿದ್ದಾವೆ. ಯಾಕವ್ವ ಹಿಂಗಾಗಿದೆ?" ಎಂದು ಕೇಳಿದಾಗ ಬುದ್ಧಿವಂತ ಮಗ ಸ್ವಾಮಿ ಆಗಿಬಿಟ್ಟ, ಮನಿಗೆ ಬಡತನ ಬಂತು ಕಣಪ್ಪ" ಎಂದ್ರಂತೆ ಆ ತಾಯಿ.

ಸಿದ್ದರಾಮಪ್ಪರಿಗೆ ತಡೆದುಕೊಳ್ಳಕ್ಕಾಗದೆ ಕರುಳು ಚುರುಕ್ ಅಂದು "ಅವ್ವಾ ನಾಳೆ ಊರಿಗೆ ಹೋಗುವ ಮೊದಲು ನನ್ನ ನೋಡಿ ಹೋಗವ್ವ" ಅಂದಿದ್ದಾರೆ. ಆಮೇಲೆ ಸಿದ್ದರಾಮಪ್ಪನವರು ಎರಡು ಸೀರೆ, ಎರಡು ರವಿಕೆ ತರಿಸಿ ಇಟ್ಟಿದ್ರಂತೆ. ಊರಿಗೆ ಹೋಗುವಾಗ ಆ ತಾಯಿ ಬಂದಿದ್ದಾರೆ, ಇವರು ಅವನ್ನು ಕೊಟ್ಟು ಕಳುಹಿಸಿದ್ದಾರೆ. ದಸರಾ ಕಾರ್ಯಕ್ರಮವೆಲ್ಲಾ ಮುಗಿದ ಮೇಲೆ ಸಿದ್ದರಾಮಪ್ಪರು ಲೆಕ್ಕಪತ್ರ ಬರೆದಿದ್ದಾರೆ. ಜಯದೇವಸ್ವಾಮಿಗಳು ಖರ್ಚುವೆಚ್ಚದ ಲೆಕ್ಕಪತ್ರ ಪರಿಶೀಲಿಸುವಾಗ ಎರಡು ಸೀರೆ, ಎರಡು ರವಿಕೆ ಖರೀದಿಸಿರುವುದನ್ನು ಗಮನಿಸಿ "ವಿರಕ್ತಮಠದಲ್ಲಿ ಎರಡು ಸೀರೆ, ಎರಡು ರವಿಕೆ ಯಾರಿಗೆ ಹೋಯ್ತು ಕಾರುಬಾರಿಗಳೇ?" ಎಂದು ಪ್ರಶ್ನಿಸಿದ್ದಾರೆ.

ಆಗ ಸಿದ್ದರಾಮಪ್ಪನವರು "ಇಲ್ಲ ಬುದ್ಧಿ, ಪೂಜ್ಯರ ಪೂರ್ವಾಶ್ರಮದ ತಾಯಿ ಬಂದಿದ್ರು, ಅವರು ಉಟ್ಟಿದ್ದ ಸೀರೆ ಎಲ್ಲಾ ತೂತು ಬಿದ್ದು ಹರಿದು ಹೋಗಿತ್ತು. ಯಾಕಮ್ಮ ಹಿಂಗೆ ಅಂದ್ರೆ 'ಬುದ್ಧಿವಂತ ಮಗ ಸಂನ್ಯಾಸಿ ಆಗಿಬಿಟ್ಟ, ಮನಿಗೆ ಬಡತನ ಬಂತು ಕಣಪ್ಪ' ಅಂದರು, ನನ್ನ ಕರುಳು ಚುರುಕ್ ಅಂದು ಕೊಡಿಸಿದೆ ಬುದ್ದಿ" ಎಂದ್ರಂತೆ.

ಸ್ವಾಮಿಗಳು "ಗೊತ್ತಿಲ್ಲವೆ ಕಾರುಬಾರಿಗಳೆ, ನಾವು ಯಾವಾಗ ದಂಡಕಮಂಡಲ ಹಿಡಿದುಕೊಂಡೆವೋ ಅವತ್ತೇ ನಮ್ಮ ಪೂರ್ವಾಶ್ರಮದ ತಂದೆ ತಾಯಿ, ಬಂಧುಬಳಗದವರು ಸತ್ತು ಹೋಗಿಬಿಟ್ಟಂತೆ. ಜಗತ್ತಿನ ಎಲ್ಲಾ ಹೆಣ್ಣುಗಳು ನಮಗೀಗ ತಾಯಂದಿರೆ, ಹಾಗೇ ಜಗತ್ತಿನ ಎಲ್ಲಾ ಗಂಡಸರು ನಮಗೆ ತಂದೆಯವರೆ ಮತ್ತು ಜಗತ್ತಿನ ಎಲ್ಲಾ ಜನರೂ ನಮಗೆ ಬಂಧುಗಳೆ. ಹೀಗಾಗಿ ಎಷ್ಟು ಸೀರೆ, ಎಷ್ಟು ರವಿಕೆ, ಎಷ್ಟು ಅಂಗಿ ಪಂಚೆ ತರಿಸಿಕೊಡ್ತೀರಿ ಕಾರುಬಾರಿಗಳೇ? ಇದು ನಿಮ್ಮ ಅಪರಾಧವಾಗಿದೆ. ಇನ್ನೂ ಮುಂದೆ ಹೀಗಾಗಬಾರದು. ಇದರ ಹಣವನ್ನು ನಿಮ್ಮ ಸಂಬಳದಲ್ಲಿ ಕಟಾಯಿಸಿದ್ದೀವಿ" ಎಂದರಂತೆ.

ಇದು ಮುರುಘಾಮಠದ ಶ್ರೀ ಜಯದೇವ ಜಗದ್ಗುರುಗಳು. ಮಠ ಇವತ್ತು ಏಳಿಗೆ ಆಗಿದೆ ಅಂದರೆ ಇಂಥ ಶ್ರೀಗಳು ಕಾಸಿಗೆ ಕಾಸು ಕೂಡಿಸಿ ಮಠವನ್ನು ಕಟ್ಟಿದ್ದಾರೆ. ಅದಕ್ಕೆ ಸಿದ್ದಗಂಗಾದ ಶಿವಕುಮಾರಸ್ವಾಮಿಗಳು ಒಂದುಕಡೆ ಹೇಳ್ತಾರೆ "ಜಯದೇವರು ಗಳಿಸಿದರು, ಜಯವಿಭುವರು ಬೆಳಸಿದರು, ಮಲ್ಲಿಕಾರ್ಜುನರು ಉಳಿಸಿದರು, ಮುರುಘಾ ಶರಣರು ಬಳಸಿದರು" ಎಂದು. ಆ ದಿನ ತಾಯಿಗೆ ನೀಡಿದ ಸೀರೆ ರವಿಕೆಗಳ ಹಣವನ್ನು ಕಾರುಬಾರಿಗಳ ಸಂಬಳದಲ್ಲಿ ಕಟಾಯಿಸಲಾಗುವುದು ಎಂದು ಹೇಳಿ ಅದರಂತೆ ಮಾಡಲಾಯಿತು.

ಈ ಕಾರುಬಾರಿ ಎಂತಹ ವ್ಯಕ್ತಿ ಅಂದರೆ ಮಠದಲ್ಲಿ ಒಂದು ಗುಕ್ಕು ನೀರನ್ನೂ ಕುಡಿಯುದಂತಹ ಪ್ರಮಾಣಿಕನಾಗಿದ್ದನು. ಕಾರುಬಾರಿ ಸಿದ್ದರಾಮಪ್ಪನ ಊರು ಬುರುಜನಹಟ್ಟಿ. ಮನೆಯಿಂದ ಮಠಕ್ಕೆ ಬರುವಾಗಲೇ ತಿರುಪೆ ಚಂಬಿನಲ್ಲಿ ಕುಡಿಯುವ ನೀರನ್ನು ಜೊತೆಯಲ್ಲೇ ತಂದುಬಿಡೋನು. ಊಟ ಇರಲಿ ನೀರನ್ನೇ ಸೇವಿಸದಂತಹ ಸ್ವಾಭಿಮಾನಿ ವ್ರತಸ್ಥ. ಮಠದಲ್ಲಿ ದುಡಿದ ಇಂಥ ನಿಷ್ಠಾವಂತ ಅಧಿಕಾರಿಗಳು ಮತ್ತು ಜಯದೇವರಂತಹ ವಿರಕ್ತ ಸ್ವಾಮಿಗಳಿಂದಲೇ ಇಂದಿಗೂ ಮಠ ಮಂದಿರಗಳು ಅಲ್ಲಲ್ಲಿ ಉಳಿದುಕೊಂಡು ಬಂದಿವೆ. ಐಹಿಕ ಭೋಗಗಳಲ್ಲಿ ಮುಳುಗಿ ಹೋಗಿರುವ ಸ್ವಾಮೀಜಿಗಳು ಜಯದೇವ ಜಗದ್ಗುರುಗಳ ಸಂನ್ಯಾಸ ಪರಂಪರೆಯನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ. ವೈರಾಗ್ಯಮೂರ್ತಿಗಳಾದ ಶ್ರೀಗಳ ಸಂನ್ಯಾಸ ಧರ್ಮ ಮಾದರಿಯಾದುದೆ. ಹಾಗೆಯೇ ಸೀರೆ ರವಿಕೆಗಳಿಗಾಗಿ ದಂಡಕಟ್ಟಿದ ಸಿದ್ದರಾಮಪ್ಪನ ಮಾನವೀಯ ಮಿಡಿತವೂ ಹೆಮ್ಮೆ ಪಡುವ ಸಂಗತಿಯಲ್ಲವೆ! ಏಕೆಂದರೆ ಜಗತ್ತಿನಲ್ಲಿ ತಾಯಿಗಿಂತಲೂ ಮಿಗಿಲಾದದ್ದು ಯಾವುದೂ ಇಲ್ಲ. ಅದರಂತೆ ಮಾನವೀಯತೆಗಿಂತಲೂ ಮಿಗಿಲಾದ ಧರ್ಮ ಯಾವುದೂ ಇರಲಾರದು!

ಟಿಪ್ಪಣಿ :

1. ಇದಕ್ಕೆ ಕಾರಣವೂ ಇದೆ, ಹಣ್ಣುಗಳ ರಾಜನೆಂದೆ ಮಾವಿನ ಹಣ್ಣಿಗೆ ಶ್ರೇಷ್ಠ ಸ್ಥಾನವನ್ನು ನೀಡಲಾಗಿದೆ. ವೃಕ್ಷದ ಸೌಂದರ್ಯದ ಜೊತೆಗೆ ಅದು ಔಷಧಿಯ ಗುಣವನ್ನೂ ಹೊಂದಿದೆ.
2. ಮಹಾಕವಿ ಪಂಪ, 1980. ಆದಿಪುರಾಣ, ಪುಟ–452

ಬಸವ ಸಂವಿಧಾನದಲ್ಲಿ ಕಾಯಕ ಮತ್ತು ಸಮೃದ್ಧತೆ

ಈಗಾಗಲೆ ಪ್ರತೀತವಾಗಿರುವಂತೆ ಬಸವ ಪ್ರಣಾಳಿಕೆಯಲ್ಲಿ ಕಾಯಕಕ್ಕೆ ಪ್ರಾಥಮಿಕ ಪ್ರಥಮ ಸ್ಥಾನವಿದೆ. ಕಾಯಕಕ್ಕೆ ಇಲ್ಲಿ ದುಡಿಮೆ ಎಂಬ ಅರ್ಥವಿದ್ದರೂ ಅದು ಅದನ್ನು ಮೀರಿದ ಒಂದು ಪರಿಭಾವನೆಯಾಗಿದೆ. ಕಾಯಕವನ್ನು ಆಧ್ಯಾತ್ಮದ ನೆಲೆಗೆ ಒಯ್ದ ಕೀರ್ತಿ ಬಸವ ಸಂವಿಧಾನಕ್ಕೆ ಸಲ್ಲಬೇಕು. ವಚನ ಪ್ರಣಾಳಿಕೆಯಲ್ಲಿ ಕಾಯಕದಿಂದ ಯಾರಿಗೂ ಬಿಡುಗಡೆಯಿಲ್ಲ. ಆಯ್ದಕ್ಕಿ ಮಾರಯ್ಯನವರು ಲೋಕಪ್ರಸಿದ್ಧ **"ಕಾಯಕವೇ ಕೈಲಾಸ"** ಎಂಬ ಸೂತ್ರವನ್ನು ಪ್ರತಿಪಾದಿಸಿದ್ದಲ್ಲದೆ ಅವರು ಗುರುಲಿಂಗಜಂಗಮಗಳಿಗೂ ಮೊದಲು ಕಾಯಕ ಎನ್ನುತ್ತಾರೆ.

ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದಡೂ ಮರೆಯಬೇಕು
ಲಿಂಗ ಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು
ಕಾಯಕವೇ ಕೈಲಾಸವಾದ ಕಾರಣ
ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು

ಗುರುಲಿಂಗಜಂಗಮಗಳು **"ಕಾಯಕದೊಳಗೆ"** ಇರುತ್ತವೆಯೇ ವಿನಾ ಅವಕ್ಕೆ ಸ್ವತಂತ್ರ ಅಸ್ತಿತ್ವವಿಲ್ಲ. ಇದು ಇಲ್ಲಿನ ಸೂತ್ರ. ಕಾಯಕವನ್ನು ಬಿಟ್ಟು ಅವುಗಳಿಗೆ ಯಾವ ಅರ್ಥವೂ ಇಲ್ಲ, ಅಸ್ತಿತ್ವವೂ ಇಲ್ಲ. ಕಾಯಕ ಮೊದಲು, ನಂತರ ಗುರುಲಿಂಗಜಂಗಮ. ಅಮರೇಶ್ವರಲಿಂಗವಾದರೂ ಸಹ ಕಾಯಕದಿಂದ ಅದರ ಅಸ್ತಿತ್ವ. ನುಲಿಯಚೆಂದಯ್ಯನವರು ಇನ್ನೂ ಮುಂದೆ ಹೋಗಿ ಗುರುಲಿಂಗಜಂಗಮಗಳಿಗೂ ಕಾಯಕದಿಂದ ವಿನಾಯಿತಿಯಿಲ್ಲ ಎನ್ನುತ್ತಾರೆ.

ಗುರುಲಿಂಗಜಂಗಮಗಳು 'ಚರಸೇವೆ'ಯ ಮಾಡಬೇಕು ಎನ್ನುತ್ತಾರೆ ಚಂದಯ್ಯನವರು. ಕಾಯಕದಿಂದಲೇ ಗುರುವಿಗೆ ಜೀವನ್ಮುಕ್ತಿ ದೊರೆಯುತ್ತದೆ.

ಗುರುವಾದಡೂ ಕಾಯಕದಿಂದವೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದವೇ ವೇಷದ ಪಾಶ ಹರಿವುದು
ಗುರುವಾದಡೂ ಚರಸೇವೆಯ ಮಾಡಬೇಕು
ಲಿಂಗವಾದಡೂ ಚರಸೇವೆಯ ಮಾಡಬೇಕು
ಜಂಗಮವಾದಡೂ ಚರಸೇವೆಯ ಮಾಡಬೇಕು
ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು



ಪ್ರೊ. ಟಿ.ಆರ್.ಚಂದ್ರಶೇಖರ
ವಿಶ್ರಾಂತ ಪ್ರಾಧ್ಯಾಪಕ, 2ನೆ ಮೇನ್, 4ನೆಯ ಕ್ರಾಸ್, ಬೇಗೂರು ಮುಖ್ಯರಸ್ತೆ. ಹೊಂಗಸಂದ್ರ–560 068, ಬೆಂಗಳೂರು.

ಚಂದಯ್ಯನವರ ಪ್ರಕಾರ ಕಾಯಕವೇ ಆಧ್ಯಾತ್ಮ. ಚಂದೇಶ್ವರ ಲಿಂಗವನ್ನು ಅರಿವುದಕ್ಕೆ ಕಾಯಕವೇ ಸಾಧನ. ಅಕ್ಕಮ್ಮ ಎನ್ನುವ ವಚನಕಾರ್ತಿಯು ಕಾಯಕದ ನಂತರವೇ ಗುರುದರ್ಶನ, ಜಂಗಮಸೇವೆ ಎನ್ನುತ್ತಾಳೆ.

ತಾ ಮಾಡುವ ಕೃಷಿಯ ಮಾಡುವನ್ನಬರ ಮಾಡಿ
ಕೃಷಿ ತೀರಿದ ಮತ್ತೆ ಗುರುದರ್ಶನ, ಲಿಂಗಪೂಜೆ, ಜಂಗಮಸೇವೆ
ಶಿವಭಕ್ತರ ಸುಖಸಂಭಾಷಣೆ ಶರಣರ ಸಂಗ
ಈ ನೇಮವನರಿವುತ್ತಿಪ್ಪುದು ಸದ್ಭಕ್ತನ ಸದಾತ್ಮನ ಯುಕ್ತಿ
ಆಚಾರವೇ ಪ್ರಾಣವಾದ ರಾಮೇಶ್ವರಲಿಂಗಕ್ಕೆ ಆತನೇ ಚೇತನಭಾವ

ಈಕೆಯ ಪ್ರಕಾರ ಗುರುಲಿಂಗಜಂಗಮಗಳಿಗಿಂತ ಮೊದಲು ಕಾಯಕ(ಕೃಷಿ). ಇದು ನೇಮ, ಇದು ಸೂತ್ರ. ಹೀಗೆ ವಚನ ಸಂವಿಧಾನದಲ್ಲಿ ಕಾಯಕಕ್ಕೆ ಮೊದಲ–ಪ್ರಾಥಮಿಕ ಸ್ಥಾನ ನೀಡಲಾಗಿದೆ. ಕಾಯಕ ತೀರಿದ ಮೇಲೆಯೇ ಗುರುಲಿಂಗಜಂಗಮ.

ಅಂಕಿತಗಳಲ್ಲಿ ಕಾಯಕಕ್ಕೆ ಸ್ಥಾನ

ಕಾಯಕಕ್ಕೆ ಬಸವ ಸಂವಿಧಾನದಲ್ಲಿ ಎಷ್ಟು ಮಹತ್ವ ನೀಡಲಾಗಿತ್ತು ಎನ್ನುವುದಕ್ಕೆ ಶಿವಶರಣರ ಅಂಕಿತಗಳ ಜೊತೆಯಲ್ಲಿ ಕಾಯಕವನ್ನು ಪೂರ್ವಪದವಾಗಿ ಜೋಡಿಸಿರುವುದು ಸಾಕ್ಷಿಯಾಗಿದೆ. ಅಂಕಿತಗಳಲ್ಲಿ ತಮ್ಮ ದೈವಕ್ಕಿಂತ ಮೊದಲು ಕಾಯಕಕ್ಕೆ ಸ್ಥಾನ ನೀಡಲಾಗಿದೆ. ಮಹಿಳಾ ವಚನಕಾರ್ತಿಯರಲ್ಲಿಯೂ ಇದನ್ನು ಕಾಣಬಹುದು. ಉದಾ: ಆಯ್ದಕ್ಕಿ ಲಕ್ಕಮ್ಮ, ಕದಿರ ಕಾಯಕದ ಕಾಳವ್ವೆ, ಕನ್ನಡಿ ಕಾಯಕದ ರೇಮಮ್ಮ, ಕೊಟ್ಟಣದ ಸೋಮಮ್ಮ, ಕಾಲಕಣ್ಣಿಯ ಕಾಮಮ್ಮ ಇತ್ಯಾದಿ. ಲಕ್ಕಮ್ಮನ ಕಾಯಕ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಆರಿಸಿಕೊಳ್ಳುವುದು. ಕಾಳವ್ವೆಯ ಕಾಯಕ ನೇಯ್ಗೆ.

ಇದೇ ರೀತಿಯಲ್ಲಿ ಶರಣರ ಅಂಕಿತಗಳ

ಪೂರ್ವಪದವಾಗಿ ಕಾಯಕದ ಹೆಸರುಗಳು ಇರುವುದನ್ನು ಕಾಣಬಹುದು. ಡೋಹರ ಕಕ್ಕಯ್ಯ, ಜೇಡರ ದಾಸಿಮಯ್ಯ, ಆಯ್ದಕ್ಕಿ ಮಾರಯ್ಯ, ಅಗ್ಘವಣಿಯ ಹಂಪಯ್ಯ, ಒಕ್ಕಲಿಗ ಮುದ್ದಣ್ಣ, ಕನ್ನದ ಮಾರಿತಂದೆ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಿದೇವ, ಲದ್ದಿಯ ಸೋಮಯ್ಯ, ಮೇದರ ಕೇತಯ್ಯ ಇತ್ಯಾದಿ.

ಒಕ್ಕಲಿಗ ಮುದ್ದಣ್ಣನವರು ಹಾರುವರ, ಕ್ಷತ್ರಿಯರ, ವೈಶ್ಯರ ಕಾಯಕಗಳನ್ನು ಕೀಳಾಗಿಸಿ, ಅಂದರೆ ಅವು ನಮಗೆ ಸಂಬಂಧಿಸಿದವಲ್ಲ ಎಂದು, ತನ್ನನ್ನು ತಾನು "ಉಳುವ ಒಕ್ಕಲ ಮಗ" ಎಂದು ಕರೆದುಕೊಳ್ಳುತ್ತಾರೆ. ಚಾತುರ್ವರ್ಣ ವ್ಯವಸ್ಥೆಯಲ್ಲಿನ ವರ್ಣ ವಿಭಜನೆಯನ್ನು ಪ್ರಶ್ನೆ ಮಾಡುತ್ತಿದ್ದಾರೆ. ಹಾರುವರ, ಕ್ಷತ್ರಿಯರ ಮತ್ತು ವೈಶ್ಯರ ವೃತ್ತಿಗಳಿಗಿಂತ 'ಉಳುವ ಒಕ್ಕಲುತನ' ಹೆಚ್ಚಿನದಾಗಿದೆ ಎಂಬುದನ್ನು ತಮ್ಮ ವಚನದಲ್ಲಿ ಪ್ರತಿಪಾದಿಸಿದ್ದಾರೆ.

ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ
ಇರಿದು ಮೆರೆಯುವುದಕ್ಕೆ ಕ್ಷತ್ರಿಯನಲ್ಲ
ವ್ಯವಹರಿಸುವದಕ್ಕೆ ವೈಶ್ಯನಲ್ಲ
ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಕೊಳ್ಳಯ್ಯಾ
ಕಾಮಭೀಮಜೀವಧನದೊಡೆಯ

ಮುದ್ದಣ್ಣನಿಗೆ ತನ್ನನ್ನು ತಾನು ಒಕ್ಕಲಮಗ ಎಂದು ಹೇಳಿಕೊಳ್ಳಲು ಹೆಮ್ಮೆಯಿದೆ. ತನ್ನನ್ನು ಚಾತುರ್ವರ್ಣದ ಶೂದ್ರ ವರ್ಣಕ್ಕೆ ಸೇರಿಸಿಕೊಳ್ಳುವುದಿಲ್ಲ. ತನ್ನದು ಒಕ್ಕಲುತನ ಧರ್ಮ ಎನ್ನುತ್ತಿದ್ದಾನೆ. ಹಾಗೆ ಕರೆದುಕೊಳ್ಳುವುದರಲ್ಲಿ ಅವನಿಗೆ ಅಭಿಮಾನವಿದೆ. ತನ್ನನ್ನು ಹಾರುವ ಅಥವಾ ಕ್ಷತ್ರಿಯ ಅಥವಾ ವೈಶ್ಯ ವರ್ಣಗಳಿಗೆ ಸೇರಿಸುವುದಿಲ್ಲ.

ಬಸವ ಸಂವಿಧಾನದಲ್ಲಿ ಕಾಯಕಕ್ಕೆ ಯಾಕೆ ಮಹತ್ವದ ಸ್ಥಾನ ನೀಡಲಾಗಿದೆ ?

ವೈದಿಕ ಸಂಸ್ಕೃತಿಯಲ್ಲಿ ದುಡಿಮೆ – ಕಾಯಕ – ಶ್ರಮ ಇವು ಮಹತ್ವದ ಸಂಗತಿಗಳಲ್ಲ. ಧಾರ್ಮಿಕ ಆಚರಣೆಗಳಿಗೆ ಅಲ್ಲಿ ಮಹತ್ವವಿತ್ತೇ ವಿನಾ ಕಾಯಕಕ್ಕೆ ಮಹತ್ವದ ಸ್ಥಾನವಿರಲಿಲ್ಲ. ಅಲ್ಲಿ ದುಡಿಮೆಯನ್ನು ಮೈಲಿಗೆ ಎಂದು ಪರಿಗಣಿಸಲಾಗಿತ್ತು. ಚಾತುರ್ವರ್ಣ ವ್ಯವಸ್ಥೆಯು "ಕುಳಿತುಣ್ಣುವ ಸಂಸ್ಕೃತಿ"ಯಾಗಿತ್ತು. ಸಿದ್ಧರಾಮಣ್ಣನವರು 'ಮಾಡಿದ' ಕಾಯಕದಿಂದ ಜ್ಞಾನ ಪ್ರಾಪ್ತಿಯಾಗುತ್ತದೆ ವಿನಾ 'ಮಾಡಿಸುವ' ಕ್ರಿಯೆಯಿಂದ ಅದನ್ನು ಗಳಿಸುವುದು ಸಾಧ್ಯವಿಲ್ಲ ಎನ್ನುತ್ತಾರೆ.

ಮಾಡಿದ ಕಾರ್ಯದಿಂದ ಜ್ಞಾನ ಸಾಧನೆಯಾಗಬೇಕು
ಮಾಡಿದ ಕಾರ್ಯದಿಂದ ಸತ್ಪುರುಷರ
ಹರ್ಷ ನಿರ್ಭರವಾಗಬೇಕು
ಮಾಡಿದ ಕಾರ್ಯದಿಂದ ಪ್ರಮಥರು ಅಹುದಹುದೆನಬೇಕು
ಅದು ಕಾರಣ ಮಾಡಿಸಿ ಜ್ಞಾನಪ್ರಾಪ್ತಿಯಾಗಲಿಲ್ಲ
ಮಾಡಿಸಿ ಪ್ರಮಥರ ಮನೋಹ್ಲಾದವಾಗಲಿಲ್ಲ
ಕಪಿಲಸಿದ್ಧಮಲ್ಲಿಕಾರ್ಜುನನ ಸಾಕ್ಷಾತ್ಕಾರವಾಗಲಿಲ್ಲ

ಈ ವಚನದಲ್ಲಿ ಸಿದ್ಧರಾಮಣ್ಣನವರು 'ಮಾಡುವ' ಮತ್ತು ಮಾಡಿಸುವ' ಕ್ರಿಯೆಯಗಳ ನಡುವಿನ ಭಿನ್ನತೆಯನ್ನು ಗುರುತಿಸುತ್ತಿದ್ದಾರೆ. ಮಾಡುವ ಕ್ರಿಯೆಯಿಂದ ಫಲ ಬರುತ್ತದೆ. ಮಾಡಿಸುವ ಕ್ರಿಯೆಯಿಂದ ಜ್ಞಾನವನ್ನು ಗಳಿಸುವುದು ಸಾಧ್ಯವಿಲ್ಲ. ಮಾಡಿಸುವ ಕಾಯಕದಿಂದ ಕಪಿಲಸಿದ್ಧ ಮಲ್ಲಿಕಾರ್ಜುನನ 'ಸಾಕ್ಷಾತಾರ'ವು ದೊರೆಯುವುದಿಲ್ಲ.

ಮನವಿ


ನೊಳಂಬ ಅರಸರ ರಾಜ್ಯಭಾರ, ನೊಳಂಬ ಸಮುದಾಯದ ಮಠಗಳು, ಸಾಹಿತ್ಯ, ಇತಿಹಾಸ, ಕೃಷಿ, ಭಾಷೆ, ಬದುಕು, ಸಂಸ್ಕೃತಿ, ಸಾಂಸ್ಕೃತಿಕ ಚಟುವಟಿಕೆ, ವಾಸ್ತು ಶಿಲ್ಪಗಳ ಬಗ್ಗೆ ಅಧ್ಯಯನ ಮತ್ತು ಸಂಶೋಧನೆ ಮಾಡಲು ನೊಳಂಬ ಲಿಂಗಾಯತ ಸಂಘದಿಂದ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ನೊಳಂಬ ಸಂಸ್ಕೃತಿ ಅಧ್ಯಯನ ಪೀಠವನ್ನು ಸ್ಥಾಪಿಸಿದ್ದು, ಅಧ್ಯಯನಕ್ಕಾಗಿ ಬರುವ ಅಭ್ಯರ್ಥಿ/ಸಂಶೋಧಕರುಗಳಿಗೆ ಸೌಲಭ್ಯ ಕಲ್ಪಿಸಲು ಹಣದ ಕೊರತೆ ತುಂಬಾ ಇರುವುದರಿಂದ ದಾನಿಗಳಾದ ತಾವು ವಂತಿಗೆ ನೀಡಲು ಬಯಸಿದ್ದಲ್ಲಿ ಈ ಕೆಳಕಂಡ ಬ್ಯಾಂಕಿಗೆ ಹಣವನ್ನು ವರ್ಗಾವಣೆ ಮಾಡಲು ಮನವಿ ಮಾಡುತ್ತೇನೆ.

ಹೆಸರು	**: ನೊಳಂಬ ಲಿಂಗಾಯತ ಸಂಘ (ರಿ.)**
ಬ್ಯಾಂಕ್	**: ಎಸ್.ಬಿ.ಐ. ಬಸವೇಶ್ವರನಗರ**
ಖಾತೆ ಸಂಖ್ಯೆ	**: 54033145493**
ಐ.ಎಫ್.ಎಸ್.ಸಿ.	**: SBIN0040624**

ಹೊಸ ಪುಸ್ತಕ ಓದು

ನೊಳಂಬ ಲಿಂಗಾಯತ ಸಮುದಾಯದ ಸಮಗ್ರ ಅಧ್ಯಯನ

ಪುಸ್ತಕದ ಹೆಸರು : ನೊಳಂಬ ಲಿಂಗಾಯತರು
ಲೇಖಕರು : ಡಾ. ಡಿ.ಎನ್.ಯೋಗೀಶ್ವರಪ್ಪ
ಪ್ರಕಾಶಕರು : ಶ್ರೀ ಗುರು ಸಿದ್ಧರಾಮೇಶ್ವರ ಸಾಹಿತ್ಯ ಸಂಪದ, ತುಮಕೂರು–2025
ಲೇಖಕರ ಸಂಪರ್ಕವಾಣಿ : 9448680920





ಡಾ. ಡಿ.ಎನ್.ಯೋಗೀಶ್ವರಪ್ಪ ಅವರು ನಮ್ಮ ದಿನಮಾನದ ಅಪರೂಪದ ಸಂಶೋಧಕರು. ಅವರು ಏನೇ ಮಾಡಲಿ ಹೊಸದನ್ನೇ ಮಾಡುತ್ತಾರೆ, ಇತರರಿಗೆ ಮಾದರಿಯಾಗುವ ರೀತಿಯಲ್ಲಿ ಮಾಡುತ್ತಾರೆ, ಇತರ ಜಿಲ್ಲೆಗಳಿಗೆ ಆದರ್ಶ ಅನುಕರಣೀಯವಾಗುವ ರೀತಿಯಲ್ಲಿ ಈಗಾಗಲೇ 'ತುಮಕೂರು ಜಿಲ್ಲೆಯ ಸಾಹಿತ್ಯ ಚರಿತ್ರೆ' ಮತ್ತು 'ಕಲ್ಪಹಾಸ' (ತುಮಕೂರು ಜಿಲ್ಲೆಯ ಪ್ರಾಚೀನ ಇತಿಹಾಸ ಸಂಪುಟ) ರಚಿಸಿದ್ದಾರೆ. ಪ್ರಸ್ತುತ 'ನೊಳಂಬ ಲಿಂಗಾಯತ' ಸಮುದಾಯವನ್ನು ಕುರಿತು ಸಮಗ್ರವಾದ ಅಧ್ಯಯನ ಕೈಕೊಂಡು 'ನೊಳಂಬ ಲಿಂಗಾಯತರು' ಕೃತಿಯನ್ನು ರಚಿಸುವ ಮೂಲಕ ಇತರ ಸಮುದಾಯಗಳ ಸಮಾಜೋಧಾರ್ಮಿಕ, ಸಾಂಸ್ಕೃತಿಕ ಅಧ್ಯಯನವನ್ನು ಹೇಗೆ ಮಾಡಬೇಕೆಂಬುದಕ್ಕೆ ಒಂದು ಮಾದರಿಯನ್ನು ಒದಗಿಸಿಕೊಟ್ಟಿದ್ದಾರೆ.

12ನೇ ಶತಮಾನದಲ್ಲಿ ಬಸವಾದಿ ಶಿವಶರಣರು ಜಾತಿವ್ಯವಸ್ಥೆಯ ವಿರುದ್ಧ ಹೋರಾಡಿ, ಲಿಂಗಾಯತ ಎಂಬ ಸ್ವತಂತ್ರಧರ್ಮವನ್ನು ಸ್ಥಾಪಿಸಿದರು. ಉಳಿದ ಜಾಗತಿಕ ಧರ್ಮಗಳಂತೆ ಲಿಂಗಾಯತವು ಒಬ್ಬ ಪ್ರವಾದಿಯಿಂದ ಹುಟ್ಟಿದ್ದಲ್ಲ, ಕಾಯಕ ಜೀವಿಗಳ ಚಳುವಳಿಯಿಂದ ಸಾಮೂಹಿಕ ಪ್ರಯತ್ನದಲ್ಲಿ ಈ ಲಿಂಗಾಯತ ಧರ್ಮ ಅಸ್ತಿತ್ವಕ್ಕೆ ಬಂದಿತು. ಬಸವಣ್ಣನವರು ಈ ಧರ್ಮ ಸಾಂಸ್ಥಿಕ ರೂಪದಲ್ಲಿ ಸದಾ ಜೀವಂತವಾಗಿರಲೆಂದು ಅನುಭವ ಮಂಟಪ ಮತ್ತು ಶೂನ್ಯಪೀಠವನ್ನು ಅಸ್ತಿತ್ವಕ್ಕೆ ತಂದರು. ಈ ಶೂನ್ಯಪೀಠಕ್ಕೆ ಕೆಳವರ್ಗದಲ್ಲಿ ಜನಿಸಿದ, ಆದರೆ ಅನುಭಾವದಲ್ಲಿ ಗೌರಿಶಂಕರದೆತ್ತರ ಬೆಳೆದಿದ್ದ ಭಾರತೀಯ ದಾರ್ಶನಿಕರಲ್ಲಿಯೇ ಅದ್ವಿತೀಯವೆನಿಸಿದ ಅಲ್ಲಮಪ್ರಭುದೇವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಅಲ್ಲಮ ಪ್ರಭುದೇವರು ಶ್ರೀಶೈಲಕ್ಕೆ ಹೋದ ನಂತರ, ಈ ಶೂನ್ಯಪೀಠವನ್ನು ಅಲಂಕರಿಸಿದವರು ಅವಿರಳಜ್ಞಾನಿ ಚನ್ನಬಸವಣ್ಣನವರು. ಅವರೂ ಕೂಡ ಶರಣ ಸಂದೋಹವನ್ನು ಕರೆದುಕೊಂಡು ಉಳವಿಯೆಡೆ ಪ್ರಯಾಣ ಮಾಡುವ ದುರ್ದರ ಪ್ರಸಂಗ ಬಂದಾಗ, ಈ ಶೂನ್ಯಪೀಠವನ್ನು ಅಲಂಕರಿಸಿದವರು ಶಿವಯೋಗಿ ಸಿದ್ಧರಾಮೇಶ್ವರರು. ಶೂನ್ಯಪೀಠಾಧ್ಯಕ್ಷರಾದ ಸಿದ್ಧರಾಮ ಶಿವಯೋಗಿಗಳು ಲೋಕ ಸಂಚಾರ ಮಾಡಿ, ಸಮಾಜ ಕಟ್ಟುವ ಕಾರ್ಯವನ್ನು ಅತ್ಯಂತ ವ್ಯಾಪಕವಾಗಿ ಮಾಡಿದರು. ತುಮಕೂರು ಜಿಲ್ಲೆಯಲ್ಲಿ ಶ್ರೀ ಸಿದ್ಧರಾಮೇಶ್ವರರು ಸುತ್ತಾಡಿ, ಅಲ್ಲೊಂದು ಸಮಾಜವನ್ನೇ ನಿರ್ಮಾಣ ಮಾಡಿದರು. ಹೀಗಾಗಿ ತುಮಕೂರು ಜಿಲ್ಲೆಯಲ್ಲಿ ಇಂದು ಅತಿ ಹೆಚ್ಚು ಸಿದ್ಧರಾಮೇಶ್ವರರ ತೋರುಗದ್ದಿಗೆಗಳಿರುವುದನ್ನು ಗಮನಿಸಬಹುದು. ಇಂತಹ ಪ್ರಾತಃಸ್ಮರಣೀಯ ಶಿವಶರಣರ ಸಿದ್ಧರಾಮ ಶಿವಯೋಗಿಗಳ ಭಕ್ತರೆನಿಸಿಕೊಂಡ ನೊಳಂಬ ಲಿಂಗಾಯತರು ಕರ್ನಾಟಕದ ಒಂಬತ್ತು ಜಿಲ್ಲೆಗಳಲ್ಲಿ ವ್ಯಾಪಕವಾಗಿ ತಮ್ಮ ಅಸ್ತಿತ್ವವನ್ನು ಇಂದಿಗೂ ಉಳಿಸಿಕೊಂಡಿದ್ದಾರೆ.



ಪ್ರಕಾಶ ಗಿರಿಮಲ್ಲನವರ
ಬೆಳಗಾವಿ
ಮೊ: 9902130041

ಬಸವಪೂರ್ವದಿಂದಲೂ ಇತಿಹಾಸವುಳ್ಳ ನೊಳಂಬ ಲಿಂಗಾಯತ ಸಮುದಾಯದ ಒಂದು ಸಮಗ್ರ ಅಧ್ಯಯನವನ್ನು ಡಾ. ಡಿ.ಎನ್.ಯೋಗೀಶ್ವರಪ್ಪ ಅವರು ಅತ್ಯಂತ ವಾಸ್ತವನೆಲೆಯಲ್ಲಿ ಪೂರ್ಣಗೊಳಿಸಿ, ಪ್ರಸ್ತುತ 'ನೊಳಂಬ ಲಿಂಗಾಯತರು' ಕೃತಿಯಲ್ಲಿ ಮೌಲಿಕವಾಗಿ ಕಟ್ಟಿಕೊಟ್ಟಿದ್ದಾರೆ. ಸಾಂಸ್ಕೃತಿಕ ಅಧ್ಯಯನವು ಸಮಾಜದ ಬದುಕಿನ ಸೂಕ್ಷ್ಮ ಆಯಾಮಗಳನ್ನು

ಅರಿಯುವ ಪ್ರಮುಖ ಅಧ್ಯಯನ ಕ್ಷೇತ್ರವಾಗಿ ರೂಪುಗೊಂಡಿದೆ. ಆರಂಭಿಕ ಹಂತದಲ್ಲಿ ಸಾಹಿತ್ಯ, ಕಲೆ, ಧರ್ಮ, ಸಂಪ್ರದಾಯಗಳಂತಹ 'ಉನ್ನತ ಸಂಸ್ಕೃತಿ'ಯ ಅಧ್ಯಯನಕ್ಕೆ ಸೀಮಿತವಾಗಿದ್ದ ಈ ಕ್ಷೇತ್ರ, 1980ರ ದಶಕದ ನಂತರ ಹೊಸ ದಿಕ್ಕುಗಳನ್ನು ಪಡೆದುಕೊಂಡಿತು. ಈ ಕಾಲಘಟ್ಟದಲ್ಲಿ ಸಾಂಸ್ಕೃತಿಕ ಅಧ್ಯಯನ ಪರಂಪರೆಯ ಮಾದರಿ ಮೂಲಭೂತ ಬದಲಾವಣೆಗಳನ್ನು ಕಂಡು, ಸಮಾಜದ ಅಂಚಿನಲ್ಲಿದ್ದ ವಿಷಯಗಳನ್ನೂ ಅಧ್ಯಯನದ ಕೇಂದ್ರಕ್ಕೆ ತರುವ ಪ್ರಯತ್ನ ನಡೆಯಿತು.

ಸಾಂಸ್ಕೃತಿಕ ಅಧ್ಯಯನದ ಪರಂಪರೆಯ ಮೊದಲ ಹಂತದಲ್ಲಿ ಸಂಸ್ಕೃತಿಯನ್ನು ಸ್ಥಿರವಾದ, ಏಕಮುಖಿ ಅಂಶವಾಗಿ ನೋಡಲಾಗುತ್ತಿತ್ತು. ಚರಿತ್ರೆ ಎನ್ನುವುದು ಕೇವಲ ರಾಜಕೀಯ ಘಟನೆಗಳು, ಆಡಳಿತಗಾರರ ಸಾಧನೆಗಳು ಮತ್ತು ಪ್ರಭುತ್ವದ ಕಥನಗಳ ಮೂಲಕ ನಿರೂಪಿಸಲ್ಪಟ್ಟಿತು. ಇದರ ಪರಿಣಾಮವಾಗಿ ಸಾಮಾನ್ಯ ಜನರ ಬದುಕು, ಅವರ ಶ್ರಮ, ನಂಬಿಕೆಗಳು, ಆಚರಣೆಗಳು ಮತ್ತು ದೈನಂದಿನ ಅನುಭವಗಳು ಇತಿಹಾಸದ ದಾಖಲೆಗಳಲ್ಲಿ ಅಪ್ರಮುಖವಾಗಿ ಉಳಿದವು. ಈ ಏಕಮುಖ ಅಧ್ಯಯನ ಮಾದರಿ ಸಂಸ್ಕೃತಿಯ ಜೀವಂತತೆ ಮತ್ತು ವೈವಿಧ್ಯತೆಯನ್ನು ಹಿಡಿದಿಡಲು ಅಸಮರ್ಥವಾಗಿತ್ತು.

ಆದರೆ 1980ರ ನಂತರ ಸಾಂಸ್ಕೃತಿಕ ಅಧ್ಯಯನವು ಅಂತರ್ಶಾಸ್ತ್ರೀಯ ಸ್ವರೂಪವನ್ನು ಪಡೆದುಕೊಂಡಿತು. ಸಮಾಜಶಾಸ್ತ್ರ, ಮಾನವಶಾಸ್ತ್ರ ರಾಜಕೀಯ ಶಾಸ್ತ್ರ, ಲಿಂಗ ಅಧ್ಯಯನ, ಮಾಧ್ಯಮ ಅಧ್ಯಯನಗಳೊಂದಿಗೆ ಸಂವಾದ ಸಾಧಿಸುವ ಮೂಲಕ ಸಂಸ್ಕೃತಿಯನ್ನು ಚಲನೆಯಲ್ಲಿರುವ, ಅಧಿಕಾರ ಸಂಬಂಧಗಳಿಂದ ರೂಪುಗೊಳ್ಳುವ ಪ್ರಕ್ರಿಯೆಯಾಗಿ ಅರ್ಥಮಾಡಿಕೊಳ್ಳಲಾಯಿತು. ಇದರಿಂದ ಅಧ್ಯಯನ ಕ್ಷೇತ್ರದಲ್ಲಿ ಯಾವುದೇ ತಾರತಮ್ಯವಿಲ್ಲದೆ, ಹಿಂದೆ ಅಮುಖ್ಯವೆಂದು, ಕ್ಷುದ್ರವೆಂದು ಪರಿಗಣಿಸಲ್ಪಟ್ಟ ವಿಷಯಗಳು ಸಂಶೋಧನೆಯ ವ್ಯಾಪ್ತಿಗೆ ಒಳಪಟ್ಟವು.

ಈ ಹೊಸ ಪರಂಪರೆಯ ಮಾದರಿಯಲ್ಲಿ ಚರಿತ್ರೆಯನ್ನು ಮರು ವಿನ್ಯಾಸಗೊಳಿಸುವ ಪ್ರಯತ್ನಗಳು ಪ್ರಮುಖವಾಗಿದ್ದವು. ಸಂಸ್ಕೃತಿ ಎನ್ನುವುದು ಕೇವಲ ಆಚರಣೆಗಳ ಗುಚ್ಛವಲ್ಲ, ಅದು ಸಾಂಸ್ಕೃತಿಕ ಅಸ್ಮಿತೆ, ಜಾತಿ ಕುರಿತ ನಂಬಿಕೆಗಳು, ಲಿಂಗ ರಾಜಕಾರಣದ ವಿನ್ಯಾಸಗಳು, ಶ್ರಮಸಂಸ್ಕೃತಿಯೊಳಗಿನ ವರ್ಗೀಯ ಅಸಮಾನತೆಗಳೊಂದಿಗೆ ಆಳವಾಗಿ ಸಂಬಂಧಿಸಿದೆ ಎಂಬ ಅರಿವು ಮೂಡಿತು. ಇದರ ಪರಿಣಾಮವಾಗಿ ಉಪಸಂಸ್ಕೃತಿ, ಪ್ರತಿಸಂಸ್ಕೃತಿ, ಜನಪ್ರಿಯ ಸಂಸ್ಕೃತಿ, ಮಾಧ್ಯಮ ಸಂಸ್ಕೃತಿ ಇತ್ಯಾದಿಗಳ ಓದುಗಳು ಪ್ರಾಮುಖ್ಯತೆ ಪಡೆದವು.

ಕರ್ನಾಟಕದ ಸಂದರ್ಭದಲ್ಲಿ ಈ ಸಾಂಸ್ಕೃತಿಕ ಅಧ್ಯಯನ ಪರಂಪರೆಯ ಮಾದರಿ ವಿಶೇಷ ಮಹತ್ವವನ್ನು ಪಡೆದಿದೆ. ವಿವಿಧ ಭಾಷೆಗಳು, ಜಾತಿಗಳು, ಧಾರ್ಮಿಕ ನಂಬಿಕೆಗಳು, ಪ್ರಾದೇಶಿಕ ಆಚರಣೆಗಳಿಂದ ಕೂಡಿದ ಕರ್ನಾಟಕದ ಸಮಾಜವನ್ನು ಅರ್ಥಮಾಡಿಕೊಳ್ಳಲು ಏಕಮುಖಿ ಅಧ್ಯಯನ ಸಾಕಾಗುವುದಿಲ್ಲ.

ಸಾಂಸ್ಕೃತಿಕ ಅಧ್ಯಯನ ಪರಂಪರೆಯ ಮಾದರಿ ಸ್ಥಿರತೆಯಿಂದ ಚಲನೆಯತ್ತ, ಏಕಮುಖತೆಯಿಂದ ವೈವಿಧ್ಯತೆಯತ್ತ ಸಾಗಿರುವ ಬದಲಾವಣೆಯ ಪ್ರತೀಕವಾಗಿದೆ. ಇದು ಸಂಸ್ಕೃತಿಯನ್ನು ಅಧಿಕಾರ, ಅಸಮಾನತೆ ಮತ್ತು ಪ್ರತಿರೋಧಗಳ ಸಂಕೀರ್ಣ ಜಾಲವಾಗಿ ನೋಡಿ, ಸಮಾಜವನ್ನು ಆಳವಾಗಿ ಅರ್ಥಮಾಡಿಕೊಳ್ಳುವ ಬೌದ್ಧಿಕ ಸಾಧನವಾಗಿ ರೂಪುಗೊಂಡಿದೆ. ಇಂತಹ ಅಧ್ಯಯನ ಪರಂಪರೆ ಸಮಕಾಲೀನ ಸಮಾಜದ ವಾಸ್ತವಿಕತೆಯನ್ನು ಗ್ರಹಿಸಲು ಅತ್ಯಂತ ಅಗತ್ಯವಾದ ಮಾರ್ಗವಾಗುತ್ತದೆ.

ಈ ಅಧ್ಯಯನ ಪರಂಪರೆಯ ಹಿನ್ನೆಲೆಯಲ್ಲಿ ಡಾ. ಯೋಗೀಶ್ವರಪ್ಪ ಅವರು ನೊಳಂಬ ಲಿಂಗಾಯತರು ಎಂಬ ಕೃತಿಯಲ್ಲಿ ಸಮಗ್ರವಾದ ಅಧ್ಯಯನವನ್ನು ಮಾಡಿ, ಈ ಸಮಾಜದ ಒಟ್ಟು ನೋಟವನ್ನು ವರ್ತಮಾನದ ಪರಿಪ್ರೇಕ್ಷ್ಯದಲ್ಲಿಟ್ಟು ವಿಶ್ಲೇಷಿಸಿದ್ದಾರೆ.

ಈ ಕೃತಿಯನ್ನು ರಚಿಸುವ ಔಚಿತ್ಯವೇನಿತ್ತು? ಎಂಬುದನ್ನು ಲೇಖಕರ ಮಾತಿನಲ್ಲಿ ಡಾ. ಯೋಗೀಶ್ವರಪ್ಪ ಅವರು ತುಂಬ ಚೆನ್ನಾಗಿ ವಿವರಿಸಿದ್ದಾರೆ– **"ಕರ್ನಾಟಕದಲ್ಲಿ** ಬಸವಣ್ಣನವರ ಕಾಲದಲ್ಲಿ ಬಹುತೇಕ ಪಂಗಡಗಳು ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದವು. ಆದರೆ ಅವುಗಳಲ್ಲಿ ಕೆಲ ಪಂಗಡಗಳು ಕ್ರಮೇಣ ಲಿಂಗಾಯತದಿಂದ ವಿಮುಖವಾದವು. ಇತ್ತೀಚಿನ ದಿನಗಳಲ್ಲಿ ಸರ್ಕಾರದ ಮೀಸಲಾತಿಯ ಲಾಭವನ್ನು ಪಡೆಯುವ ಉದ್ದೇಶದಿಂದ ತಮ್ಮ ಮತಾಂತರ ಪೂರ್ವದ ಜಾತಿಯ ಹೆಸರನ್ನೇ ಬಳಸುತ್ತಾ ಲಿಂಗಾಯತ ಧರ್ಮದಿಂದ ಹೊರನಡೆಯುತ್ತಿರುವುದನ್ನು ಕಾಣಬಹುದು. ಇನ್ನೂ ಕೆಲವರು ಆಸೆ ಆಮಿಷಗಳಿಗೆ ಬಲಿಯಾಗಿ ಇತರ ಧರ್ಮಗಳನ್ನು ಅಪ್ಪಿಕೊಳ್ಳುತ್ತಿರುವುದನ್ನು ಕಾಣುತ್ತೇವೆ. ಇವುಗಳನ್ನೆಲ್ಲಾ ಬಿಟ್ಟರೆ ಸರ್ಕಾರದ ದಾಖಲೆಯಲ್ಲಿ ಲಿಂಗಾಯತರಲ್ಲಿ ತೊಂಬತ್ತೆಂಟು ಒಳಪಂಗಡಗಳನ್ನು ಗುರುತಿಸಲಾಗಿದೆ" (ಲೇಖಕರ ಮಾತು ಪು. 1)

ಬಸವಾದಿ ಶಿವಶರಣರ ಜಾತ್ಯತೀತ ಧರ್ಮವನ್ನು ಅಪ್ಪಿ ಒಪ್ಪಿ ಬಂದಿದ್ದ ಅನೇಕ ಪಂಗಡಗಳು ಇಂದು ತಮ್ಮ ಪೂರ್ವದ ವಾಸನೆಯನ್ನು ಬಿಡದೆ, ಅತ್ತ ಪೂರ್ವ ಪರಂಪರೆಯನ್ನೂ ಇತ್ತ ಬಸವಾದಿ ಶಿವಶರಣರ ಆಚರಣೆಯನ್ನೂ ಆಚರಿಸುತ್ತ ಬರುತ್ತಿರುವುದನ್ನು ಕಾಣುತ್ತೇವೆ.

"ನೊಳಂಬ ಲಿಂಗಾಯತರು ಇಷ್ಟಲಿಂಗ ಧಾರಿಗಳಾಗಿ ಲಿಂಗಾಯತ ಸಂಸ್ಕೃತಿಯನ್ನು ಪ್ರಮುಖವಾಗಿ ಅನುಸರಿಸುತ್ತಿದ್ದರು. ಅವರು ತಮ್ಮ ಪರಂಪರಾನುಗತ ಮೂಲ ಸಂಸ್ಕೃತಿಯನ್ನು ಕೈಬಿಡದೆ ಮುಂದುವರಿಸಿಕೊಂಡು ಬರುತ್ತಿರುವುದು ವಿಶಿಷ್ಟವಾಗಿದೆ" ಎಂದು ಲೇಖಕರು ಹೇಳಿರುವುದನ್ನು ಗಮನಿಸಿದರೆ, ನೊಳಂಬ ಲಿಂಗಾಯತ ಸಮುದಾಯವು ಇಂದು ಎರಡೂ ರೀತಿಯ ಆಚರಣೆಗಳನ್ನು ಆಚರಿಸುತ್ತ ಸಮನ್ವಯ ಸಾಧಿಸಿದೆ ಎಂದು ಹೇಳಬಹುದು.

ಪ್ರಸ್ತುತ ಕೃತಿಯಲ್ಲಿ ಒಟ್ಟು ಐದು ಅಧ್ಯಾಯಗಳಿವೆ. ನೊಳಂಬ ಲಿಂಗಾಯತ ಸಮುದಾಯದ ಇತಿಹಾಸ ದರ್ಶನ ಸಮಾಜೋ ಧಾರ್ಮಿಕ ಜೀವನ ವಿವರಣೆ ಜೊತೆಗೆ ಸಮಗ್ರ ಲಿಂಗಾಯತ ಧರ್ಮ–ಸಮಾಜದ ಅನೇಕ ಮಹತ್ವದ ಸಂಗತಿಗಳ ಮೇಲೆ ಹೊಸ ಬೆಳಕು ಚೆಲ್ಲುವ ಪ್ರಯತ್ನ ಇಲ್ಲಿದೆ.

'ಲಿಂಗಾಯತ ಧರ್ಮದ ಸ್ಥಿತ್ಯಂತರ' ಎಂಬ ಮೊದಲ ಲೇಖನದಲ್ಲಿ ನೊಳಂಬರು ಬಸವಾದಿ ಪ್ರಮಥರ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿದ್ದವರು ಎಂಬುದರತ್ತ ಗಮನ ಸೆಳೆಯುತ್ತಾರೆ. ದಕ್ಷಿಣ ಭಾರತದ ಪ್ರಾಚೀನ ರಾಜವಂಶಗಳಲ್ಲಿ ನೊಳಂಬ ರಾಜಮನೆತನವು ವಿಶೇಷ ಸ್ಥಾನವನ್ನು ಹೊಂದಿದೆ. ಕರ್ನಾಟಕದ ಇತಿಹಾಸದಲ್ಲಿ ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ ವಂಶಗಳಲ್ಲಿ ನೊಳಂಬರು ಪ್ರಮುಖರು. ಶಾಸನಗಳು, ದೇವಾಲಯಗಳು ಹಾಗೂ ಸಾಹಿತ್ಯಿಕ ಉಲ್ಲೇಖಗಳ ಮೂಲಕ ಈ ವಂಶದ ಶಕ್ತಿ ಮತ್ತು ಪ್ರಭಾವವನ್ನು ಗುರುತಿಸಬಹುದು. ವಿಶೇಷವಾಗಿ ಗಂಗರು, ಪಲ್ಲವರು ಮತ್ತು ನಂತರದ ಚೋಳರ ಕಾಲಘಟ್ಟದ ನಡುವಿನ ಸಂಕ್ರಮಣ ಕಾಲದಲ್ಲಿ ನೊಳಂಬರು ಪ್ರಮುಖ ರಾಜಕೀಯ ಪಾತ್ರ ವಹಿಸಿದ್ದರು. ನೊಳಂಬ ರಾಜಮನೆತನವು ಕ್ರಿ.ಶ. 8ರಿಂದ 11ನೇ ಶತಮಾನಗಳ ಅವಧಿಯಲ್ಲಿ ದಕ್ಷಿಣ ಕರ್ನಾಟಕ ಮತ್ತು ಉತ್ತರ ತಮಿಳುನಾಡಿನ ಕೆಲವು ಭಾಗಗಳಲ್ಲಿ ಆಳ್ವಿಕೆ ನಡೆಸಿತು. ಇವರ ಮೂಲವನ್ನು ಕೆಲ ಇತಿಹಾಸಕಾರರು ಗಂಗ ವಂಶದ ಉಪಶಾಖೆಯೆಂದು ಪರಿಗಣಿಸುತ್ತಾರೆ. ನೊಳಂಬರ ಆಳ್ವಿಕೆಯ ಪ್ರಮುಖ ಕೇಂದ್ರವಾಗಿ ನೊಳಂಬವಾಡಿ ಪ್ರಸಿದ್ಧವಾಗಿತ್ತು.

ನೊಳಂಬರು ಪಲ್ಲವರ ಅಧೀನರಾಗಿದ್ದ ಕಾಲವೂ ಇದ್ದು, ನಂತರ ಸ್ವತಂತ್ರ ರಾಜರಾಗಿ ತಮಗೆ ತಾವು ಗುರುತಿಸಿಕೊಂಡರು. ಆದರೆ ಚೋಳರ ಶಕ್ತಿಯ ವೃದ್ಧಿಯೊಂದಿಗೆ ನೊಳಂಬರ ಸ್ವಾತಂತ್ರ್ಯ ಕ್ಷೀಣಿಸತೊಡಗಿತು. ಹಲವು ಯುದ್ಧಗಳು ಮತ್ತು ರಾಜಕೀಯ ಬದಲಾವಣೆಗಳ ಪರಿಣಾಮವಾಗಿ ನೊಳಂಬ ವಂಶವು ಕ್ರಮೇಣ ಇತಿಹಾಸದ ವೇದಿಕೆಯಿಂದ ಮರೆಯಾಗಿತು.

ನೊಳಂಬರ ಆಡಳಿತ ವ್ಯವಸ್ಥೆ ಸಂಘಟಿತವಾಗಿದ್ದು, ಶಾಸನಾಧಾರಿತ ಆಡಳಿತಕ್ಕೆ ಒತ್ತು ನೀಡಲಾಗುತ್ತಿತ್ತು. ರಾಜನು ಪರಮಾಧಿಕಾರಿಯಾಗಿದ್ದರೂ, ಸ್ಥಳೀಯ ಆಡಳಿತದಲ್ಲಿ ಗ್ರಾಮಸಭೆಗಳು ಮತ್ತು ಪ್ರಾದೇಶಿಕ ಅಧಿಕಾರಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದರು. ತೆರಿಗೆ ಸಂಗ್ರಹ, ಭೂಮಾಪನ ಮತ್ತು ದೇವಾಲಯಗಳಿಗೆ ದಾನ ನೀಡುವ ವ್ಯವಸ್ಥೆಗಳು ಸುಸಂಘಟಿತವಾಗಿದ್ದವು.

ನೊಳಂಬ ರಾಜಮನೆತನದ ಸಾಂಸ್ಕೃತಿಕ ಕೊಡುಗೆ ಗಮನಾರ್ಹವಾಗಿದೆ. ಇವರು ಶೈವ ಧರ್ಮಕ್ಕೆ ವಿಶೇಷ ಪೋಷಣೆ ನೀಡಿದರು. ಅನೇಕ ಶಿವಾಲಯಗಳ ನಿರ್ಮಾಣ, ವಿಸ್ತರಣೆ ಮತ್ತು ಪುನರ್ ನಿರ್ಮಾಣಕ್ಕೆ ನೊಳಂಬರು ಕಾರಣರಾದರು.

ಶಿಲ್ಪಕಲೆ ಮತ್ತು ವಾಸ್ತುಶಿಲ್ಪದಲ್ಲಿಯೂ ನೊಳಂಬರ ಪ್ರಭಾವ ಕಾಣುತ್ತದೆ. ಸರಳ ಆದರೆ ಸೌಂದರ್ಯಪೂರ್ಣ ದೇವಾಲಯ ವಿನ್ಯಾಸಗಳು ಅವರ ಕಾಲದ ಕಲೆಗಿರುವ ಗುರುತುಗಳಾಗಿವೆ. ಧರ್ಮ, ಕಲೆ ಮತ್ತು ಸಾಹಿತ್ಯಗಳ ಪೋಷಣೆಯ ಮೂಲಕ ನೊಳಂಬರು ತಮ್ಮ ಕಾಲಘಟ್ಟದ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸಿದರು. ನೊಳಂಬರು 12ನೇ ಶತಮಾನದಲ್ಲಿ ಸಿದ್ಧರಾಮೇಶ್ವರರ ಪ್ರಭಾವಕ್ಕೆ ಒಳಗಾಗಿ ಲಿಂಗಾಯತರಾಗಿ ಪರಿವರ್ತಿರಾದ ಇತಿಹಾಸವನ್ನು ರೋಚಕವಾಗಿ ಕಟ್ಟಿಕೊಟ್ಟಿದ್ದಾರೆ.

ಇದೇ ಲೇಖನದಲ್ಲಿ ಡಾ. ಯೋಗೀಶ್ವರಪ್ಪ ಅವರು ನೂರಿಪ್ಪತ್ತೈದು ವರ್ಷಗಳ ಕಾಲಘಟ್ಟದಲ್ಲಿ ಲಿಂಗಾಯತ ಸಮಾಜವು ಹೇಗೆಲ್ಲ ಸ್ಥಿತ್ಯಂತರಗೊಳಗಾಗಿದೆ ಎಂಬುದನ್ನು ತುಂಬ ಸಂಶೋಧನಾತ್ಮಕವಾಗಿ ಅನೇಕ ಘಟನೆಗಳನ್ನು ವಿವರಿಸುತ್ತ ತಿಳಿಸಿಕೊಟ್ಟಿದ್ದಾರೆ. 12ನೇ ಶತಮಾನದಲ್ಲಿ

ಸಂಪ್ರದಾಯವಾದಿಗಳ ಕಿರುಕುಳದಿಂದ ವಚನ ಸಾಹಿತ್ಯವನ್ನು ಉಳಿಸಿದ ಹೋರಾಟ, 15ನೇ ಶತಮಾನದಲ್ಲಿ ತೋಂಟದ ಸಿದ್ಧಲಿಂಗ ಯತಿಗಳು ಮಠ ಪರಂಪರೆಗೆ ಪುನರುಜ್ಜೀವನ ನೀಡಿದ ಘಟನೆಗಳು, ವಸಾಹತುಶಾಹಿಗಳ ಕಾಲದಲ್ಲಿ ಲಿಂಗಾಯತ ಸ್ಥಿತಿಗತಿ ಕುರಿತು ಡಾ. ಯೋಗೀಶ್ವರಪ್ಪ ಅವರು ಅನೇಕಾನೇಕ ಸಂಗತಿಗಳನ್ನು ಪ್ರಸ್ತಾಪಿಸಿ ಈ ಸಮಾಜ ಬೆಳೆದು ಬಂದ ಪರಿಯನ್ನು ವಿಶ್ಲೇಷಿಸಿದ್ದಾರೆ. ನಿಜಲಿಂಗಾಯತರು, ಪರಿವರ್ತಿತ ಲಿಂಗಾಯತರು, ಅರ್ಧ ಲಿಂಗಾಯತರು ಯಾರು ಎಂಬುದನ್ನು ಅತ್ಯಂತ ವಾಸ್ತವಿಕ ನೆಲೆಯಲ್ಲಿ ಕೋಷ್ಟಕದ ಮೂಲಕ ವಿವರಿಸಿದ್ದಾರೆ.

ಮೈಸೂರು ಭಾಗದಲ್ಲಿ ಲಿಂಗಾಯತ ಸಮುದಾಯವನ್ನು ಜನಗಣತಿ ಕಾಲಕ್ಕೆ ಶೂದ್ರ ಸಮೂಹಕ್ಕೆ ಸೇರಿಸಿದಾಗ, ಸಹಜವಾಗಿ ಲಿಂಗಾಯತ ಸಮಾಜದ ಹಿರಿಯರಿಗೆ ಸಿಟ್ಟು ಬಂದು, ಪ್ರತಿಭಟನೆಗೆ ಮುಂದಾದರು. ಆ ಸಂದರ್ಭದಲ್ಲಿ ಏನೆಲ್ಲ ಸ್ಥಿತ್ಯಂತರಗಳಾದವು ಎಂಬುದನ್ನು ಲೇಖಕರು ಮನೋಜ್ಞವಾಗಿ ತಿಳಿಸಿಕೊಟ್ಟಿದ್ದಾರೆ.

'ಲಿಂಗಾಯತದ ಒಳಪಂಗಡಗಳು' ಎರಡನೆಯ ಲೇಖನದಲ್ಲಿ ಲಿಂಗಾಯತ ಧರ್ಮದಲ್ಲಿ ಈ ಜಾತಿಗಳು ಹುಟ್ಟಿಕೊಂಡ ಬಗೆ, ಒಳಪಂಗಡಗಳಾಗಿ ನುಸುಳಿದ ಪರಿಯನ್ನು ಸಂಶೋಧನಾತ್ಮಕ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಒಟ್ಟು 98 ಉಪಪಂಗಡಗಳ ಪಟ್ಟಿಯನ್ನು ಇಲ್ಲಿ ನೀಡಿದ್ದಾರೆ. ಈ ಅಧ್ಯಾಯದಲ್ಲಿ ಗಮನ ಸೆಳೆಯುವ ಪ್ರಮುಖ ಸಂಗತಿಯೆಂದರೆ– 'ನೊಳಂಬರ ವಿರುದ್ಧ ಪಂಚಮಸಾಲಿಗಳ ದಾವೆ'. ಹಿರೇಕೇರೂರು ತಾಲೂಕು ಪುರದಕೇರಿಯಲ್ಲಿ ಪಂಚಮಸಾಲಿಗಳು ಮತ್ತು ನೊಳಂಬರು ಸಮನಾಗಿ ನೆಲೆಸಿದ್ದರು. ಆದರೆ ಬಸವೇಶ್ವರ ಜಾತ್ರೆ ಕಾಲಕ್ಕೆ ನೊಳಂಬರು ತಮ್ಮ ಗುರುಗಳಾದ ನಂದಿಗುಡಿಯ ಮಠದ ಸ್ವಾಮಿಗಳು ಕರೆಯಿಸಿ, ಮೆರವಣಿಗೆ ಮಾಡಿದರು. ಇದರಿಂದ ಸಿಟ್ಟಾದ ಪಂಚಮಸಾಲಿಗಳು ಹಾವೇರಿ ಕೋರ್ಟಿನಲ್ಲಿ ದಾವೆ ಹೂಡಿದರು. ನೊಳಂಬರು ಜಂಗಮತ್ವಕ್ಕೆ ಗುರುತ್ವಕ್ಕೆ ಅನರ್ಹರು. ಹೀಗಾಗಿ ಅವರ ಗುರುಗಳನ್ನು ಕರೆಯಿಸಿದ ಕಾರಣ ದೇವಸ್ಥಾನ ಅಪವಿತ್ರವಾಗಿದೆ, ಅದಕ್ಕಾಗಿ 600 ರೂಪಾಯಿಗಳನ್ನು ದಂಡವಾಗಿ ನೀಡಬೇಕೆಂದು ದಾವೆ ಹೂಡಿದರು. ಈ ವಿವಾದ ಬಹಳ ದಿನ ನಡೆದು, ಕೊನೆಗೆ ಕಾಶಿಯಲ್ಲಿ ವಿದ್ವಾಂಸರಾಗಿದ್ದ ಕರಿಬಸವರಾಜ ದೇಶಿಕೇಂದ್ರ ಸ್ವಾಮಿಗಳು ಸಂಸ್ಕೃತ ಗ್ರಂಥದ ಅನೇಕಾನೇಕ ಉದಾಹರಣೆಗಳನ್ನು ಹೇಳಿ, ಕೋರ್ಟಿನಲ್ಲಿ ನೊಳಂಬ ಸಮಾಜಕ್ಕೆ ನ್ಯಾಯ ದೊರಕಿಸಿಕೊಟ್ಟರು. ಜಾತಿಯಿಂದ ಜಂಗಮತ್ವ ಬರುವುದಿಲ್ಲ, ಸಾಧನೆಯಿಂದ ಯಾರು ಬೇಕಾದರೂ ಜಂಗಮರಾಗಬಹುದು ಎಂಬುದನ್ನು ಕರಿಬಸವರಾಜ ದೇಶಿಕೇಂದ್ರ ಸ್ವಾಮಿಗಳು ಕೋರ್ಟಿನಲ್ಲಿ ವಾದ ಮಾಡಿ, ನ್ಯಾಯ ದೊರಕಿಸಿದರು. ಇದೊಂದು ಮಹತ್ವದ ದಾಖಲೆ. ಈ ಘಟನೆಯನ್ನು ಲೇಖಕರು ವಿಸ್ತಾರವಾಗಿ ನೀಡಿ, ಆ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿ ಹೇಗಿತ್ತು? ಎಂಬುದರ ಮೇಲೆ ಬೆಳಕು ಚೆಲ್ಲುತ್ತಾರೆ.

ಮೂರನೆಯ ಅಧ್ಯಾಯ 'ನೊಳಂಬ ಲಿಂಗಾಯತರು' ತುಂಬ ವಿಸ್ತಾರವಾದ ಮತ್ತು ಮಹತ್ವದ ವಿಷಯಗಳನ್ನು ಒಳಗೊಂಡ ಅಧ್ಯಾಯವಾಗಿದೆ. ಕರ್ನಾಟಕದ ಒಂಬತ್ತು ಜಿಲ್ಲೆಗಳಲ್ಲಿ 1300 ಗ್ರಾಮಗಳಲ್ಲಿ ನೊಳಂಬರು ನೆಲೆಸಿದ್ದಾರೆ. ತುಮಕೂರು ಜಿಲ್ಲೆಯ ನೊಳಂಬ ಸಮುದಾಯವನ್ನು ಮುಖ್ಯವಾಗಿಟ್ಟುಕೊಂಡು ಈ ಅಧ್ಯಯನವನ್ನು ಮುಂದುವರಸಿದ್ದಾರೆ. ನೊಳಂಬ ಎಂಬ ಹೆಸರು ಈ ಜನಾಂಗಕ್ಕೆ ಹೇಗೆ ಬಂದಿತು? ನೊಳಂಬ ಲಿಂಗಾಯತರಲ್ಲಿನ ಪ್ರಭೇದಗಳು, ನೊಳಂಬರ ಸಂಸ್ಕೃತಿ ಕುರಿತು ಐತಿಹಾಸಿಕ ನೆಲೆಯಲ್ಲಿ ದಾಖಲಿಸಿದ್ದಾರೆ. ನೊಳಂಬರ ಸಾಂಸ್ಕೃತಿಕ ಅಧ್ಯಯನ ಪರಂಪರೆಯಲ್ಲಿ ದೇವತಾರಾಧನೆ, ನಾಗೊಲೆ ಶಾಸ್ತ್ರ, ನೊಳಂಬರ ಆಚರಣೆಗಳ ವೈವಿಧ್ಯಮಯ ಸಂಗತಿಗಳನ್ನು ಅತ್ಯಂತ ಸರಳವಾಗಿ ವಿವರಿಸಿದ್ದಾರೆ. ಮದುವೆ ಸಂಭ್ರಮವನ್ನು ನೊಳಂಬ ಲಿಂಗಾಯತರು ಆಚರಿಸುವ ವೈಶಿಷ್ಟ್ಯವನ್ನು ಲೇಖಕರು ತುಂಬ ಅರ್ಥಪೂರ್ಣವಾಗಿ ವಿಶ್ಲೇಷಿಸಿದ್ದಾರೆ.

ನಾಲ್ಕನೆಯ ಅಧ್ಯಾಯ 'ಸಮಾಜೋ ಆರ್ಥಿಕ ಅಧ್ಯಯನ' ನೊಳಂಬ ಸಮಾಜವು ಪ್ರಾಚೀನ ಕಾಲದಿಂದಲೂ ಕೃಷಿ ಅವಲಂಬಿತ ಸಮಾಜವಾಗಿತ್ತು. ಕಾಲಕ್ರಮದಲ್ಲಿ ಅನೇಕ ಬದಲಾವಣೆಗಳಾದರೂ ಇಂದಿಗೂ ಬಹಳಷ್ಟು ನೊಳಂಬ ಸಮುದಾಯದವರ ಮುಖ್ಯವೃತ್ತಿ ಕೃಷಿಯೇ ಆಗಿದೆ. ಸ್ವಾತಂತ್ರ್ಯಾನಂತರ ಆದ ಬೆಳವಣಿಗೆಗಳಿಂದ ನೊಳಂಬ ಸಮುದಾಯದ ವ್ಯಕ್ತಿಗಳು ರಾಜಕೀಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳು, ನೊಳಂಬ ಸಾಮಾಜಿಕ ಜೀವನ ಪದ್ಧತಿಗಳನ್ನು ಕುರಿತು ತಲಸ್ಪರ್ಶಿಯಾದ ಚಿಂತನೆಗಳನ್ನು ಮಾಡಿದ್ದಾರೆ. 'ನೊಳಂಬ ಇತಿಹಾಸ ಪರಿಷತ್ತು' ಸ್ಥಾಪಿಸಿ, ಆ ಮೂಲಕ ಸಿದ್ಧರಾಮೇಶ್ವರ ಜಯಂತಿಯನ್ನು 1936ರಿಂದಲೂ ಆಚರಿಸಿಕೊಂಡು ಬಂದ ಇತಿಹಾಸ ಇಲ್ಲಿದೆ.

'ನೊಳಂಬ ಲಿಂಗಾಯತ ಸಂಘ' ಈ ಕೃತಿಯ ಐದನೆಯ ಮತ್ತು ಕೊನೆಯ ಲೇಖನ. ಯಾವುದೇ ಒಂದು ಜಾತಿ ಜಾಗತೀಕರಣದ ದಿನಮಾನದಲ್ಲಿ ತನ್ನ ಅಸ್ತಿತ್ವ

ಉಳಿಸಿಕೊಳ್ಳಬೇಕಾದರೆ ಸಂಘಟಿತವಾಗಿರಬೇಕಾದುದು ತುಂಬ ಮುಖ್ಯ. ಈ ಹಿನ್ನೆಲೆಯಲ್ಲಿ ನೊಳಂಬ ಲಿಂಗಾಯತ ಸಮುದಾಯ ಸಂಘವನ್ನು ಅಸ್ತಿತ್ವವಕ್ಕೆ ತರುವ ಮೂಲಕ ತಮ್ಮ ಜನಾಂಗದವರಿಗೆ ಉಪಯೋಗವಾಗುವ ಕಾರ್ಯಕ್ರಮಗಳನ್ನು ಚಟುವಟಿಕೆಗಳನ್ನು ನೆರವೇರಿಸುತ್ತ ಬಂದಿದ್ದಾರೆ.

ನೊಳಂಬ ಲಿಂಗಾಯತ ಸಮುದಾಯದಲ್ಲಿ ಜನಿಸಿದ ಅನೇಕ ಮಹನೀಯರು ಸಾಹಿತ್ಯಲೋಕಕ್ಕೆ ನೀಡಿದ ಕೊಡುಗೆಯನ್ನು ಸಂಕ್ಷಿಪ್ತವಾಗಿಯಾದರೂ ಸಮಗ್ರವಾಗಿ ಚಿತ್ರಿಸಿದ್ದಾರೆ. ಪಿ.ಲಂಕೇಶ್, ಕೆ.ಮರುಳಸಿದ್ಧಪ್ಪ, ಕೆ.ಆರ್.ಲಿಂಗಪ್ಪ, ಎಂ.ಎಸ್.ಬಸವರಾಜಯ್ಯ, ಸಿ.ಎಚ್.ಮರಿದೇವರು, ಕೆ.ಆರ್.ಬಸವರಾಜು, ಹೀ.ಚಿ.ಶಾಂತವೀರಯ್ಯ, ಡಿ.ಸಿದ್ಧಗಂಗಯ್ಯ, ಟಿ.ಆರ್.ಚಂದ್ರಶೇಖರ, ಪ್ರೊ. ಚನ್ನಬಸವಯ್ಯ ವೈ.ಆರ್., ಡಾ. ರಾಕೇಶ್ ಬಿ.ಸಿ. ಮೊದಲಾದ ಹಿರಿಯ ವಿದ್ವಾಂಸರು ಕನ್ನಡ ಸಾರಸ್ವತ ಪ್ರಪಂಚಕ್ಕೆ ಕೊಟ್ಟ ಕಾಣಿಕೆಯನ್ನು ತಿಳಿಸಿಕೊಟ್ಟಿದ್ದಾರೆ. ಹಾಗೆಯೇ ಚಲನಚಿತ್ರ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ನೊಳಂಬ ಸಮಾಜದ ವ್ಯಕ್ತಿಗಳು ಸಾಧಿಸಿದ ಸಾಧನೆಯ ಮಜಲುಗಳನ್ನು ವಿವರಿಸಿದ್ದಾರೆ.

ಸಮೃದ್ಧ ಅನುಬಂಧಗಳು, ಆಕರ ಗ್ರಂಥಗಳಿಂದ ಕೃತಿ ಪರಿಪೂರ್ಣವಾಗಿ ರೂಪುಗೊಂಡಿದೆ. ಡಾ. ಯೋಗೀಶ್ವರಪ್ಪ ಅವರು ಮೂಲತಃ ಇತಿಹಾಸ ಸಂಶೋಧಕರು. ಇತಿಹಾಸದ ಹಿನ್ನೆಲೆಯಲ್ಲಿಯೇ ಸಮುದಾಯದ ಎಲ್ಲ ಅಂಶಗಳನ್ನು ತುಂಬ ಗಂಭೀರವಾಗಿ ತಮ್ಮ ಅಧ್ಯಯನ ಕಕ್ಷೆಯಲ್ಲಿ ಶೋಧಿಸಿ, ವಾಸ್ತವ ಅಂಶಗಳನ್ನು ನೇರ ನಿಷ್ಠುರವಾಗಿ ದಾಖಲಿಸಿದ್ದಾರೆ. ಸತ್ಯ ಸಂಗತಿಗಳನ್ನು ತಿಳಿಸಿ, ಆ ಸಮಾಜದ ನಿಜವಾದ ಇತಿಹಾಸವನ್ನು ಕಟ್ಟಿಕೊಟ್ಟಿದ್ದಾರೆ. ಹೀಗಾಗಿ ಉಳಿದ ಸಮುದಾಯಗಳ ಅಧ್ಯಯನಕ್ಕೆ ಈ ಕೃತಿಯೊಂದು ಮಾರ್ಗದರ್ಶಿ ಕೈಪಿಡಿಯಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಇಂತಹ ಮೌಲಿಕ ಕೃತಿಯನ್ನು ರಚಿಸಿದ ಡಾ. ಯೋಗೀಶ್ವರಪ್ಪ ಅವರಿಗೆ ವಂದನೆ–ಅಭಿನಂದನೆಗಳು.

ನೊಳಂಬ ಲಿಂಗಾಯತ ಸಮುದಾಯದಲ್ಲೊಂದು ಯುವ ಪ್ರತಿಭೆ

ಎಸ್.ಎಸ್.ದೀಕ್ಷಾ ತುಮಕೂರಿನ ಎನ್.ಸಿ.ಸುರೇಶ್ ಮತ್ತು ಡಿ.ಲತಾ ದಂಪತಿಗಳ ಏಕಮಾತ್ರ ಪುತ್ರಿ. ಸಿದ್ಧಗಂಗಾ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಂಪ್ಯೂಟರ್ ಇಂಜಿನಿಯರಿಂಗ್ ವಿಭಾಗದ ಆರನೇ ಸೆಮಿಸ್ಟರ್‌ನಲ್ಲಿ ಅಭ್ಯಾಸ ಮಾಡುತ್ತಿದ್ದು, ನಗರದ ನೀಲಾಲಯ ನೃತ್ಯಕೇಂದ್ರದ ಗುರು ಶ್ರೀಮತಿ ಬಾಲಾ ವಿಶ್ವನಾಥ್‌ರವರಿಂದ ಭರತನಾಟ್ಯ ತರಬೇತಿ ಪಡೆದು, ಗಂಗೂಬಾಯಿ ಹಾನಗಲ್ ವಿಶ್ವವಿದ್ಯಾಲಯದ ಭರತನಾಟ್ಯ ವಿಭಾಗದ ಪದವೀಧರೆಯಾಗಿದ್ದಾರೆ.

ದಿನಾಂಕ 22–02–2026ರಂದು ನಗರದ ಡಾ. ಗುಬ್ಬಿವೀರಣ್ಣ ರಂಗಮಂದಿರದಲ್ಲಿ ಪ್ರಪ್ರಥಮವಾಗಿ ರಂಗಪ್ರವೇಶ ಮಾಡಿ ಪ್ರದರ್ಶನ ನೀಡಿ, ಪ್ರೇಕ್ಷಕರಿಂದ ಪ್ರಶಂಸೆ ಗಳಿಸಿದರು.

ನೊಳಂಬವಾಣಿ ಪತ್ರಿಕೆಯ ಲೇಖಕರು, ನಿವೃತ್ತ ಇಂಜಿನಿಯರ್, ಸಿದ್ಧರಾಮನಹಳ್ಳಿ ತೋಟದಮನೆ, ಶ್ರೀ ಗುರುಸಿದ್ಧರಾಮ ಜ್ಞಾನಪ್ರಸಾರ ಕೇಂದ್ರದ ಅಧ್ಯಕ್ಷರೂ ಆದ ಶ್ರೀ ಎಸ್.ಟಿ.ಚಂದ್ರಶೇಖರಪ್ಪ (ಚಂದ್ರಶೇಖರ ತಿ ಚಿಂದಾಳ) ಇವರ ಮೊಮ್ಮಗಳೂ ಆದ ಎಸ್.ಎಸ್.ದೀಕ್ಷಾರವರಿಗೆ ವಿಶ್ವಗುರು ಬಸವಣ್ಣನವರು, ಶಿವಯೋಗಿ ಸಿದ್ಧರಾಮೇಶ್ವರರು ಹರಸಲಿ ಎಂದು ಪ್ರಾರ್ಥಿಸುತ್ತಾ, ನೊಳಂಬವಾಣಿ ಪತ್ರಿಕಾ ಬಳಗ, ನೊಳಂಬ ಲಿಂಗಾಯತ ಸಂಘವು ಅಭಿನಂದಿಸುತ್ತದೆ.

– ಜಿ.ಬಿ.ನಾಗಭೂಷಣ, ಅಧ್ಯಕ್ಷರು
ಜಾಗತಿಕ ಲಿಂಗಾಯತ ಮಹಾಸಭಾ,
ಜಿಲ್ಲಾ ಘಟಕ, ತುಮಕೂರು.



ಶ್ರೀಗುರು ಸಿದ್ಧರಾಮೇಶ್ವರರ ವಚನ – ನಿರ್ವಚನ

ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದ ಹೆಣ್ಣು ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದ ಹೆಣ್ಣು ನಾರಾಯಣನ ಎದೆಯನೇರಿತ್ತು
ಅದುಕಾರಣ ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಸಿಯಲ್ಲ
ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ

ಈ ವಚನ ಶ್ರೀಗುರುಸಿದ್ಧರಾಮೇಶ್ವರ ಪ್ರಬಲ ಮಹಿಳಾ ವೈಚಾರಿಕ ಚಿಂತನೆಯ ಮಹತ್ತರವಾದ ವಚನ. ಮಾರ್ಚ್ ತಿಂಗಳು ವಿಶ್ವಮಹಿಳಾ ದಿನವನ್ನು ಆಚರಿಸುತ್ತಿದ್ದೇವೆ. ಅದರ ಪ್ರಯುಕ್ತ ಈ ವಚನಕ್ಕೆ ಒಂದು ವಿಶೇಷತೆ ಇದೆ ಎಂದು ಭಾವಿಸುತ್ತೇನೆ. ನಮ್ಮ 12ನೇ ಶತಮಾನದ ಶರಣರ ವಚನಗಳಲ್ಲಿ ಹೆಣ್ಣಿನ ಬಗ್ಗೆ ಇಷ್ಟು ಉನ್ನತವಾದ ಗೌರವದ ಸ್ಥಾನವನ್ನು ಕೊಟ್ಟಿರುವ ವಚನ ಮತ್ತೊಂದು ಇಲ್ಲ. ಇದರಿಂದ ಸಿದ್ಧರಾಮೇಶ್ವರರು ನೇರವಾಗಿ ತಮ್ಮ ಮಹಿಳಾ ಪರವಾದ ನಿಲುವನ್ನು ವ್ಯಕ್ತಪಡಿಸಿದ್ದಾರೆ. ಶರಣಯುಗದಲ್ಲಿ ಹೆಣ್ಣಿಗೆ ಸಮಾನ ಸ್ಥಾನಮಾನ ಕೊಟ್ಟರು. ಅನುಭವ ಮಂಟಪದಲ್ಲಿ ಮಹಿಳೆ ತನ್ನ ಅನುಭಾವ ಚಿಂತನೆಗಳನ್ನು ತನ್ನ ಮಾತಿನ ಮೂಲಕ ವ್ಯಕ್ತಪಡಿಸಿ ವಚನಗಳಲ್ಲಿ ತಮ್ಮ ಅಭಿವ್ಯಕ್ತಿ ಸಾಮರ್ಥ್ಯವನ್ನು ಜಗತ್ತಿನ ಮುಂದೆ ತೋರಿಸಿದ ಮೊದಲ ಯುಗ. ವಿಶ್ವಮಟ್ಟದಲ್ಲೂ ಅಪೂರ್ವವಾದ ಸುವರ್ಣಯುಗವೆಂದು ಕರೆಯುವಷ್ಟರ ಮಟ್ಟಿಗೆ ವಿಚಾರವಾದವನ್ನು ಮನುಕುಲಕ್ಕೆ ನೀಡಿದ ಯುಗ ಬಸವಧರ್ಮ.

ಹೆಣ್ಣು ತೀರಾ ಕನಿಷ್ಠಕ್ಕೆ ಒಳಗಾಗಿದ್ದ ಕಾಲದಲ್ಲಿ ಶರಣರ ಚಿಂತನೆಗಳು ಹೆಣ್ಣಿನ ಶ್ರೇಷ್ಠತೆಯನ್ನು ಅವಳು ಸಾಕ್ಷಾತ್ ದೈವ ಸ್ವರೂಪಿ ಎಂಬುದನ್ನು ಹೇಳುತ್ತದೆ. ಹೆಣ್ಣು ಕೇವಲ ಭೋಗದ ವಸ್ತುವಲ್ಲ, ಆಧ್ಯಾತ್ಮ ಸಾಧನೆಗೆ ಭಂಗ ತರುವವಳೂ ಅಲ್ಲ. ಆಕೆಯಲ್ಲಿರುವ ಶಕ್ತಿ ಅಸಮಾನ್ಯವಾದದ್ದು. ಆಕೆ ತಾಯಿಯಾಗಿ, ಪತ್ನಿಯಾಗಿ, ಜ್ಞಾನದೇವತೆಯಾಗಿದ್ದಾಳೆ ಎನ್ನುವ ಸಿದ್ಧರಾಮೇಶ್ವರರ ಈ ವಚನ ಸಾಂಕೇತಿಕ ಆರ್ಥದಿಂದ ಕೂಡಿದೆ.



ಸುಶೀಲಾ ಸದಾಶಿವಯ್ಯ
'ಪ್ರಣವಂ' ಟೂಡಾಕಛೇರಿ ಹಿಂಭಾಗ
1ನೇ ಬ್ಲಾಕ್, 3ನೇ ಮೈನ್,
ಕುವೆಂಪುನಗರ, ತುಮಕೂರು.
ಮೊ : 7019843776

ತ್ರಿಮೂರ್ತಿಗಳ ಪೌರಾಣಿಕ ಕಲ್ಪನೆಯನ್ನು ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುತ್ತಾ ಹೆಣ್ಣಿನ ಹಿರಿಮೆಯನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಈ ಸೃಷ್ಟಿಯ ಒಂದು ಭಾಗವಾಗಿರುವ ಹೆಣ್ಣನ್ನು ತಾನೇ ಸೃಷ್ಟಿಸಿದ ಶಿವನು ತನ್ನ ತಲೆಯ ಮೇಲೆ ಗಂಗೆಯಾಗಿ ಕೂರಿಸಿಕೊಂಡಿದ್ದಾನೆ. ಗೌರಿಯನ್ನು ತನ್ನ ತೊಡೆಯ ಮೇಲೆ ಪತ್ನಿಯ ಸ್ಥಾನವನ್ನು ಕೊಟ್ಟಿದ್ದಾನೆ. (ತನ್ನ ದೇಹದ ಅರ್ಧಭಾಗವನ್ನು ಶಿವೆಗೆ ಮೀಸಲಿಟ್ಟದ್ದಾನೆ) ಸೃಷ್ಟಿಕರ್ತನಾದ ಬ್ರಹ್ಮನು ತನ್ನ ನಾಲಿಗೆಯ ಮೇಲೆ ಸರಸ್ವತಿ(ಜ್ಞಾನದ) ರೂಪದಲ್ಲಿ ಧರಿಸಿಕೊಂಡಿದ್ದಾನೆ. ವಿಷ್ಣು ತನ್ನ ಎದೆಯಲ್ಲಿ ಲಕ್ಷ್ಮಿಯನ್ನು ಇಟ್ಟುಕೊಂಡಿದ್ದಾನೆ. ದೇವಾನುದೇವತೆಗಳು ತಾವು ಸೃಷ್ಟಿಸಿದ ಹೆಣ್ಣಿಗೆ ಇಷ್ಟು ಪೂಜನೀಯವಾದ ಸ್ಥಾನವನ್ನು ಕೊಟ್ಟಿರುವಾಗ ಸಾಮಾನ್ಯರಾದ ನಾವು ಹೆಣ್ಣನ್ನು ಶತ್ರುವಿನ ಸ್ಥಾನದಲ್ಲಿಟ್ಟು ಆಕೆ ಗಂಡಿನ ಎಲ್ಲಾ ಚಟುವಟಕೆಗೂ ಅಡ್ಡಿಯನ್ನುಂಟು ಮಾಡುವ ಹೀನ ಜೀವದಂತೆ ಕಾಣುತ್ತಾ, ಆಕೆಯನ್ನು ಅತ್ಯಂತ ನಿಕೃಷ್ಟವಾಗಿ ನಡೆಸಿಕೊಳ್ಳುತ್ತಾ ಶೋಷಣೆಗೆ ಒಳಗಾಗಿದ್ದ ಹೆಣ್ಣಿನ ಅತ್ಯಂತ ದಮನೀಯ ಸ್ಥಿತಿಯನ್ನು ಕಂಡ ಸಿದ್ಧರಾಮೇಶ್ವರರು ಮಹಿಳೆಗೆ ಉನ್ನತವಾದ ಪೂಜನೀಯವಾದ ಸ್ಥಾನವನ್ನು ದೇವತೆಗಳು ಕೊಟ್ಟಿರುವುದನ್ನು ಜನರ ಮುಂದೆ ತೆರೆದಿಡುತ್ತಾರೆ.

ತಾನು ಗೌರವಿಸುವ ಆರಾಧಿಸುವ ಹೆಣ್ಣು ತನ್ನ ತಲೆಯ ಮೇಲೆ ಪೂಜನೀಯ ಸ್ಥಾನದಲ್ಲಿ ಇರುತ್ತಾಳೆ. ಆತ್ಮೀಯಳಾದ ಹೆಣ್ಣು ತೊಡೆಯ ಮೇಲಿರುವ ಮಗುವಿನಂತೆ ಆಪ್ತಳು ಮತ್ತು ಪ್ರಿಯಳು ಆಗಿರುತ್ತಾಳೆ. ಶಕ್ತಿಯರೂಪದಲ್ಲಿ ಲಕ್ಷ್ಮಿಯಂತೆ ಹೆಣ್ಣು ನಾರಾಯಣನ ಎದೆಯ ಮೇಲೆ ನೆಲೆಸಿದ್ದಾಳೆ. ಹಾಗಾಗಿ ಅವಳು ಹೆಣ್ಣು ಹೆಣ್ಣಲ್ಲ, ಅವಳನ್ನು ನೋಡುವ ದೃಷ್ಟಿಯಾವುದೋ ಸೀಮಿತವಾಗಬಾರದು. ಅವಳ ಜೈವಿಕ ದುರ್ಬಲತೆಯನ್ನು ಶೋಷಣೆಯ ರೂಪದಲ್ಲಿ ಪ್ರಬಲ ವರ್ಗ ತುಳಿಯಬಾರದು, ಕಡೆಗಣಿಸಬಾರದು. ಆಕೆ ರಾಕ್ಷಸಿಯಲ್ಲ ಅವಳು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನನೇ ಆಗಿದ್ದಾಳೆ ಎನ್ನುವ ಸಿದ್ಧರಾಮೇಶ್ವರರು ಹೆಣ್ಣಿಗೆ ಅತ್ಯಂತ ಉನ್ನತವಾದ ಪೂಜನೀಯವಾದ ಸ್ಥಾನವನ್ನು ತಮ್ಮ ವಚನದಲ್ಲಿ ಹೇಳಿರುವುದು ಹೆಣ್ಣಿನ ಬಗ್ಗೆ ಶಿವಶರಣರಿಗೆ ಇದ್ದ ಗೌರವವನ್ನು ತಿಳಿಸುತ್ತದೆ. ಸಿದ್ಧರಾಮೇಶ್ವರರು ಮಹಿಳೆಯನ್ನು ಕಂಡ ಮಹೋನ್ನತಿಯ ಸಾಕಾರರೂಪವೇ ಈ ವಚನವಾಗಿದೆ.

ಹೆಣ್ಣು ಹೆಣ್ಣಲ್ಲ..... ಶಕ್ತಿಧಾತೆ

ಜಗತ್ತಿನ ಜನರಲ್ಲಿ ಹೆಚ್ಚು ಕಡಿಮೆ ಅರ್ಧದಷ್ಟು ಇರುವ ಮಹಿಳೆಯರ ಸ್ಥಿತಿಗತಿ ಕಾಲಾನುಕಾಲದಲ್ಲಿ ಇಳಿಕೆ ಏರಿಕೆ ಆಗಿರುವುದನ್ನು ಇತಿಹಾಸದಿಂದ ತಿಳಿಯಬಹುದು. ಆರ್ಯನ್ ಸಂಸ್ಕೃತಿಯಲ್ಲಿ ಮಹಿಳಾ ಚಿಂತನೆಗೆ ಅಷ್ಟೊಂದು ಮಹತ್ವವಿರಲಿಲ್ಲ. ದ್ರಾವಿಡ ಸಂಸ್ಕೃತಿಯಲ್ಲಿ ಮಹಿಳಾ ಬದುಕಿನಲ್ಲಿ ಒಂದು ಕಿರುಬೆಳಕು ಬೀರಿರುವ ಅಂಶ ಗೋಚರಿಸುತ್ತದೆ. ಮನುಸ್ಮೃತಿಯ ಕಾಲದಲ್ಲಿ ಹೆಣ್ಣನ್ನು ಶೂದ್ರಳಂತೆ ಪರಿಗಣಿಸಿ ಅವಳಿಗೆ ದಕ್ಕಬೇಕಾದ ಹಕ್ಕುಗಳು ದಮನವಾಗಿದ್ದವು. ಹೆಣ್ಣು ಗಂಡುಗಳಲ್ಲಿ ತಾರತಮ್ಯವಿತ್ತು. ಹೆಣ್ಣನ್ನು ಒಬ್ಬ ಮನುಷ್ಯಳಂತೆ ಕಾಣದೆ ಒಂದು ವಸ್ತುವೆಂದೆ ಭಾವಿಸಿದ್ದರು. ಅವಳನ್ನು ಮಾಯೆ ಎಂದು ಕರೆದು ಸಾಮಾಜಿಕವಾಗಿ ಧಾರ್ಮಿಕವಾಗಿ ಅನೇಕ ನೀತಿ ನಿಯಮಗಳನ್ನು ಆರೋಪಿಸಿ ಅವರ ಪ್ರಗತಿಪರ ಚಿಂತನೆಯನ್ನು ಕುಂಠಿತಗೊಳಿಸಿದ್ದರು. ವೈದಿಕ ಧರ್ಮದ ಹಿನ್ನೆಲೆಯಲ್ಲಿ ಹೆಚ್ಚು ಶೋಷಣೆಗೆ ಒಳಗಾದವರೆಂದರೆ ದಲಿತರು ಮತ್ತು ಮಹಿಳೆಯರು. ಮಹಿಳೆಯರು ಧಾರ್ಮಿಕ ಕ್ಷೇತ್ರದಲ್ಲಿ ಅಸ್ಪೃಶ್ಯಗಳಂತೆ ದೂರವಿರಬೇಕಾಗಿತ್ತು. ಯಜಮಾನ ಸಂಸ್ಕೃತಿಯಲ್ಲಿ ಮಹಿಳೆ ಕೇವಲ ಒಂದು ಭೋಗದ ವಸ್ತು, ಮನೆ ಕೆಲಸದ ದಾಸಿ ಎಂದೇ ಭಾವಿಸಲ್ಪಟ್ಟಿದ್ದಳು.

ಕೆಲವು ಗಾದೆಗಳು ಕೂಡ ಹೆಣ್ಣಿನ ಬಗೆಗೆ ತಿರಸ್ಕಾರ ಧೋರಣೆಯ ಅಂಶವನ್ನು ತಿಳಿಸುತ್ತವೆ. ಆ ಭಾವನೆ ಇಂದಿಗೂ ಮನೆ ಮಾಡಿದೆ. ಹೆಣ್ಣಿನ ಬುದ್ಧಿ ಮೊಣಕಾಲ ಕೆಳಗೆ ಎನ್ನುತ್ತಾರೆ. ಅವಳು ಎಷ್ಟೇ ಉತ್ತಮ ಸಾಧನೆ ಮಾಡಿದರು ಪುರುಷ ಸಾಧನೆಯ ಮುಂದೆ ನಗಣ್ಯ ಎಂದು ಭಾವಿಸುತ್ತಾರೆ. "ಅಯ್ಯೋ ಎಷ್ಟಾದರೂ ನೀನು ಹೆಣ್ಣು" ಎನ್ನುತ್ತಾರೆ. "ಹೆಣ್ಣಿನಿಂದ ತಂದೆ ತಾಯಿಗೆ ಸ್ವರ್ಗ ಪ್ರಾಪ್ತಿ ಇಲ್ಲ" ಎಂಬ ಭಾವನೆ ಇತ್ತು. "ಹೆಣ್ಣು ಹುಟ್ಟಿದ ಮನೆಯ ಚಿಲಕ ಅಳುತ್ತದೆ" ಎನ್ನುತ್ತಾರೆ. ಹದಿನಾರು ಜನ ಅಪ್ಸರೆಯರಂತ ಹೆಣ್ಣು ಮಕ್ಕಳಿಗಿಂತ ಒಬ್ಬ ಗೂನು ಬೆನ್ನಿನ ಮಗ ಲೇಸು ಎನ್ನುತ್ತದೆ ಗಾದೆಯೊಂದು. "ಹೆಣ್ಣು ಗಾಳಿಯಂತೆ ಚಂಚಲ ಖಡ್ಗದಂತೆ ಹರಿತ" ಎಂಬ ಮಾತುಗಳು ಪ್ರಸ್ತುತದಲ್ಲೂ ಚಾಲ್ತಿಯಲ್ಲಿರುವಾಗ 12ನೇ ಶತಮಾನದ ಪೂರ್ವದಲ್ಲಿ ಮಹಿಳಾ ಪರಿಸ್ಥಿತಿ ಹೇಗಿರಬಹುದು...?

ಅಂದಿನ ಗಂಡಾಳಿಕೆಯ ಸಮಾಜದಲ್ಲಿ ಅವಳೆಲ್ಲ ಆಗುಹೋಗುಗಳ ನೇಪಥ್ಯದಲ್ಲಿ ಪುರುಷರ ಆಜ್ಞೆಗಳು ಇರುತ್ತಿದ್ದವು.

ಅಂದಿನಿಂದ ಇಂದಿನ ತನಕವೂ ಕೂಡ ಮಹಿಳಾಪರ ಹೋರಾಟಗಳು ನಡೆಯುತ್ತಲೇ ಇವೆ. ಮಹಿಳೆ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇದೆ. ತಾಯಂದಿರ ದಿನಾಚರಣೆ ಇದೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸುತ್ತಾರೆ ಹೆಣ್ಣು ಮಕ್ಕಳ ದಿನವನ್ನು ಆಚರಿಸುತ್ತಾರೆ. ಮಹಿಳೆಯರ ಪ್ರಗತಿಗಾಗಿ ಕ್ಲಾರಾ ಜೆಟ್ಕಿನ್ ಎಂಬ ಮಹಿಳೆ ಮಾರ್ಚ್ ಎಂಟನ್ನು ಮಹಿಳಾ ದಿನವನ್ನಾಗಿ ಆಚರಿಸಬೇಕೆಂದು ಎಲ್ಲರ ಗಮನ ಸೆಳೆದಳು. ಈ ಮೂಲಕ ಮಹಿಳೆಯರು ತಮ್ಮ ಬೇಡಿಕೆಗಳನ್ನು ಒತ್ತಾಯಿಸಲು ಅನುವಾಗುವಂತಹ ವ್ಯವಸ್ಥೆಗಾಗಿ ಶ್ರಮಿಸಿದರು. 1975ರಿಂದ ವಿಶ್ವ ಮಹಿಳಾ ದಿನವನ್ನು ಮಾರ್ಚ್ 8ರಂದು ಇಡೀ ವಿಶ್ವವೇ ಆಚರಿಸುತ್ತಿದೆ. ಮಹಿಳೆಯ ಆರ್ಥಿಕ ಸಾಮಾಜಿಕ ರಾಜಕೀಯ ಸಾಧನೆಗಳ ಕುರಿತು ಚಿಂತನ ಮಂಥನಗಳು ನಡೆಯುತ್ತಲೇ ಇವೆ. 1910ದಿಂದಲೂ ಇದಕ್ಕಾಗಿ ಹೋರಾಟ ನಡೆದಿದೆ. ಆದರೂ ಇಂದಿಗೂ ಹೆಣ್ಣನ್ನು ಎರಡನೇ ದರ್ಜೆಯ ನಾಗರೀಕಳೆಂದೆ ಪರಿಗಣಿಸುತ್ತಾರೆ.

ಆದರೆ ಮಹಿಳಾಪರ ಚಿಂತನೆಗಳು 12ನೇ ಶತಮಾನದಲ್ಲಿ ಗೋಚರಿಸುತ್ತವೆ. ಮಹಿಳೆಯರ ಸ್ಥಿತಿಗತಿಯ ಮೇಲೆ ಅಂದಿನ ಶರಣರು ಬೆಳಕು ಚೆಲ್ಲಿದ್ದಾರೆ. ಈ ಶತಮಾನಕ್ಕಿಂತ ಪೂರ್ವದಲ್ಲಿದ್ದ ಹೆಣ್ಣು ವ್ಯಕ್ತಿ ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ಅಭಿವ್ಯಕ್ತಿಯ ಸ್ವಾತಂತ್ರ್ಯದಿಂದ ವಂಚಿತಳಾಗಿದ್ದಳು. ಹೆಣ್ಣನ್ನು ಎಷ್ಟು ಹೀಗಳೆದು ನುಡಿದರು ತೃಪ್ತಿಯಾಗದವರನ್ನು ಸ್ವತಂತ್ರ ಯುಗದ ಶರಣರು ಹಿಮ್ಮೆಟ್ಟಿಸಿ ಸ್ತ್ರೀ ಕುಲದ ಹೆಗ್ಗಳಿಕೆಗೆ ಕಾರಣರಾದರು. 12ನೇ ಶತಮಾನದ ಚಳುವಳಿಯ ಕಾವುಗಳಲ್ಲಿ ಸ್ತ್ರೀಕುಲದ ಉದ್ಧಾರ ಮತ್ತು ಉಭಯ ಪ್ರಧಾನ ಕುಟುಂಬವು ಮುಖ್ಯವಾಯಿತು. ಶರಣರು ಮಹಿಳೆಯರಿಗೆ ನೀಡಿದ ವ್ಯಕ್ತಿ ಸ್ವಾತಂತ್ರ್ಯ ವಿಚಾರ ಸ್ವಾತಂತ್ರ್ಯ ಅಭಿವ್ಯಕ್ತಿ ಸ್ವಾತಂತ್ರ್ಯ ಜಾಗತಿಕ ಮಟ್ಟದಲ್ಲಿ ಅಪೂರ್ವ ಎನಿಸಿತು. ಸಾಮಾಜಿಕ ಆರ್ಥಿಕ ಚಿಂತನೆಗಳು ಅವರಲ್ಲೂ ಮೂಡಿದವು. ಬೆಳಗುವ ನಕ್ಷತ್ರಗಳಂತೆ ಈ ಶತಮಾನದಲ್ಲಿ



ಸುಶೀಲ ಸೋಮಶೇಖರ್
ಚೈತ್ರೋದಯ, ಪ್ರೆಸಿಡೆನ್ಸಿ ಕಾಲೇಜು ಹಿಂಭಾಗ, ಸಾಲಗಾಮೆ ರಸ್ತೆ,
ಹಾಸನ–573201
ಮೊ : 9448997084

36 ಜನ ವಚನಕಾರ್ತಿಯರು ಕಂಡುಬರುತ್ತಾರೆ. ಸಾಹಿತ್ಯವೆಂಬುದು ಪುರುಷರ ಸ್ವತ್ತೆಂಬುದನ್ನು ವಚನಕಾರ್ತಿಯರು ಸುಳ್ಳಾಗಿಸಿದರು. ವಚನ ಮಾಧ್ಯಮದ ಮೂಲಕ ಉತ್ಕೃಷ್ಟ ಸಾಹಿತ್ಯ ರಚನೆ ಎಂಬುದು ಮಹಿಳೆಯರಿಂದಲೂ ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಹಿಂದೆಂದೂ ಕಾಣ ಬರದಂತ ಅಧಿಕ ಸಂಖ್ಯೆಯ ಮಹಿಳೆಯರು ವಚನ ರಚಿಸಿ ಸಾಹಿತ್ಯೇತಿಹಾಸದಲ್ಲಿಯೇ ಅಪೂರ್ವ ಕೀರ್ತಿಗಳಿಸಿದರು. ಕಾಯಕನಿಷ್ಠರಾದರು. ಅಕ್ಕಮ್ಮ ಅಕ್ಕನಾಗಮ್ಮ ನೀಲಾಂಬಿಕೆ ಗಂಗಾಂಬಿಕೆ ಸತ್ಯಕ್ಕ ಮುಕ್ತಾಯಕ್ಕ ಆಯ್ದಕ್ಕಿ ಲಕ್ಕಮ್ಮ ಧೂಪದ ಗೊಗ್ಗವ್ವೆ ಲಿಂಗಮ್ಮ ಮುಕ್ತಾಯಕ್ಕ ಸೋಮವ್ವೆ ಕೇತಲಾದೇವಿ ಬೊಂತಾದೇವಿ ಗಂಗಮ್ಮ ಸಂಕವ್ವೆ ಕಾಳವ್ವೆಯರು ರೇಕಮ್ಮ ರೇಚಮ್ಮ ನಂಬಿಕೆ ಅಮುಗೆರಾಯಮ್ಮ ಮೋಳಿಗೆ ಮಹಾದೇವಿ ಮುಂತಾದವರಲ್ಲಿ ಸ್ವಸ್ಥ ಸಮಾಜದ ಬಗ್ಗೆ ನಂಬಿಕೆ ಬೆಳೆಯಿತು. ಇವರೆಲ್ಲರೂ ಶಕ್ತಿಯಾಗಿ ಅಚ್ಚಳಿಯದ ಇತಿಹಾಸವಾಗಿದ್ದಾರೆ. ಅಂದೆ ಮಹಿಳಾ ಸ್ವಾತಂತ್ರ್ಯವನ್ನು ಅನುಭವಿಸಿದವರು. ಅನುಭವಗಳ ಮೂಲಕ ಅಲೌಕಿಕಾನುಭವವನ್ನು ಅನ್ಯರಿಗು ತಿಳಿಸಿದವರು. ಅಪರೂಪದ ಅಕ್ಕಮಹಾದೇವಿ 12ನೇ ಶತಮಾನದ ಪ್ರಮುಖ ಸ್ತ್ರೀ ಶಕ್ತಿಯಾಗಿ ಕಂಡುಬರುತ್ತಾಳೆ.

ಮಹಿಳಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿದ ಶರಣರಲ್ಲಿ ವಚನಕಾರ ಸಿದ್ದರಾಮರು ಶ್ರೇಷ್ಠರು. ಇವರು ಲಿಂಗ ತಾರತಮ್ಯವನ್ನು ಕಡೆಗಣಿಸಿ ಮಹಿಳೆಯಲ್ಲಿ ಆತ್ಮವಿಶ್ವಾಸ ಆತ್ಮಶಕ್ತಿಯನ್ನು ತುಂಬಿದರು. ಆಧ್ಯಾತ್ಮಿಕವಾಗಿಯೂ ಅವಕಾಶ ನೀಡುವಂತೆ ಕರೆಯಿತ್ತರು. ಶಿವಜ್ಞಾನ ಸಂಪಾದನೆಗೆ ಮಹಿಳೆಯರು ಅರ್ಹರು. ಶೋಷಣೆಯಿಂದ ಮುಕ್ತಗೊಳಿಸಿದರು. ಪುರುಷ ಸಮಾನ ಅವಕಾಶ ಕಲ್ಪಿಸಿ ಕೊಟ್ಟರು. ಸ್ತ್ರೀ ಸಮಾನತೆಯ ಸಿದ್ಧಾಂತವನ್ನು ಸಮರ್ಥಿಸಿಕೊಂಡ ಕೀರ್ತಿ ಸಿದ್ದರಾಮರಿಗೂ ಸಲ್ಲುತ್ತದೆ. ಎಲ್ಲಿಯ ತನಕ ಹೆಣ್ಣಿನ ಆಸೆ ಇರುತ್ತದೆಯೋ ಆ. ತನಕ ಜಂಗಮ ಪಾದೋದಕ ಸಿಗಲಾರದು ಎಂದರು.

ತಾ ಮಾಡಿದಾ ಹೆಣ್ಣು ತನ್ನ ತಲೆಯನೇರಿತ್ತು
ತಾ ಮಾಡಿದಾ ಹೆಣ್ಣು ತನ್ನ ತೊಡೆಯನೇರಿತ್ತು
ತಾ ಮಾಡಿದಾ ಹೆಣ್ಣು, ಬ್ರಹ್ಮನ ನಾಲಗೆಯನೇರಿತ್ತು
ತಾ ಮಾಡಿದಾ ಹೆಣ್ಣು ನಾರಾಯಣನ ಎದೆಯ ನೇರಿತ್ತು
ಅದು ಕಾರಣ ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ
ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ

ಮಣ್ಣು ಒಂದು ಭೌತಿಕ ವಸ್ತು. ಜೀವಧಾರ. ಅಂದ ಮಾತ್ರಕ್ಕೆ ಮಣ್ಣೆ ನಮ್ಮ ಬದುಕೆಂದು ಅಂಟಿಕೊಳ್ಳಬಾರದು. ಹೆಣ್ಣನ್ನು ಮಣ್ಣಂತೆ ಭೌತಿಕವಾಗಿ ಕಂಡ ಸಂಸ್ಕೃತಿಯನ್ನು ಇವರು ನಿರಾಕರಿಸಿದರು. ಸಿದ್ದರಾಮರ ದೃಷ್ಟಿಯಲ್ಲಿ ಹೆಣ್ಣು ದೇವಿ ಸಮಾನಳೇ ಹೊರತು ಭೌತಿಕ ವಸ್ತುವಲ್ಲ. ಇಹಪರ ಸಾಧನೆಗೆ ಶಕ್ತಿಯುಳ್ಳ ಹೆಣ್ಣಿನ ವ್ಯಕ್ತಿತ್ವವನ್ನು ಇವರು ಕಂಡ ರೀತಿ ಅನನ್ಯವಾದದ್ದು. ಹೆಣ್ಣು ಗಂಡು ಒಂದೆಂಬ ತಾದ್ಯಾತ್ಮ ಭಾವದಿಂದಲೇ ಇಂದಿನ ಸ್ತ್ರೀಕುಲ ಸಂತೃಪ್ತಿಯ ಉಸಿರಾಡುತ್ತಿದೆ. ಅಂಗನೆಯರ ಆಶ್ರಯಿಸಿ ಭವಕ್ಕೆ ಬೀಜವಾಯಿತು. ತಾನು ಭಕ್ತನಾಗಿ ಹೆಣ್ಣು ಹೊನ್ನು ಮಣ್ಣು ಶಿವನ ಒಡವೆ ಎನ್ನುತ್ತಾನೆ ಸಿದ್ದರಾಮ. ಹೆಣ್ಣು ಶಾರೀರಿಕವಾಗಿ ಮಾತ್ರ ಹೆಣ್ಣಾಗದೆ ಪುರುಷತ್ವದ ನಿಲುವುಗಳನ್ನು ತಡೆಯಬಲ್ಲಳು. ಅಂತಹ ಧೀಶಕ್ತಿ ಹೆಣ್ಣಿನದು ಎಂಬ ಅರ್ಥವನ್ನು ಇಲ್ಲಿ ಕಾಣಬಹುದು. ಹೆಣ್ಣು ರಕ್ಕಸಿಯು ಅಲ್ಲ. ಮಾಯೆಯೂ ಅಲ್ಲ. ಅವಳದು ಇತ್ಯಾತ್ಮಕ ಭಾವನೆ.

ಈ ವಚನದ ಮೂಲಕ ಪಿತೃ ಪ್ರಧಾನ ಸಾಮಾಜಿಕ ವ್ಯವಸ್ಥೆಯನ್ನೇ ಸಿದ್ಧರಾಮರು ನಿರಾಕರಿಸಿದ್ದಾರೆ, ಹೆಣ್ಣನ್ನು ದೈವದಂತೆ ಕಂಡಿದ್ದಾರೆ ಹೆಣ್ಣು ಹೆಣ್ಣಲ್ಲ ಎಂಬ ಮಾತು ಓದುಗರ ಮನ ಮಿಡಿಯುತ್ತದೆ.

ಪರಸ್ತ್ರೀ ವ್ಯಾಮೋಹ ಅಳಿದಾಗ ಲಿಂಗಾಂಗ ಸಾಮರಸ್ಯ ಸಾಧ್ಯ. ತಾನೇ ಸತಿ ಲಿಂಗವೇ ಪತಿಯಾಗಿ ಇಂದ್ರಿಯಾದಿ ಕರಣಂಗಳತ್ತ ಹರಿಯೆನು. ಕಷ್ಟ ಕಾರ್ಪಣ್ಯ ಕ್ಕೊಳಗಾಗೇನು ಎನ್ನುತ್ತಾನೆ ಸಿದ್ದರಾಮ. ವೈದಿಕ ಧರ್ಮ ಹೆಣ್ಣಿಗೆಂದೇ ರೂಪಿಸಿದ್ದ ಸಾಂಪ್ರದಾಯಿಕ ಮೌಲ್ಯಗಳನ್ನು ಇತರ ಶರಣರಂತೆ ಇವರು ಅಲ್ಲಗಳೆದಿದ್ದಾರೆ. ಅವುಗಳನ್ನ ತಿರಸ್ಕರಿಸಿ ತಮ್ಮದೇ ನಿಲುವುಗಳನ್ನು ಪ್ರತಿಪಾದಿಸಿ ಸ್ತ್ರೀ ಕುಲಕ್ಕೆ ಹೊಸತನ ಮೂಡಿಸಿದ್ದಾರೆ. ಅವರ ಆತ್ಮ ಶ್ರದ್ಧೆ ಆತ್ಮಭಿಮಾನ ವೈಚಾರಿಕತೆಯನ್ನು ಗೌರವಿಸಿದ್ದಾರೆ. ಹೆಣ್ಣಿನ ಆಚಾರ ವಿಚಾರಗಳಿಗೆ ಮೊದಲ ಸ್ಥಾನ ಕೊಟ್ಟು ಅಂದಿನಂತೆ ಇಂದಿನ ಜನಾಂಗ ದ ಕಣ್ಣು ತೆರೆಸಿದ್ದಾರೆ. ಸ್ತ್ರೀಶಕ್ತಿ ಜಗಜ್ಯೋತಿಯಾಗ ಲೆಂಬುದೇ ಕರ್ಮಯೋಗಿ ಸಿದ್ದರಾಮರ ಆಶಯ.

ಸಿದ್ದರಾಮರು ಲೌಕಿಕ ಸಾಂಸಾರಿಕ ಬದುಕಿನಿಂದ ಮುಕ್ತರಾದರು. ಲೋಕದ ಬಗ್ಗೆ ತಳೆದ ನಿಲುವು ಕೌಟುಂಬಿಕ ಜೀವನವನ್ನು ಎತ್ತಿ ಹಿಡಿದದ್ದು ಅವರ ದೊಡ್ಡ ತಾತ್ವಿಕ ಚಿಂತನೆಯಾಗುತ್ತದೆ. ಲೋಕೋಪಯೋಗಿ ಕಾರ್ಯಗಳು ಹಾಗೂ ಸಂಸಾರಿಕ ಕಾರ್ಯಗಳನ್ನು ಸಮ ತಕ್ಕಡಿಯಂತೆ ತೂಗಬಲ್ಲ ಶಕ್ತಿ ಮಹಿಳೆಗಿದೆ ಎಂಬ ಅವರ ಚಿಂತನೆ ಶ್ಲಾಘನೀಯವಾದದ್ದು. ಹೆಣ್ಣಾಗಲಿ ಗಂಡಾಗಲಿ

24ನೇ ಪುಟಕ್ಕೆ.....

ಶರಣೆಯರ ವಚನಗಳಲ್ಲಿ ಕೌಟುಂಬಿಕ ಸಂಸ್ಕಾರ

ಶರಣ ಸಂಸ್ಕೃತಿಯಲ್ಲಿ ಕುಟುಂಬಕ್ಕೆ ಮಹತ್ವದ ಸ್ಥಾನವಿದೆ. ಶರಣರ ದೃಷ್ಟಿಯಲ್ಲಿ ಸನ್ಯಾಸ ಶ್ರೇಷ್ಠವೂ ಅಲ್ಲ: ಸಂಸಾರ ತ್ಯಾಜ್ಯವು ಅಲ್ಲ, ಕುಟುಂಬ ಹಾಗೂ ಲೌಕಿಕ ಸಂಬಂಧಗಳು ವ್ಯಕ್ತಿಯ ಸಾಧನೆ ಸಿದ್ಧಿಗಳಿಗೆ ತೊಡಕಾಗಿ ಇಲ್ಲ. ಬದಲಾಗಿ ಗುರಿ ಸಾಧನೆಗೆ ಸಹಾಯಕಾರಿ ಯಾಗಿರುತ್ತದೆ ಎಂದು ಹೇಳಿದವರು ಶರಣರು.

ಶಿವಶರಣರ ಕೌಟುಂಬಿಕ ಸಂಬಂಧಗಳು ಕೇವಲ ಲೌಕಿಕ ಜೀವನದಲ್ಲಿ ಮಾತ್ರ ಇರಲಾರದೆ, ಅದು ಆಧ್ಯಾತ್ಮಿಕ ಹಂತಕ್ಕೂ ಏರಿ ನಿಂತಿತ್ತು. ಈ ಹಂತದಲ್ಲಿ ಸತಿ–ಪತಿಗಳ ಅಂಗದ ಭಾವಗಳು ಅಳಿದು ಲಿಂಗ ಭಾವದಿಂದ ಇಂದ್ರಿಯಗಳ ಸುಖವನ್ನು ಅನುಭವಿಸುತ್ತಾರೆ. ಇಲ್ಲಿ ಗಂಡು–ಹೆಣ್ಣು ಮೇಲು ಕೀಳೆಂಬ ತಾರತಮ್ಯವಿರುವುದಿಲ್ಲ. ಗಜೇಶ ಮಸಣಯ್ಯಗಳ ಮಣ್ಯಸ್ತ್ರೀಯು ಕುಟುಂಬ ಜೀವನವನ್ನು ನಿರಾಕರಿಸುವವರನ್ನು ತನ್ನ ಒಂದು ವಚನದಲ್ಲಿ ಈ ಕೆಳಗಿನಂತೆ ಪ್ರಸ್ತಾಪಿಸಿದ್ದಾಳೆ.

ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?

ಸತಿ–ಸುತರನ್ನು ಬಿಟ್ಟು ಕುಟುಂಬ ಹಾಗೂ ಲೌಕಿಕ ಸಂಬಂಧಗಳಿಂದ ಕಳಚಿಕೊಂಡು ದೈವತ್ವವನ್ನು ಒಲಿಸಿಕೊಳ್ಳುವವರಿಗೆ ಪ್ರಶ್ನೆ ಮಾಡುತ್ತಾರೆ. ಈಗೂ ಲಿಂಗಕ್ಕೂ ಏನಾದರೂ ಜಗಳವಿದೆಯೆ ? ಸ್ತ್ರೀ ಇದ್ದಲ್ಲಿ ದೇವರು ಬರುವುದಿಲ್ಲವೇ ? ಕುಟುಂಬವನ್ನು ತೊರೆದು ದೈವತ್ವವನ್ನು ಒಲಿಸಿಕೊಳ್ಳುವುದು ಆದ್ಯಾವ ಮಹಾಸಾಧನೆ ಎಂದು ಕುಟುಂಬ ಜೀವನದ ಮಹತ್ವವನ್ನು ಎತ್ತಿ ಹಿಡಿಯುತ್ತಾಳೆ.

ಇಡಿ ವಿಶ್ವದಲ್ಲಿ ಬರುವ ಬಹುತೇಕ ಇಲ್ಲಾ ಧರ್ಮಗಳು ಮೋಕ್ಷ ಹಾಗೂ ಅಭಿವೃದ್ಧಿಗೆ ಕುಟುಂಬ ಸೂಕ್ತವಲ್ಲದ ಸ್ಥಳವೆಂದು ಸಾರಿದರೆ, ಶರಣರು ಕುಟುಂಬವೇ ಶ್ರೇಷ್ಠಸ್ಥಾನವೆಂದು ಸಾಬೀತುಪಡಿಸಿ ತೋರಿಸಿದರು. ಅದರಲ್ಲಿ ವಿಶೇಷವಾಗಿ ಹೆಣ್ಣನ್ನು ಕುಟುಂಬ ನಿರ್ವಹಣೆಯ ಶಕ್ತಿಯಾಗಿ, ಲಕ್ಷ್ಮಿಯಾಗಿ ಕಾಣಲಾಯಿತು. ಕುಟುಂಬ ಮೋಹದ ತಾಣ ಎಂದು ಹಿಂದಿನವರು ಹೇಳಿದರೆ ಕುಟುಂಬವೇ ದೇವಾಲಯವನ್ನಾಗಿ ಪರಿವರ್ತಿಸಿದರು ಶರಣರು.

ಶಿವಶರಣರ ಕುಟುಂಬ ಪರಿಕಲ್ಪನೆಯು ಸಮಾನತೆ ವೈಚಾರಿಕತೆ ಮತ್ತು ಸಾಮಾಜಿಕ ಕಳಕಳಿಯನ್ನು ಆಧರಿಸಿತ್ತು. ಶರಣರು ಕುಟುಂಬ ಪರಿಕಲ್ಪನೆ ಮನೆಯಿಂದ ಮಹಾಮನೆಯ ವರೆಗೆ ಅಂದರೆ ವ್ಯಕ್ತಿಯಿಂದ ಸಮಷ್ಟಿಯವರೆಗೆ ವಿಸ್ತರಿಸಿದೆ. ಶರಣ ಸಂಸ್ಕೃತಿ ನಿಜವಾದ ಅರ್ಥದಲ್ಲಿ ಕುಟುಂಬ ಧರ್ಮವೇ ಆಗಿದೆ.

ವಿಶ್ವವೆಂಬ ಮಹಾಮನೆಯಲ್ಲಿ ಸಕಲ ಜೀವಾತ್ಮರಿದ್ದಾರೆ. ಇಲ್ಲಿ ಪರಮಾತ್ಮ ಪತಿ ಜೀವಾತ್ಮ ಸತಿ; ಪರಮಾತ್ಮ ಲಿಂಗವಾದರೆ ಜೀವಾತ್ಮ ಅಂಗ: ಜೀವಾತ್ಮ ಮತ್ತು ಪರಮಾತ್ಮರ ಸಾಮರಸ್ಯವೇ ಲಿಂಗಾಂಗ ಸಾಮರಸ್ಯ. ಜೀವಾತ್ಮ ಮತ್ತು ಪರಮಾತ್ಮರ ಸಮ್ಮಿಲನದಿಂದ ಕೂಡಿದ ಇಡೀ ಮನುಕುಲವೆ ಒಂದು ಕುಟುಂಬವೆಂದಾಗುತ್ತದೆ. ಮಾನವರೆಲ್ಲ ಒಂದೇ ಎನ್ನುವ ಶರಣ ಸಂಕುಲದ ಕುಟುಂಬ ವ್ಯವಸ್ಥೆ ರಕ್ತ ಸಂಬಂಧಕ್ಕಿಂದ ಹೆಚ್ಚಾಗಿ ಭಕ್ತಿ ಸಂಬಂಧದಿಂದ ಕೂಡಿತ್ತು. ಅನುಭವ ಮಂಟಪ ಎಂಬ ಮಹಾಮನೆಯ ಕುಟುಂಬದಲ್ಲಿ ಎಲ್ಲರೂ ಭಕ್ತಿ ಸಂಬಂಧದ ಅಣ್ಣ, ಅಪ್ಪ, ಬೊಪ್ಪ, ಅಷ್ಟೆ. ಮುತ್ತದ್ದೆ. ಮುಂತಾದವರಾಗಿದ್ದರು.

ಮನುಸ್ಮೃತಿಯಲ್ಲಿ ಗಂಡ–ಹೆಂಡಿರ ಮಧ್ಯೆ ಸತಿಗೆ ಪತಿಯೇ ಪರದೈವ ಎಂಬ ಭ್ರಮೆಯನ್ನು ಮೂಡಿಸಲಾಗಿತ್ತು. ಗಂಡನ ಯಾವ ತಪ್ಪನ್ನು ಸತಿ ಪ್ರಶ್ನಿಸುವ ಹಾಗಿಲ್ಲ, ಆತ ನೀಚ ಮತ್ತು ವಿಷಯ ಲಂಪಟನಾಗಿದ್ದರೂ, ಪತಿ ಸೇವೆಯೇ ಆಕೆಯ ಧರ್ಮ ಎಂದು ನಂಬಿಸಲಾಗಿತ್ತು. ಪತಿ ಬಲ; ಸತಿ ಎಡ ಎಂಬಂತೆ ಬಿಂಬಿಸಲಾಗುತ್ತಿತ್ತು. ಗಂಡ ಮುಂದೆ ಮುಂದೆ ತಾನು ಹಿಂದೆ ಹಿಂದೆ ಎಂಬ ಸೇವಾಭಾವದಿಂದ ಬದುಕುವುದೆ ಆಕೆಯ ಜೀವನ ಕ್ರಮವಾಗಿತ್ತು.

ಆದರೆ ಶರಣ ಸಂಸ್ಕೃತಿಯಲ್ಲಿ ಕುಟುಂಬದ ಪರಿಕಲ್ಪನೆ ಹಾಗಲ್ಲ. ಸತಿಪತಿಯರ ಮಧ್ಯೆ ಸಹಜ ಭಾವವಿರುತ್ತಿತ್ತು. ಇಲ್ಲಿ ಯಾರು ಶ್ರೇಷ್ಠರೂ ಅಲ್ಲ, ಕನಿಷ್ಠರೂ ಅಲ್ಲ. ಶರಣ ಸಂಸ್ಕೃತಿ ಕುಟುಂಬದಲ್ಲಿ ಸತಿಯೂ ತನಗೆ ಸರಿ ಎನಿಸಿದ್ದನ್ನು ಹೇಳುವ ಪತಿ ತಪ್ಪಿ ನಡೆದಾಗ ತಿದ್ದುವುದನ್ನು ಶರಣೆಯರ ಹಲವಾರು ವಚನಗಳಲ್ಲಿ ಕಾಣುತ್ತೇವೆ.

ದಾಸಿಮಯ್ಯ–ದುಗ್ಗಳೆಯನ್ನು ಹಿಡಿದುಕೊಂಡು ಬಸವಣ್ಣ–ಗಂಗಾಬಿಕೆ, ನೀಲಾಂಬಿಕೆ, ಹರಳಯ್ಯ–ಕಲ್ಯಾಣಮ್ಮ, ಆಯ್ದಕ್ಕಿ ಮಾರಯ್ಯ–ಲಕ್ಕಮ್ಮ. ಮೋಳಿಗೆ ಮಾರಯ್ಯ–ಮಹಾದೇವಮ್ಮ ಮುಂತಾದ ಅನೇಕ ಶರಣರು ಕುಟುಂಬದಲ್ಲಿದ್ದುಕೊಂಡೆ ಪಾರಮಾರ್ಥ ಕಂಡುಕೊಂಡವರು.

ಇವರ ಆದರ್ಶ ಕೌಟುಂಬಿಕ ಸಂಸ್ಕಾರ ನಮಗಿಂದು ಮಾದರಿ, ಇಂಥ ಶರಣ ಸಂಸ್ಕೃತಿಯ ಆದರ್ಶ ಕುಟುಂಬಗಳು ಇವತ್ತಿಗೂ ಯಾವತ್ತಿಗೂ ಸಮಾಜಕ್ಕೆ ಪ್ರಸ್ತುತವಾದವುಗಳು.

ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪದು ಶಿವಂಗೆ
ಸತಿ ಪತಿಗಳೊಂದಾಗದವನ ಭಕ್ತಿ ಅಮೃತದೊಳು
ವಿಷ ಬೆರೆದಂತೆ ಕಾಣಾ । ರಾಮನಾಥ

ಸಂಸಾರ ಹೇಯವಲ್ಲವೆಂದು ಮಧುರ ದಾಂಪತ್ಯಕ್ಕೆ ಮಹತ್ವಕೊಟ್ಟಿರುವುದನ್ನು ಈ ಮೇಲಿನ ವಚನದಲ್ಲಿ ಕಾಣುತ್ತೇವೆ. ಈ ಮೇಲಿನ ವಚನದ ಅಭಿಪ್ರಾಯ ಕೇವಲ ದಾಸಿಮಯ್ಯನದಾಗಿರದೆ ದುಗ್ಗಳೆಯ ಅಭಿಪ್ರಾಯವು ಅದೆ ಆಗಿರುವುದನ್ನು ಅವರ ಜೀವನ ದರ್ಶನದಿಂದ ನಾವು ತಿಳಿದುಕೊಳ್ಳಬಹುದು. ಶರಣರು ಕುಟುಂಬವೆಂಬ ರಥಕ್ಕೆ ಎರಡು ಚಕ್ರಗಳು ಒಂದು ಸತಿ ಇನ್ನೊಂದು ಪತಿ. ಇಲ್ಲಿ ಎರಡು ಚಕ್ರಗಳು ಒಬ್ಬರ ಕಣ್ಣು ಒಬ್ಬರಾಗಿ ಒಬ್ಬರಿಗೊಬ್ಬರು ತಿದ್ದುತ್ತಾ ಆಶ್ರಯಿಸುತ್ತಾ ಲೌಕಿಕದೊಂದಿಗೆ ಅಧ್ಯಾತ್ಮದ ಶಿಖರವನ್ನೇರಿದವರು, ಬಸವಣ್ಣನವರ ಧರ್ಮಪತ್ನಿ ಗಂಗಾಂಬಿಕೆ ಲಿಂಗನಿಷ್ಠೆಗಿಂತ ಪತಿನಿಷ್ಠೆಗೆ ಹೆಚ್ಚು ಮಹತ್ವ ಕೊಡುವುದನ್ನು ಅವರ ವಚನದಲ್ಲಿ ಕಾಣಬಹುದು.

ಪತಿಯಾಜ್ಞೆಯಲ್ಲಿ ಚರಿಪ ಸತಿಗ್ಯಾಕೆ ಪ್ರತಿಜ್ಞೆಯು?
ಪ್ರತಿಜ್ಞೆಯ ಪತಿ ಕರದಲ್ಲಿ ಪೋಪದಿಗೆ ಯಾತನೆಯಲ್ಲವೆ?
ಇವಳ ಲಿಂಗ ನಿಷ್ಠೆ ಇವಳಿಗೆ ನಮ್ಮ ನಿಷ್ಠೆ ಪತಿಯಾಜ್ಞೆಯಲ್ಲಿ
ಕಾಣಾ ಗಂಗಾಪ್ರಿಯ ಕೂಡಲಸಂಗಮದೇವಾ.
(ಶಿವಶರಣೆಯರ ವಚನ ಸಂಪುಟ–5 ವಚನ ಸಂಖ್ಯೆ.6 ಪುಟ.ಸಂಖ್ಯೆ–239 ಸಂ:ಡಾ? ವೀರಣ್ಣ ರಾಜೂರ)

ಗಂಗಾಬಿಕೆ ಲಿಂಗನಿಷ್ಠೆಗಿಂತ ಪತಿನಿಷ್ಠೆಗೆ ಮಹತ್ವ ಕೊಡುತ್ತಾಳೆ. ಪತಿಗೆ ಆದರ್ಶ ಸತಿಯಾಗಿ ನಡೆಯುವವಳಿಗೆ ಲಿಂಗಕ್ಕಿಂತಲೂ ಪತಿಯೇ ಹೆಚ್ಚು ಎಂಬುದು ಈ ವಚನದ ಭಾವಾರ್ಥದ ಜೊತೆಗೆ ಶರಣೆಯರಲ್ಲಿ ಒಂದು ಸುಂದರ ಕುಟುಂಬದ ಪರಿಕಲ್ಪನೆ ಅಗಾಧವಾಗಿತ್ತು ಎನ್ನಬಹುದು.

ಕುಟುಂಬವೇ ಒಂದು ಮಾಯೆ ಎಂಬುವವರನ್ನು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ತನ್ನ ಒಂದು ವಚನದಲ್ಲಿ ಪ್ರಶ್ನಿಸುತ್ತಾ ಕುಟುಂಬದ ಮಹತ್ವವನ್ನು ಎತ್ತಿ ಹಿಡಿಯುತ್ತಾಳೆ.

ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು,
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಮಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು
ಮಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
(ಶಿವಶರಣೆಯರ ವಚನ ಟ–5.ವಚನಸಂಖ್ಯೆ–10. ಪುಟಸಂಖ್ಯೆ–244. ಸಂ:ಡಾ? ವೀರಣ್ಣ ರಾಜೂರ)

ಇಂತಹ ಪ್ರಶ್ನೆಗಳನ್ನು ಕೇಳುತ್ತಾ ಹೋಗುವ ಈ ಶರಣೆ ಪ್ರಶ್ನೆಗೆ ಉತ್ತರವನ್ನು ತಾನೆ ಕೊಡುವುದರ ಮೂಲಕ ಕುಟುಂಬವನ್ನು ಎತ್ತಿ ಹಿಡಿಯುತ್ತಾಳೆ. ಹೆಣ್ಣು, ಹೊನ್ನು, ಮಣ್ಣು ಲಿಂಗಕ್ಕೆ ವಿರುದ್ಧವಾದವುಗಳಲ್ಲ. ಇಂದ್ರಿಯ ಬಿಟ್ಟು ಅಂಗವಿಲ್ಲ, ಅಂಗಬಿಟ್ಟು ಲಿಂಗವಿಲ್ಲ ಇಂತಹ ಮಧುರ ಸಂಬಂಧಗಳನ್ನು ಕಡಿದು ಹಾಕಿ ಎಲ್ಲವನ್ನು ಬಿಟ್ಟು ಏನನ್ನೋ ಪಡೆಯುವಿರಿ ಎಂಬುದು ಮೂರ್ಖತನವೆಂದು ಹೇಳುತ್ತಾಳೆ.

ಶರಣರು ವಚನಗಳಲ್ಲಿ ವ್ಯಕ್ತಪಡಿಸಿದ ವಿಚಾರಗಳು ಅವರ ಅನುಭವಗಳಿಂದ ಬಂದವುಗಳಾಗಿದ್ದವು. ಕುಟುಂಬ ಎಂದರೆ ಕೇವಲ ಹೆಣ್ಣು ಗಂಡು ಕೂಡಿ ಜೀವನ ಸಾಗಿಸುವಂಥದ್ದಲ್ಲ. ಇದರ ಹಿಂದೆ ಅನೇಕ ನೀತಿ ನಿಯಮ ಮೌಲ್ಯಗಳು ಇರುತ್ತಿದ್ದವು. ಪ್ರತಿಯೊಂದು ಸಂಬಂಧಗಳು ಅದರದೆಯಾದ ಭಾವನೆಗಳಿಂದ ಕೂಡಿರುತ್ತಿದ್ದವು. ಶಿವಶರಣೆ ಅಕ್ಕಮ್ಮ ತನ್ನ ವಚನದಲ್ಲಿ ಸಂಬಂಧಗಳ ಬಗ್ಗೆ ಸುಂದರವಾಗಿ ವ್ಯಕ್ತಪಡಿಸಿದ್ದಾಳೆ.

ತಂದೆಯ ಒಂದಾಗಿ ಬಂದ ಸಹೋದರ ಗಂಡೆಲ್ಲ ತಂದೆಯಾದ
ಕಾರಣ ಆ ತಂದೆಯ ಒಡಹುಟ್ಟಿದ ಹೆಣ್ಣೆಲ್ಲ ತನಗೆ ತಾಯಲ್ಲವೆ?
ಆಕೆಯನತ್ತೆಯೆಂಬ ಜಗದ ತೆತ್ತು ಮತ್ಸರ
ನಾವರಿಯವಯ್ಯಮತ್ತೆ ತಾವು ಬಳಸುವುದಕ್ಕೆ
ಗೊತ್ತಿಲ್ಲವೆಂದಾಕೆಯ ಮಗಳನ್ನು ಸತಿಯನೆ
ಮಾಡಿಕೊಳ್ಳಬಹುದೆ? ಹೆತ್ತ ತಾಯ ಮಗಳ ಮಗಳು
ಒಡಹುಟ್ಟಿದವಳಲ್ಲವೆ? ಸೊಸೆ–ಮಾವನೆಂದು ಸತಿಯಂ
ಮಾಡಿಕೊಂಬರು ನೋಡಾ ಸೊಸೆಗೂ ಮಾವಂಗೂ ಸಂಸರ್ಗ
ನಿಲ್ಲುವುದೆ?
(ಶಿವಶರಣೆಯರ ವಚನ ಸಂಪುಟ –5 ವಚನ ಸಂಖ್ಯೆ.55, ಪುಟ ಸಂಖ್ಯೆ 151 ಸಂ:ಡಾ. ವೀರಣ್ಣ ರಾಜೂರ)

ಈ ಮೇಲಿನ ವಚನ ಇಂದಿನ ವೈದ್ಯಲೋಕಕ್ಕೂ ಮಾರ್ಗದರ್ಶನವಾಗುವುದರೊಂದಿಗೆ ಸಂಬಂಧಗಳು ಹೇಗಿರಬೇಕೆಂಬುದನ್ನು ಅಕ್ಕಮ್ಮ ಹೇಳಿರುವುದನ್ನು ಕಾಣಬಹುದಾಗಿದೆ.

ಅದೇ ರೀತಿಯಾಗಿ ಕುಂಬಾರ ಗುಂಡಯ್ಯನ ಮಡದಿ ಕೇತಲದೇವಿಯು ಕೌಟುಂಬಿಕ ಜೀವನಕ್ಕೆ ಪ್ರಾಶಸ್ತ್ಯ

ಕೊಡುವುದರೊಂದಿಗೆ ಒಂದು ಕುಟುಂಬ ಸಮಾಜದಲ್ಲಿ ಆದರ್ಶವೆನಿಸಿಕೊಳ್ಳಬೇಕಾದರೆ ಸತಿ–ಪತಿಯರು ಹೇಗಿರಬೇಕೆಂದು ಹೇಳುತ್ತಾಳೆ.

ಹದ ಮಣ್ಣಲ್ಲದೆ ಮಡಕೆಯಾಗದು, ವೃತ ಹೀನನ
ಬೆರೆಯಲಾಗದು, ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರಾ
(ಶಿವಶರಣೆಯರ ವಚನ ಸಂಪುಟ –5 ವಚನ ಸಂಖ್ಯೆ.1, ಪುಟ ಸಂಖ್ಯೆ 245 ಸಂ:ಡಾಃ ವೀರಣ್ಣ ರಾಜೂರ)

ಮಡಕೆಯನ್ನು ತಯಾರಿಸಲು ಹೇಗೆ ಹದವಾದ ಮಣ್ಣು ಬೇಕೊ ಹಾಗೆಯೇ ಪರಮಾತ್ಮನನ್ನು ಕಾಣಲು ಅಂತರಂಗ–ಬಹಿರಂಗ ಎರಡು ಶುದ್ಧವಾಗಿರಬೇಕು ಹಾಗೆಯೆ ಸತಿ–ಪತಿಯರ ಭಾವಗಳೆರಡು ಒಂದಾದಾಗ ಮಾತ್ರ ಆ ಕುಟುಂಬದಲ್ಲಿ ಸಾಮರಸ್ಯ ಇರಲು ಸಾಧ್ಯವೆಂದು ಹೇಳುತ್ತಾಳೆ.

ಸಂಸಾರ ಮತ್ತು ಕುಟುಂಬ ಸದಸ್ಯರ ಸಂಬಂಧಗಳು ಭಗವಂತನ ಸೇವೆಗೆ ತೊಡಕಲ್ಲ ಅವು ಭಕ್ತಿಯ ಮಾರ್ಗಗಳೆ ಆಗಿವೆ ಆದರೆ ಆ ಸಂಬಂಧಗಳಲ್ಲಿ ಇಲ್ಲದಿದ್ದಾಗ ತುಂಬಾ ಕಷ್ಟವೆಂಬುದು ಎಡೆಮಠದ ನಾಗಿದೇವಯ್ಯನ ಮಡದಿ ಮಸಣ್ಣಮ್ಮ ಹೇಳಿರುವುದನ್ನು ಕಾಣಬಹುದು.

ಕಾಗೆಯ ನಾಯ ತಿಂದವರಿಲ್ಲ
ವೃತಭ್ರಷ್ಟನ ಕೂಡಿದವರಿಲ್ಲ
ನಾಯಿಗೆ ನಾರಂಗವಕ್ಕುವುದೆ?
ಲೋಕದ ನರಂಗೆ ವೃತವಕ್ಕುವುದೆ ಶಿವಬೀಜಕಲ್ಲದೆ?
ನೀವೇ ಸಾಕ್ಷಿ ನಿಜಗುಣೇಶ್ವರ ಲಿಂಗದಲ್ಲಿ
(ಶಿವಶರಣೆಯರ ವಚನ ಸಂಪುಟ –5 ವಚನ ಸಂಖ್ಯೆ.1, ಪುಟ ಸಂಖ್ಯೆ 229 ಸಂ:ಡಾಃ ವೀರಣ್ಣ ರಾಜೂರ)

ಕಾಗೆ ನಾಯಿಯನ್ನು ತಿಂದವರಿಲ್ಲ ಹಾಗೆಯೇ ವ್ರತಭ್ರಷ್ಟನಾದವನೊಂದಿಗೆ ಸಂಸಾರ ನಡೆಸಲಾಗುವುದಿಲ್ಲ. ಹಾಗೆ ನಾಯಿಗೆ ಕಿತ್ತಳೆಯ ಹಣ್ಣನ್ನು ಕೊಟ್ಟರೆ ಆ ಕಿತ್ತಳೆಯ ರುಚಿ, ಅದರ ಬೆಲೆ ನಾಯಿಗೆ ಗೊತ್ತಾಗುವುದಿಲ್ಲವೋ ಹಾಗೆ ಪ್ರತಭ್ರಷ್ಟನಾದ ಅನಾಚಾರಿಯ ಜೊತೆಗಿನ ಸಂಸಾರ ನಿಸ್ಸಾರವೆಂದು ಹೇಳುತ್ತಾ ಒಂದು ಆದರ್ಶ ಕುಟುಂಬಕ್ಕೆ ಸತಿ–ಪತಿಯರ ಪಾತ್ರ ತುಂಬಾ ಮುಖ್ಯವಾದುದೆಂದು ಹೇಳುತ್ತಾಳೆ.

ಶಿವಶರಣರು ಕುಟುಂಬ ವ್ಯವಸ್ಥೆಯನ್ನು ತುಚ್ಚೀಕರಿಸಲಿಲ್ಲ. ಪರರ ಸತಿಯನ್ನು ಮಹಾದೇವಿ ಎಂದರು ಕುಟುಂಬ ವ್ಯವಸ್ಥೆಯಲ್ಲಿ ಅವರು ಹೊಂದಿದ ಸತಿ–ಪತಿಭಾವ ಲಿಂಗಾಂಗ ಸಾಮರಸ್ಯವಾಗಿ ಶರಣ ಸತಿ ಲಿಂಗ ಪತಿ ಎಂದಾಯಿತು. ಸತಿಗೆ ಪತಿ ಅರ್ಧಾಂಗವಾದರೆ ಪತಿಗೆ ಸತಿ ಅರ್ಧಾಂಗಿ ಇವೆರಡು ಸೇರಿ ಪರಿಪೂರ್ಣಾಂಗವಾಯಿತು. ಇದೆ ಅರ್ಧನಾರಿಶ್ವರ ಪರಿಕಲ್ಪನೆ. ಇಂತಹ ಉದಾತ್ತವಾದ ಶರಣ ಆದರ್ಶ ಕುಟುಂಬ ನಮ್ಮ ಕಣ್ಣ ಮುಂದೆ ಇದ್ದರೂ ಇವತ್ತಿನ ಕಾಲ ಸಂದರ್ಭದಲ್ಲಿ ಸಾಕಷ್ಟು ಕೌಟುಂಬಿಕ ವಿಘಟನೆಗಳು ಕಾಣಿಸಿಕೊಳ್ಳುತ್ತಿವೆ. ಕುಟುಂಬ ಪ್ರೀತಿ ಛಿದ್ರವಾಗುತ್ತಿದೆ ದಾಂಪತ್ಯದಲ್ಲಿ ಬಿರುಕು ಉಂಟಾಗುತ್ತಿರುವುದು ವಿಪರ್ಯಾಸವೇ ಸರಿ.

ಶಿವಶರಣರು ಮನೆಯೇ ದೇವಸ್ಥಾನವನ್ನಾಗಿ ಮಾಡಿದರು. ಗೃಹಸ್ಥ ಜೀವನದಲ್ಲೇ ಆಧ್ಯಾತ್ಮಿಕ ಮಾರ್ಗವನ್ನು ತೋರಿಸಿದ್ದಾರೆ. ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸುತ್ತಲೇ ಭಕ್ತಿಯನ್ನು ಸಾಧಿಸಿ ತೋರಿಸಿದ್ದಾರೆ.

ಶರಣ ಸಂಸ್ಕೃತಿಯಲ್ಲಿ ಕುಟುಂಬಗಳಲ್ಲಿ ದಂಪತಿಗಳೀರ್ವರಿಗೆ ಒಬ್ಬರ ಮೇಲೊಬ್ಬರಿಗೆ ಎಷ್ಟು ಗೌರವವಿತ್ತೆಂದರೆ ಒಬ್ಬರಿಗೊಬ್ಬರು ಗುರುಗಳೆಂದು ಸಂಬೋಧಿಸಿಕೊಳ್ಳುತ್ತಾರೆ. ಸತಿಯಲ್ಲಿ ಪತಿ ದೇವರನ್ನು ಪತಿಯಲ್ಲಿ ಸತಿ ದೇವರನ್ನು ಕಾಣುತ್ತಾರೆ. ನೀಲಾಂಬಿಕೆಯ ಈ ಕೆಳಗಿನ ವಚನದಲ್ಲಿ ಆ ಭಾವ ಕಾಣಬಹುದು,

ನಾನಾರ ಸಾರುವೆನೆಂದು ಚಿಂತಿಸಲೇತಕ್ಕಯ್ಯಾ ಬಸವಾ?
ನಾನಾರ ಹೊಂದುವೆನೆಂದು ಭ್ರಮೆಪಡಲೇತಕ್ಕಯ್ಯಾ?
ನಾನಾರ ಇರವನರಿವೆನೆಂದು ಪ್ರಳಾಪಿಸಲೇತಕಯ್ಯಾ ಬಸವಾ?
ಪರಿಣಾಮಮೂರ್ತಿ ಬಸವನ ರೂಪು ಎನ್ನಕರಸ್ಥಲದಲ್ಲಿ
ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇತಕಯ್ಯಾ ಬಸವಾ
(ಶಿವಶರಣೆಯರ ವಚನ ಸಂಪುಟ –5 ವಚನ ಸಂಖ್ಯೆ179,
ಪುಟ ಸಂಖ್ಯೆ 297 ಸಂ:ಡಾ? ವೀರಣ್ಣ ರಾಜೂರ)

ತನ್ನ ಪತಿ ಬಸವಣ್ಣನೇ ತನ್ನ ಲಿಂಗದಲ್ಲಿರುವಾಗ ಸಂಗಯ್ಯನ ಸಾನಿಧ್ಯದ ಆಶೆ ತನಗಿಲ್ಲವೆಂದು ನೀಲಾಂಬಿಕೆ ಹೇಳುವಲ್ಲಿ ಆಕೆಯ ಪತಿನಿಷ್ಠೆ ವ್ಯಕ್ತವಾಗುತ್ತದೆ.

ವೀರ ವೈರಾಗ್ಯನಿಧಿ ಅಕ್ಕಮಹಾದೇವಿಯ ಅಭಿಪ್ರಾಯವು ಇದಕ್ಕೆ ಹೊರತಾಗಿಲ್ಲ. ಪರಮಾತ್ಮನನ್ನೆ ತನ್ನ ಪತಿಯಾಗಿ ಸ್ವೀಕರಿಸಿದ ಅಕ್ಕ ತನ್ನ ಹಲವಾರು ವಚನಗಳಲ್ಲಿ ಸತಿಪತಿಯರ ನಡುವಿನ ಸಂಭಾಷಣೆ ಮತ್ತು ತನ್ನ ಗಂಡನನ್ನು ಅದಮ್ಯವಾಗಿ ಪ್ರೀತಿಸುವ ಅವರ ಆ ಭಾವ ಅವರ ಅನೇಕ

ವಚನಗಳಲ್ಲಿ ಕಾಣುತ್ತೇವೆ. ಹುಟ್ಟಿದೆ ಶ್ರೀಗುರುವಿನ ಹಸ್ತದಲ್ಲಿ ಬೆಳೆದೆನು ಅಸಂಖ್ಯಾತರ ಕರುಣದೊಳಗೆ ಭಾವವೆಂಬ ಹಾಲು ಸುಜ್ಞಾನವೆಂಬ ತುಪ್ಪ ಪಾರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ ಇಂತಪ್ಪ ತ್ರಿವಿಧಾಮೃತವನ್ನು ದಣಿಯಲೆರೆದು ಸಲಹಿದಿರೆನ್ನ ವಿವಾಹವ ಮಾಡಿದಿರಿ ಸಯವಪ್ಪ ಗಂಡಂಗೆ ಕೊಟ್ಟರಿ, ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ. ಚನ್ನಮಲ್ಲಿಕಾರ್ಜುನನ ಕೈವಿಡಿದು ನಿಮ್ಮ ತಲೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆನು, (ಶಿವಶರಣೆಯರ ವಚನ ಸಂಪುಟ –5 ವಚನ ಸಂಖ್ಯೆ.426 ಪುಟ ಸಂಖ್ಯೆ 128. ಸಂ:ಡಾ? ವೀರಣ್ಣ ರಾಜೂರ)

ಈ ರೀತಿಯಾಗಿ ಅಕ್ಕ ಕುಟುಂಬದ ಪರಿಕಲ್ಪನೆಯನ್ನು ಅದ್ಭುತವಾಗಿ ಕೊಡುತ್ತಾಳೆ ಶರಣ ಸಂಕುಲವೇ ತನ್ನ ಕುಟುಂಬ ನಿವೇಲ್ಲ ಸೇರಿ ಚನ್ನಮಲ್ಲಿರ್ಕಾಜುನನೆಂಬ ಗಂಡನೆಗೆ ಮದುವೆ ಮಾಡಿದ್ದಿರಿ. ಆತನೊಂದಿಗೆ ಒಳ್ಳೆಯ ರೀತಿಯಲ್ಲಿ ಸಂಸಾರ ನಡೆಸಿ ನಿಮಗೆಲ್ಲ ಒಳ್ಳೆಯ ಹೆಸರನ್ನೆ ತಂದುಕೊಡುವೆನೆಂದು ಹೇಳುವುದರ ಮುಖಾಂತರ ಸಮಾಜದಲ್ಲಿ ಕುಟುಂಬ ಮತ್ತು ದಾಂಪತ್ಯದ ಮಹತ್ವ ಎತ್ತಿ ಹಿಡಿದಿದ್ದಾಳೆ. ಕುಟುಂಬ ಹಾಗೂ ಸಾವಾಜಿಕ ಬಾಂಧವ್ಯಗಳಿಗೆ ಅಕ್ಕಮಹಾದೇವಿ ಅತ್ಯಂತ ಗೌರವ ಕೊಡುವುದನ್ನು ಹಾಗೂ ಗುರುಹಿರಿಯರ ಸತ್ಸಂಗದ ಮಹತ್ವದಿಂದ ಸಮಾಜದಲ್ಲಿ ವ್ಯಕ್ತಿ ಒಳ್ಳೆಯ ಕುಟುಂಬ ಕಟ್ಟಲು ಸಾದ್ಯವೆಂದು ಹೇಳುತ್ತಾರೆ.

ಕಣ್ಣೆ ಶೃಂಗಾರ ಗುರುಹಿರಿಯರ ನೋಡುವುದು,
ಕರ್ಣಕ್ಕೆ ಶೃಂಗಾರ ಪುರಾತನರ ಸಂಗೀತಂಗಳ ಕೇಳುವುದು,
ವಚನಕ್ಕೆ ಶೃಂಗಾರ ಸತ್ಯವ ನುಡಿವುದು,
ಸಂಭಾಷಣೆಗೆ ಶೃಂಗಾರ ಸದ್ಭಕ್ತರ ನುಡಿಗಡಣ,
ಕರಕ್ಕೆ ಶೃಂಗಾರ ಸತ್ಪಾತ್ರಕ್ಕಿವುದು,
ಜೀವಿಸುವ ಜೀವನಕ್ಕೆ ಶೃಂಗಾರ ಗಣಮೇಳಾಪ,
ಇವಿಲ್ಲದ ಜೀವಿಯ ಬಾಳುವೆ ಏತಕ್ಕೆ ಬಾತೆಯಯ್ಯಾ
ಚೆನ್ನಮಲ್ಲಿಕಾರ್ಜುನಾ!

(ಶಿವಶರಣೆಯರ ವಚನ ಸಂಪುಟ–5 ವಚನ ಸಂಖ್ಯೆ.142, ಪುಟ ಸಂಖ್ಯೆ 45 ಸಂ:ಡಾಃ ವೀರಣ್ಣ ರಾಜೂರ)

ಒಟ್ಟಿನಲ್ಲಿ ಹೇಳುವುದಾದರೆ ಶರಣರು ಲೌಕಿಕದಲ್ಲಿಯೇ ಉಳಿದು ಪಾರಮಾರ್ಥ ಕಂಡುಕೊಂಡವರು, ಕುಟುಂಬವನ್ನೇ ಸಾಧನೆಯ ಸ್ಥಾನವನ್ನಾಗಿ ಮಾಡಿಕೊಂಡು ಜಗತ್ತಿಗೆ ಮಾದರಿಯಾದವರು.

– ಡಾ. ಮೀನಾಕುಮಾರಿ ಪಾಟೀಲ್
ಕನ್ನಡ ಸಹ ಪ್ರಾಧ್ಯಾಪಕರು,
ಸರ್ಕಾರಿ ಪ್ರ.ದ. ಕಾಲೇಜು, ಚಿಟಗುಪ್ಪ, ಬೀದರ್.

ಹೆಣ್ಣು ಹೆಣ್ಣಲ್ಲ..... ಶಕ್ತಿಧಾತೆ

20ನೇ ಪುಟದಿಂದ....

ಕುಟುಂಬದಂತೆ ಸಾವಾಜಿಕ ಜವಾಬ್ದಾರಿಯನ್ನು ಸರಿದೂಗಿಸಬೇಕೆಂಬುದು ಇವರ ಚಿಂತನೆ. ಶರಣರು ಸಕಲ ಜೀವಾತ್ಮರಿಗೆ ಲೇಸ ಬಯಸುವವರಲ್ಲವೇ...? ಮಾನವೀಯ ಅನುಕಂಪವನ್ನು ಹೊಂದಿರುವಂತಹ ಮೌಲ್ಯ 12ನೇ ಶತಮಾನದ ಶರಣ ಸಾಹಿತ್ಯದ ಮೂಲ ಉದ್ದೇಶ.

ಇಂದಿನ ದಿನಗಳಲ್ಲಿ ಶೈಕ್ಷಣಿಕವಾಗಿ ಮಹಿಳೆಯರು ಮುಂದುವರಿದಿದ್ದಾರೆ. ವಿದ್ಯಾವಂತ ಮಹಿಳೆಯರು ಉದ್ಯೋಗಸ್ಥರಾಗಿದ್ದಾರೆ. ಕೆಲವರು ಉದ್ಯಮಿಗಳಾಗಿದ್ದಾರೆ. ರಾಜಕೀಯ ಸಾಹಿತ್ಯ ಕ್ರೀಡೆ ನೃತ್ಯ ಕಲೆ ವಿಜ್ಞಾನ ಸಂಶೋಧನೆ ಪರ್ವತಾರೋಹಣ ಮುಂತಾದ ಕ್ಷೇತ್ರಗಳಲ್ಲಿ ಮಹಿಳೆಯರು ತಮ್ಮ ವಿಶಿಷ್ಟ ಛಾಪನ್ನು ಮೂಡಿಸುತ್ತಿರುವುದು ಸಂತಸದ ವಿಷಯ. ಆಟೋ ಓಡಿಸುವುದರಿಂದ ವಿಮಾನ ಹಾರಿಸುವ ತನಕ ಮನೆಯ ಕಸ ಗುಡಿಸುವುದರಿಂದ ಸೈನ್ಯದಲ್ಲಿ ಸೇವೆ ಸಲ್ಲಿಸುವ ತನಕ ಮಹಿಳೆಯರು ಕರ್ತವ್ಯ ನಿರತರಾಗಿರುವುದು ಮೆಚ್ಚುಗೆಯ ವಿಚಾರ. ಮಕ್ಕಳಿಗೆ ಮಮತಾಮಯಿಯಾಗಿ, ಕುಟುಂಬದಲ್ಲಿ ಪ್ರೀತಿ ತೋರುತ್ತಿರುವ ಮಹಿಳೆಯರ ಬದುಕು ಸಾರ್ಥಕವಾದುದು.

ಆದರೂ ಇಂದಿನ ದಿನಗಳಲ್ಲಿ ಹೆಣ್ಣಿನ ಬದುಕಲ್ಲಿ ನೋವು ಕಷ್ಟಗಳು ಕಡಿಮೆಯಾಗದಿರುವುದು ವಿಷಾದನೀಯ. ಅವರ ಸಮಸ್ಯೆಗಳು ತಪ್ಪಿಲ್ಲ. ಹೆಣ್ಣು ಭ್ರೂಣ ಹತ್ಯೆ ಹೆಣ್ಣು ಶಿಶು ಹತ್ಯೆ ಹೆಣ್ಣು ಮಕ್ಕಳ ಮಾರಾಟ ಮಹಿಳಾ ಅಪಹರಣ ಮಹಿಳಾ ಅತ್ಯಾಚಾರ ಲಿಂಗ ತಾರತಮ್ಯ ಕೌಟುಂಬಿಕ ದೌರ್ಜನ್ಯ ಪುರುಷ ಹೇರುವ ನೀತಿಗಳು ವರದಕ್ಷಿಣೆ ಕಿರುಕುಳ ಮುಂತಾದ ಸಮಸ್ಯೆಗಳು ಇಂದಿಗೂ ತಾಂಡವವಾಡುತ್ತಿವೆ. ಜೊತೆಗೆ ಹೆಣ್ಣಿನಿಂದಲೇ ಹೆಣ್ಣಿನ ಶೋಷಣೆಯಾಗುತ್ತಿರುವುದು ದೊಡ್ಡ ವಿಪರ್ಯಾಸ. ಈ ಎಲ್ಲಕ್ಕೂ ವಿಕಲ್ಪ ಮಾನಸಿಕ ಸ್ಥಿತಿಗಳೇ ಕಾರಣ.

ಇಂತಹ ಪರಿಸ್ಥಿತಿಯಲ್ಲಿ ಮಹಿಳೆ ಎಂದರೆ ಪುರುಷನ ಇಹಪರವೆರಡಕ್ಕೂ ಸಾಧಕಳು ಎನ್ನುವ ಶಿವಯೋಗಿ ಕಾಯಕಯೋಗಿ ಸಿದ್ದರಾಮರ ಮಾತು ಅನನ್ಯವಾದುದು. ಇಂತಹ ಮಾತುಗಳನ್ನು ಅರ್ಥೈಸಿಕೊಂಡು ಅನುಸರಿಸಬೇಕಷ್ಟೇ.

ಮಾತೃದೇವೋಭವ ಪಿತೃದೇವೋಭವ ಆಚಾರ್ಯ ದೇವೋ ಭವ

ನಾಡಿನ ಮಣ್ಣಿನಲ್ಲಿ, ಜೀವಿಯ ಪ್ರತಿ ಕಣಕಣ ಅಣುಅಣುವಿನಲ್ಲಿ ಅವ್ಯಾಹತವಾಗಿ ಸಂಯೋಜನೆಗೊಂಡಿರುವ ಪ್ರಖರಾಂಶಗಳೆ ಮಾತಾ, ಪಿತೃ ಮತ್ತು ಗುರು ವೃಂದವಾಗಿದೆ. ಇವರನ್ನು ತಿರಸ್ಕರಿಸಿ ಪುರಸ್ಕೃತರಾದವರಿಲ್ಲ. ಅಮಿತೆ, ವಿಕಸನ, ಸದ್ಗತಿಗೆ ದಿಕ್ಸೂಚಕರು. ಪ್ರತಿಯೊಬ್ಬರ ಅರಿವಿಗೆ ನಿಲುಕದ ಸುಖ ಪ್ರಾಪ್ತಿ, ಸಹಿಸಲಸಾಧ್ಯವಾದ ಸಂಕಷ್ಟ, ಸವಾಲು, ದುಃಖ ಮಂಜಿನಂತೆ ಕರಗಿ ನಿರ್ಮಲ ಸಂತೋಷದ ಸ್ಥಿತಿ ಸನ್ನಿಹಿತವಾಗುವಲ್ಲಿ ಮೇಲಿನ ದೇವರುಗಳ ಕೃಪೆ ಚಿರಸ್ಥಾಯಿಯೇ ಹೌದು. ನಮ್ಮೆಲ್ಲರ ತಂದೆ ತಾಯಿ, ಗುರು ನಮ್ಮಗಳ ಶ್ರೇಯಸ್ಸಿಗಾಗಿ ಸದಾ ಒಳಿತನ್ನು ಹಾರೈಸುವ ಅಕ್ಷಯಗಣಿಗಳೂ ಮಕ್ಕಳು (ಅಡ್ಡದಾರಿ) ಅಹಿತಕರ ಸಂಗತಿಗಳಲ್ಲಿ ತೊಡಗಿ ತಮಗೆ ಅಪಮಾನ ಉಂಟಾದರೂ ಸಹ ಅವರಿಗೆ ಕೆಡುಕನ್ನ ಬಯಸದೆ ಎದುರಾದ ಸವಾಲುಗಳನ್ನು ಮೆಟ್ಟಿನಿಂತು ಎಲ್ಲರ ಯಶಸ್ವಿಗೆ ಶುಭಾಶೀರ್ವಾದ ಮಾಡುವ ಕ್ಷಮಯಾ ಧರಿತ್ರಿಗಳು. ನಾವೆಲ್ಲರು ಯಾವುದೆ ಕಾರ್ಯಚಟುವಟಿಕೆಗಳಿಗೆ ನಡೆಸುವ ಯೋಜನೆ ಪ್ರಯತ್ನಕ್ಕೂ ಮುನ್ನ ಅವರಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವುದನ್ನು ಎಂದೆಂದಿಗೂ ಮರೆಯಬಾರದು. ಅವರುಗಳು ಅಂತಃಕರಣದಿಂದ ತಲೆಯ ಮೇಲೆ ಕೈಇಟ್ಟು ಶುಭವಾಗಲೆಂದು ಹಾರೈಸಿದಲ್ಲಿ ನಮಗೆ ಎದುರಾಗುವ ಆತಂಕಗಳು ಮಾಯವಾಗುತ್ತವೆ. ಸದ್ಗತಿಯ ಬಾಗಿಲು ತೆರೆದು, ಸದ್ಗುಣಗಳು ಮಸ್ತಕದಲ್ಲಿ ಮೂಡಿ ನೀತಿವಂತ ಮತ್ತು ಮೌಲ್ಯವರ್ಧಿತ ಪ್ರಜೆ ಒಂದು ಪ್ರತಿಷ್ಠಿತ ವ್ಯಕ್ತಿ, ದೈವ ಮೆಚ್ಚಿದ ಶರಣ ಸಿದ್ಧರಾಮ ಕೂಟದ ನಿಜ ಸದಸ್ಯನಾಗುವುದರಲ್ಲಿ ಯಾವ ಸಂಶಯವಿಲ್ಲ.

ನೊಳಂಬ ಪರಂಪರೆಯ ಕುಲಗುರು ಸಿದ್ಧರಾಮೇಶ್ವರರು ನಮಗೆ ಗುರುವಾಗಿ ಕಂಡರೆ, ರಾಣಿ ಚಾಮಲಾದೇವಿ, ದೀನಬ್ಬಾಸಿ, ನಂಜಮ್ಮ, ಗಂಗಮ್ಮ, ಸರ್ವಮಂಗಳಮ್ಮರವರು ಮಾತೃ ಸ್ವರೂಪಿಗಳಾಗಿಯೂ, ಕಂಬಿ (ಮಾತ, ಪಿತ, ಗುರುವಾಗಿ) ಸಿದ್ಧರಾಮಣ್ಣರವರು ತಾವು ಗೈದ ಸೇವೆಯ ಹಿನ್ನೆಲೆಯಲ್ಲಿ ಪರಮಾತ್ಮ ಮೆಚ್ಚುವ ತಂದೆಯಾಗಿ ಜನರ ಮನದಾಳದಲ್ಲಿ ಸ್ಮರಣೀಯರಾಗಿದ್ದಾರೆ.

ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರಃ
ನಂಬನಂಬಲೇ ಮನುಜ ಗುರುಪಾದವ
ಗುರುವೆ ಮಾತಾಪಿತನು ಗುರುವೆ ತಾರಕ ರೂಪನು
ಹರ ಮುನಿದರೆ ಗುರುಕಾಯ್ವನು
ಗುರುಮುನಿದರೆ ಹರಕಾಯ್ವಲಾರನು
ಧರೆಯ ಜೀವಿಗೆ ಬಂದ ಅಜ್ಞಾನವನ ಬಗೆಹರಿಸಲು
ಸಾರಿಜೀವನ ಭೋದಿಸಿದ ಆದಿ ಶ್ರೀಗುರು ಸಿದ್ಧರಾಮೇಶ್ವರರ
ಚರಣಾಬ್ದಿಯಲ್ಲಿ ನಂಬ ನಂಬಲೆ ಮನುಜ ಗುರು
ಸಿದ್ಧರಾಮೇಶ್ವರರ ಪಾದ ಪದ್ಮಗಳು, ದಿವ್ಯ ಸಂದೇಶವ
ಮುಟ್ಟಲು ಗುರುಪಾದವ ತಾ ಮಾಡಿದ ಪೂರ್ವದ
ಕರ್ಮವೆಲ್ಲವೂ ನಷ್ಟ ಒಪ್ಪುವುದು.
ನಿಷ್ಠೆಯಿಂದ ಧ್ಯಾನಿಸಲು ಬೆಟ್ಟದಷ್ಟು (ಘನ ಎಲ್ಲ)
ಕೆಟ್ಟ ಪಾಪಕರ್ಮಗಳೆಲ್ಲ ಸುಟ್ಟು ಸುಜ್ಞಾನೋದಯವಾಗುವುದು
ಗುರುಪಾದ ಸ್ಪರ್ಷ, ಸ್ಮರಣೆ ಮತ್ತು ತತ್ವಾದರ್ಶಗಳ ಪಾಲನೆ
ಪೋಷಣೆಯಿಂದ.

ಶ್ರೀಗುರು ಸಿದ್ಧರಾಮೇಶ್ವರ ತಪೋವನಗಳು ವಿವಿಧ ಕಡೆ ಸ್ಥಾಪಿತವಾಗಿ ಜಗದ್ಗುರು ಸಿದ್ಧರಾಮೇಶ್ವರ ಕೃಪಾಶೀರ್ವಾದ ಗೈಯ್ಯುವ ನೆಲೆಗಳಾಗಿ ಉನ್ನತಿಗೊಂಡು, ಸದ್ಭಕ್ತರನ್ನು ಆಶೀರ್ವದಿಸುವ ಪುಣ್ಯಕ್ಷೇತ್ರ ತೀರ್ಥಕ್ಷೇತ್ರ ಸದ್ಗತಿ ನೀಡುವ ಜ್ಞಾನ ಸಂಗಮ. ಸ್ಥಳ ಭೇಟಿ ಆಶೀರ್ವಾದ ಸ್ವೀಕರಿಸಿ ಪಾವನರಾಗುವ ನೈತಿಕ ನೆಲೆಗಳಾಗಿವೆ. ಅಲ್ಲಿನ ಹರಗುರು ಚರಮೂರ್ತಿ ಪೀಠಾಧಿಪತಿಗಳು, ಆಗಮಿಕರ ಸಮಸ್ತ ಸದ್ಭಕ್ತರಿಗೆ ಗುರುಸಿದ್ಧರಾಮರ ಜ್ಞಾನ ಧಾರೆಗಳು ಕಾಯಕತತ್ವ ಯೋಗಾಂಗ ಸಾಧ'ನೆಯನ್ನು ಅಂದಿನಿಂದ ಇಂದಿನವರೆಗೂ ನಿಷ್ಕಲ್ಮಷವಾಗಿ ಸೇವಾ ಮಗ್ನರಾಗಿ ಜೀವಂತಿಕೆ ಕಂಡು ಕೊಡುಗೆ ನೀಡುತ್ತಿವೆ.



ಮಲ್ಲೇಶಪ್ಪ ಟಿ.ಎಸ್.
ತಮ್ಮಡಿಹಳ್ಳಿ ಚಿಕ್ಕನಾಯಕನಹಳ್ಳಿ
ತಾಲ್ಲೂಕು, ತುಮಕೂರು ಜಿಲ್ಲೆ.
ಮೊ : 8050074810, 9380939580

ನೊಳಂಬ ಸಮಾಜದ ಕೊಡುಗೈ ದಾನಿ, ದಾನಶೂರ ಕಂಬಿ ಸಿದ್ಧರಾಮಣ್ಣನವರು ಪ್ರೀತಿ, ವಿಶ್ವಾಸ, ಸರಳ ಸಜ್ಜನಿಕೆ ಜೀವನ ನಡೆಸುವ

ಯಾವ ಪ್ರತಿಫಲಾಪೇಕ್ಷೆ ಇಲ್ಲದೆ ಸಮಸ್ತ ಚರ ಸ್ಥಿರಾಸ್ತಿಗಳನ್ನು 19–08–1937ರಲ್ಲಿ ನೊಳಂಬ ಸಮುದಾಯದ ಬಡವರು, ನಿರ್ಗತಿಕರು, ಆರ್ಥಿಕ ಅಸ್ಥಿರತೆಯಿಂದ ವ್ಯಾಸಂಗ ಮಾಡಲು ಸಾಧ್ಯವಾಗದೆ ವಂಚಿತರಾಗುವ ವಿದ್ಯಾರ್ಥಿಗಳಿಗಾಗಿ ಸಮಾಜದ ಉನ್ನತಿಗಾಗಿ ದಾನ ಮಡಿ ಇಲ್ಲದವರ, ಬಡವರ ಪಾಲಿಗೆ ತಂದೆಯಾದರು.

ದಾನಶೂರ ಕಂಬಿ ಸಿದ್ಧರಾಮಣ್ಣನವರ ಪೂರ್ವಜರು ತಿಪಟೂರು ತಾಲ್ಲೂಕು ಕುಪ್ಪಾಳು ಗ್ರಾಮದ ಕಂಬಿ ಮಲ್ಲಣ್ಣ ಮತ್ತು ವೀರಮ್ಮ ದಂಪತಿಗಳ ಮಗನಾಗಿ ಕ್ರಿ.ಶ. 1870ರಲ್ಲಿ ಜನಿಸಿದರು. ಮಂಡಿ ಹಿರಿಯಣ್ಣನ ಅಂಗಡಿಯಲ್ಲಿ ತಿಂಗಳಿಗೆ 2 ರೂ. ಸಂಬಳ ಪಡೆದು ಪರಿಶ್ರಮ ಮತ್ತು ನಿಷ್ಠೆಯಿಂದ ಕೆಲಸ ಮಾಡುತ್ತಾ ವ್ಯಾಪಾರದ ಅನುಭವ ಪಡೆದು ಸ್ವಂತ ವ್ಯವಹಾರ ಸಿಕ್ಕಿ ಸಗಟು ವ್ಯಾಪಾರ ಮಾಡಿ ಬಂದ ಹಣವನ್ನು ಪಕ್ಷ ಮತ್ತು ಒಳಪಂಗಡ ಬೇಧವನ್ನು ಪರಿಗಣಿಸದೆ ಬಡವರ ಏಳಿಗೆಗಾಗಿ ವಿನಿಯೋಗಿಸಿದರು.

ಕಂಬಿ ಸಿದ್ಧರಾಮಣ್ಣನವರು 1900ರಲ್ಲಿ ಹೊನ್ನಸಗೆರೆಯ ನಂಜಮ್ಮರೊಡನೆ ದಾಂಪತ್ಯ ಸಾಧಿಸಿದರು. ಸಂತಾನವಾಗದ ಹಿನ್ನೆಲೆಯಿಂದ 1910ರಲ್ಲಿ ಶ್ರೀಮತಿ ಗಂಗಮ್ಮರೊಡನೆ ವಿವಾಹವಾದರು. ಸಂತಾನ ಕಾಣದ್ದರಿಂದ ಸಮಾಜದ ಮಕ್ಕಳೆ ತಮ್ಮ ಮಕ್ಕಳೆಂದು ಅವರ ವ್ಯಾಸಂಗ, ಪೋಷಣೆ, ಉಚಿತ ವಿದ್ಯಾರ್ಥಿ ನಿಲಯವನ್ನು ಪ್ರಾರಂಭಿಸಿ ಮಾತೃಹೃದಯಸ್ಪರ್ಶಿ ಗುಣಸ್ವಭಾವಗಳಿಂದ ತಮ್ಮ ಮನೆಯಲ್ಲಿ ಫ್ರೀ ಬೋರ್ಡಿಂಗ್ ಆರಂಭಿಸಿ (1906–1945)ರವರೆಗೆ ಊಟ–ವಸತಿ ಸಹಿತ ಸೇವೆಯನ್ನಾರಂಭಿಸಿದರು. ಪ್ರತಿವರ್ಷ 30 ವಿದ್ಯಾರ್ಥಿಗಳಿಗೆ ಸಿದ್ಧರಾಮಣ್ಣರವರ ಧರ್ಮಪತ್ನಿಯರು ತಾಯಂದಿರಾಗಿ ಪೋಷಿಸಿದರು. ಮಕ್ಕಳ ಸೇವೆಯಿಂದ ಸಂತೃಪ್ತ ಜೀವನ, ಸಾರ್ಥಕತೆ ಕಂಡುಕೊಂಡರು.

ಕಂಬಿ ಸಿದ್ಧರಾಮಣ್ಣನವರು ಕ್ರಿ.ಶ. 1936ರಲ್ಲಿ ವಿದ್ಯಾಪ್ರಚಾರಕ ಸಂಘವನ್ನು ಸ್ಥಾಪಿಸಿದರು. ಸಂಘಕ್ಕೆ 50 ವಿವಿಧ ರೂಪದ ಚರ–ಸ್ಥಿರಾಸ್ತಿಗಳನ್ನು ಜನರ ಮತ್ತು ಬಡವಿದ್ಯಾರ್ಥಿಗಳ ಉನ್ನತಿಗಾಗಿ ದಾನ ಮಾಡಿದ ಮಹಾಪೋಷಕ ತಂದೆ ಸಾವಿರಾರು ನಿರ್ಗತಿಕ, ಬಡವರ ಪಾಲಿನ ಪಿತೃದೇವರಾದರು. ಕೊಡುಗೈ ದಾನಿಯಾದ ಸಿದ್ಧರಾಮಣ್ಣನವರು ಒಳಪಂಗಡದ ಭೇದಭಾವ ಮಾಡದೆ ಮೈಸೂರು ಲಿಂಗಾಯತ ವಿದ್ಯಾನಿಧಿ ಸಂಘ, ಜಯದೇವ ಮುರುಘರಾಜೇಂದ್ರ ಸ್ವಾಮಿಗಳ ನೇತೃತ್ವದ ವಿದ್ಯಾರ್ಥಿ ನಿಲಯ ಮತ್ತು ಸಂಗಕ್ಕೆ ರೂ. 15650/– (ಹದಿನೈದು ಸಾವಿರದ ಆರುನೂರು ಐವತ್ತು ರೂ)ಗಳನ್ನು ಉದಾರವಾಗಿ ದಾನ ಮಾಡಿದರು. ಸದರಿ ಸಂಘದವರು ವೀರಶೈವ ಲಿಂಗಾಯತ ಪಂಗಡದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಸಾಲರೂಪದ ವಿದ್ಯಾರ್ಥಿ ವೇತನ ಊಟ ಮತ್ತು ವಸತಿ ಸಹಿತ ವಿದ್ಯಾರ್ಥಿ ನಿಲಯವನ್ನು ಮುನ್ನಡೆಸಲು ಸಹಾಯಹಸ್ತ ನೀಡಿದರು. ಹೆಣ್ಣುಮಕ್ಕಳ ವ್ಯಾಸಂಗಕ್ಕೆ ಸಹಾಯವಾಗಲೆಂದು ತನ್ನ ಪತ್ನಿ ನಂಜಮ್ಮ ಮತ್ತು ಗಂಗಮ್ಮನವರು ಸಮಾಜದ ಅನಾಥ ಮಕ್ಕಳ ಉಜ್ವಲ ಭವಿಷ್ಯ ನಿರ್ಮಾಣಕ್ಕೆ ಸಹಕಾರಿಯಾಗಲೆಂದು ಅಕ್ಕಮಹಾದೇವಿ (ಶ್ರೇಷ್ಠ ವಚನಕಾರ್ತಿ ಮಹಾಶರಣೆ) ಅನಾಥ ಬಾಲಕಿಯರ ಆಶ್ರಮಕ್ಕೆ ಹಾಗೂ ಸ್ತ್ರೀಯರ ನ್ಯಾಯಪರವಾದ ಹಕ್ಕುಗಳ ಬಗ್ಗೆ ಜಾಗೃತಿಗಾಗಿ ಅಕ್ಕಮಹಾದೇವಿ ಪತ್ರಿಕೆ ಮುನ್ನಡೆಗಾಗಿ ರೂ. 8070/– (ಎಂಟು ಸಾವಿರದ ಎಪ್ಪತ್ತು ರೂ)ಗಳನ್ನು ದಾನವಾಗಿ ನೀಡಿ ಅನಾಥ ಹೆಣ್ಣುಮಕ್ಕಳ ಪಾಲಿನ ಮಾತೃದೇವತೆಯಾದರು.

ಸಿದ್ಧರಾಮಣ್ಣನವರು ತಿಪಟೂರಿನ ಗುರುಕುಲ ಆಶ್ರಮಕ್ಕೆ ಗುರು ಕರಿಬಸವೇಶ್ವರ ಸ್ವಾಮಿಗಳಿಗೆ ಊಟ, ವಸತಿ, ವಿದ್ಯಾಭ್ಯಾಸಕ್ಕೆ ಸಹಕಾರಿಯಾದರಲ್ಲದೆ ಮಠಕ್ಕೆ ಹಣ, ನೀರಿನ ಸೌಲಭ್ಯಕ್ಕಾಗಿ ಬಾವಿಯನ್ನು ತೆಗೆಸಿಕೊಟ್ಟು ವಿದ್ಯಾರ್ಥಿನಿಲಯ ಪ್ರಾರಂಭಕ್ಕೆ ಸಹಾಯ ಮಾಡಿದರು. ಸಿದ್ಧರಾಮಣ್ಣನವರು ಹಾಸನ ಜಿಲ್ಲೆ ಎಲಗುಂದ ಮಠದ ಚನ್ನಬಸವದೇವರಿಗೆ ಉಚಿತ ಊಟ, ವಸತಿ, ವ್ಯಾಸಂಗಕ್ಕೆ ಹಣ ನೀಡಿದರಲ್ಲದೆ ಹಾಸನ ನಗರದಲ್ಲಿ ಬಸವರಾಜೇಂದ್ರ ವಿದ್ಯಾರ್ಥಿ ನಿಲಯ ಸ್ಥಾಪಿಸಲು ಕಟ್ಟಡ ಕಟ್ಟಿಸಿಕೊಟ್ಟರು. ಚಿಕ್ಕಮಗಳೂರಿನ ಜಾಬಾಲಿ ಮಠದ ಪ್ರಭುಲಿಂಗ ದೇವರಿಗೆ ವಿದ್ಯಾರ್ಜನೆಗೆ ಊಟ–ವಸತಿ ಸಹಿತ ಸೌಲಭ್ಯನೀಡಿ ಮಠದ ಬೆಳವಣಿಗೆಗೆ ಧನ ಸಹಾಯ ನೀಡಿದರು. ಹಾಸನ ಜಿಲ್ಲೆ ಚಿಲ್ಕೂರಿನಲ್ಲಿ ಮಠವನ್ನು ನಿರ್ಮಿಸಲು ಉದಾರ ದಾನ ಮಾಡಿದರು.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಯಳನಡುವಿನ ಸಿದ್ಧರಾಮೇಶ್ವರ ಮಠಕ್ಕೆ ದಾನ ನೀಡಿದರು. ಬೆಂಗಳೂರಿನ ಹಲಗೆ ಒಡೆಯರ ಹಳ್ಳಿಯಲ್ಲಿ ಬಸವೇಶ್ವರ ದೇವಾಲಯ ನಿರ್ಮಿಸಿ ಆ ದೇವಾಲಯದ ಪೂಜಾ ಕೈಂಕರ್ಯಗಳಾದ ಹೂವು, ಹಣ್ಣು, ಗಂಧ, ಊದುಬತ್ತಿ ಪ್ರಸಾದ, ಅಭಿಷೇಕ ಉತ್ಸವ, ದೇವಾಲಯದಲ್ಲಿ ನೀರು, ಬೆಳಕು ಸ್ವಚ್ಛತೆಯ ಯಾವ ತೊಡಕುಗಳಿಲ್ಲದ ನಿರಂತರವಾಗಿ ಮುಂದೆ ನಡೆಯಲೆಂದು 4 ಎಕರೆ ಭೂಮಿಯನ್ನು ಜವಾಬ್ದಾರಿ ಪಡೆದು ಸಿದ್ದಬಸಪ್ಪನವರಿಗೆ ದಾನ ನೀಡಿ ಊರಿನ

ಅಭಿವೃದ್ಧಿಯ ಹರಿಕಾರರಾದರು. ಸಿದ್ಧರಾಮಣ್ಣನವರು ಪ್ರಾರಂಭಿಸಿದ ಉಚಿತ ವಿದ್ಯಾರ್ಥಿ ನಿಲಯದಿಂದ ಸದುಪಯೋಗ ಪಡೆದುಕೊಂಡು ಮಠದ ಪೀಠಾಪತಿಗಳು, ವ್ಯವಹಾರಸ್ಥರು, ನ್ಯಾಯಾಧೀಶರು, ರಾಜಕೀಯ ಮುಖಂಡರೂ ಉನ್ನತ ಹುದ್ದೆ ಪಡೆದರು. ಇವರ ಸಹಾಯದಿಂದ ಜೀವನ ಕಂಡುಕೊಂಡು ಯಶಸ್ವಿನ ಮೆಟ್ಟಿಲೇರಿದ ಸಾವಿರಾರು ಜನರ ಪಾಲಿನ ಪಿತೃದೇವರಾಗಿ ಚಿರಸ್ಮರಣೀಯರಾಗಿದ್ದಾರೆ.

ಉದಾ : ಇವರಲ್ಲಿ ವ್ಯಾಸಂಗ ಸೌಲಭ್ಯ ಪಡೆದಿದ್ದ ಪಾಲ್ಕುರಿಕೆ ನೀಲಕಂಠಶಾಸ್ತ್ರಿ, ಗೋಡೆಕೆರೆ ಸ್ವಾಮಿಗಳು, ಶಿಡ್ಲೇಹಳ್ಳಿ ಕರಿಬಸವ ದೇಶಿಕೇಂದ್ರ ಸ್ವಾಮಿಗಳು, ಕೆರೆಗೋಡಿ ರಂಗಾಪುರದ ಶಂಕರದೇವರು, ಯಳನಡು ಮಠದ ಬಸವ ರಾಜೇಂದ್ರಸ್ವಾಮಿಗಳು, ಅರಸೀಕೆರೆ ತಾಲ್ಲೂಕು, ಮಾಡಾಳು ಮಠದ ಚನ್ನಬಸವದೇವರು. ಸಿರಿಗೆರೆ ಸಂಸ್ಥಾನದ ಮಹಾಲಿಂಗದೇವರು ಇತ್ಯಾದಿ ಮಠದ ಮರಿಗಳು ಇವರ ಪೋಷಣೆಯಲ್ಲಿ ಕಲಿಯುತ್ತಿದ್ದರು. ಶ್ರೀಕಂಠಶಾಸ್ತ್ರಿಗಳು ವಿದ್ವಾನ್ ನಂಜುಂಡಶಾಸ್ತ್ರಿಗಳು, ಸಂಸ್ಕೃತ ವಿದ್ವಾಂಸ ತಿಪ್ಪೇಸ್ವಾಮಿಗಳು, ದೇಶಿಕಾಚಾರ್ಯ ಗುರುವಣ್ಣದೇವರ ಮಠದ ಶ್ರೀಗಳು ಮರಿದೇವರುಗಳಿಗೆ ಬೋಧಿಸಲು, ಕಲಿಸಲು ಸೂಕ್ತ ವ್ಯವಸ್ಥೆ ಮಾಡಿದ್ದರು.

ಸಿದ್ಧರಾಮಣ್ಣನವರ ವಿದ್ಯಾರ್ಥಿ ನಿಲಯದಲ್ಲಿ ನಿವೃತ್ತ ಮುಖ್ಯನ್ಯಾಯಾಧೀಶರಾಗಿದ್ದ ಪಿ.ಮಹಾದೇವಯ್ಯ ನವರು ರಾಜಕೀಯ ದುರೀಣರಾದ ಸಿದ್ದವೀರಪ್ಪ, ಸಿದ್ದನಂಜಪ್ಪ, ಮುನ್ಸಿಫ್ ಆಯುಕ್ತ ರಂಗಪ್ಪ, ಪ್ರಸಾದ್ ಮುಂತಾದ ವಿದ್ಯಾರ್ಥಿಗಳು ಕಲಿತು, ಸಮಾಜ ಮತ್ತು ದೇಶಸೇವೆಯಲ್ಲಿ ತೊಡಗಿಸಿಕೊಳ್ಳುವಲ್ಲಿ ಸಿದ್ಧರಾಮಣ್ಣನವರು ಪತ್ನಿಯರು ಅವರ ಪಾಲಿನ ಮಾತಾ ಪಿತೃ ದೇವರಾಗಿದ್ದರು. ಸಿದ್ಧರಾಮಣ್ಣನವರು ತಮ್ಮ ವಿದ್ಯಾರ್ಥಿ ನಿಲಯದಲ್ಲಿದ್ದ ವಿದ್ಯಾರ್ಥಿಗಳಿಗೆ ನೈತಿಕ, ಲೌಕಿಕ ಮತ್ತು ಮಾನವೀಯ ಮೌಲ್ಯಸಹಿತ ಉಪನ್ಯಾಸ, ಮಾರ್ಗದರ್ಶನ ನೀಡಲು ಅನುಭವ ಹೊಂದಿದ್ದ ರಾವ್ ಬಹದ್ದೂರ್ ಸರ್. ಕೆ.ಪಿ.ಪುಟ್ಟಣ್ಣಶೆಟ್ಟರು, ನ್ಯಾಯಮೂರ್ತಿ ಪಿ.ಪರಮಶಿವಯ್ಯ ನವರು, ಜಿ.ಶಾಂತವೀರಪ್ಪ, ಕೆ.ಸಿದ್ಧರಾಮಪ್ಪ ರವರುಗಳನ್ನು ಆಹ್ವಾನಿಸಿ ಅವಶ್ಯಕ ಮಾಹಿತಿ ದೊರಕಿಸುವ ವ್ಯವಸ್ಥೆ ಮಾಡಿದ್ದರು.

ತಾವು ಆರಂಭಿಸಿದ್ದ ಉಚಿತ ವಿದ್ಯಾರ್ಥಿ ನಿಲಯ ನಿರಂತರವಾಗಿ ಮುಂದೆ ನಡೆಸಿಕೊಂಡು ಹೋಗಬೇಕೆಂದು ಶಿಡ್ಲೆಹಳ್ಳಿಮಠದ ಕರಿಬಸವ ದೇಶಿಕೇಂದ್ರರನ್ನು ವಿನಂತಿಸಿದರು. ಬೆಂಗಳೂರಿನಲ್ಲಿರುವ ಮರಿಸ್ವಾಮಿ ಮಠ ಮತ್ತು ನಂಜನಗೂಡಿನ ನಂಜುಂಡೇಶ್ವರಸ್ವಾಮಿ ವರ್ಷಾಚರಣೆ ನಡೆಸಬೇಕೆಂದು ಕಂಬಿ ಪೂಜೆ ನಡೆಸಬೇಕೆಂದು ತಿಳಿಸಿ ಅಧ್ಯಾತ್ಮಿಕ ಪ್ರಸನ್ನರಾಗಿದ್ದಾರೆ.

ಕಂಬಿ ಸಿದ್ಧರಾಮಣ್ಣನವರು ಶಿಸ್ತು ಬದ್ಧ ಜೀವನ ನಡೆಸಿದರು. ಕಾಶಿ, ಸೊನ್ನಲಿಗೆ, ಶ್ರೀಶೈಲ ಸಂದರ್ಶಿಸಿ ಶುದ್ಧ ಕಾಯಕತ್ವ ಸಾಧಿಸಿ ಸಮಾಜದ ಕೊಡುಗೈ ದಾನಿಗಳಿಗೆ ದಾರಿದೀಪಕರಾಗಿ ಬಡ ವಿದ್ಯಾರ್ಥಿಗಳ ಕಲಿಕೆಗೆ ದೈವೀಪುರುಷರಾಗಿದ್ದಾರೆ. ಸಮಾಜದ ಒಳಿತಿಗಾಗಿ ಸದಾ ಚಿಂತಕರಾಗಿ ಕಾರ್ಯವನ್ನು ಮಾಡಿ ಕಿರಿಯರಿಗೆ ಆಶೀರ್ವದಿಸಿ ಹಾರೈಸಿದ್ದಾರೆ. ಯಾವ ಕಾಯಕವಾದರೇನು ನಿಷ್ಠೆ, ಪ್ರಾಮಾಣಿಕತೆಯಿಂದ ತಮ್ಮನ್ನು ತೊಡಗಿಸಿಕೊಂಡು ಸೇವೆಗೈಯ್ಯಲು ಅವರ ಆಶೀರ್ವಾದ, ಸ್ಮರಣೆ, ಕೈಲಾದ ಮಾತಾ, ಪಿತೃ, ಗುರು ತತ್ವಸಂದೇಶಗಳ ಸೇವೆ, ಪಾಲನೆಯಿಂದ ನಮ್ಮ ಬದುಕು ಹಸನಾಗುತ್ತದೆ. ಎಂತಹ ಕಷ್ಟಗಳು ಸಹ ಕರಗಿ ಸಂತೃಪ್ತಿಯ ಬದುಕು ನಮ್ಮದಾಗುತ್ತದೆ.



7 ಚಿನ್ನದ ಪದಕ ಪಡೆದ ನಯನ


ದಾವಣಗೆರೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ರೈತಾಪಿ ಕುಟುಂಬದ, ಹರಿಹರ ತಾಲ್ಲೂಕಿನ ಜಿಗಳಿ ಗ್ರಾಮದ ಎನ್.ಭರಮಗೌಡ ಮೀನಾಕ್ಷಿ ದಂಪತಿಗಳ ಪುತ್ರಿ ಎನ್.ಬಿ.ನಯನ ಎಂ.ಕಾಂ.ನಲ್ಲಿ ರ್‍ಯಾಂಕ್ ಪಡೆದು ಅತಿ ಹೆಚ್ಚು 7 ಚಿನ್ನದ ಪದಕಗಳನ್ನು ಪಡೆದಕೊಳ್ಳುವ ಮೂಲಕ ವಿಶ್ವವಿದ್ಯಾನಿಲಯಕ್ಕೆ ಹಾಗೂ ಸಮಾಜಕ್ಕೆ ಕೀರ್ತಿ ತಂದಿರುತ್ತಾರೆ. ಅವರಿಗೆ ನೊಳಂಬವಾಣಿ ಪತ್ರಿಕಾ ಬಳಗ ಹಾಗೂ ನೊಳಂಬ ಲಿಂಗಾಯತ ಸಂಘದ ವತಿಯಿಂದ ಅಭಿನಂದನೆಗಳು.

ನೊಳಂಬ ದೇವಾಲಯಗಳು

ಎರಡೂ ಕಡೆಗೆ ಸಲ್ಲುವಂತೆ ಭಿತ್ತಿಪಾದಗಳನ್ನು ರಚಿಸಲಾಗಿದೆ. ಇದು ಮೂಲತಃ ದೇವಾಲಯ ನಿರ್ಮಾಣಕಾಲದಲ್ಲೂ ಹೀಗೆಯೇ ಇದ್ದಿರಬೇಕು. ಅದನ್ನೇ ಮುಂದುವರೆಸಿರುವಂತೆ ತೋರುತ್ತದೆ. ದೇವಾಲಯವು ನೊಳಂಬರ ಕಾಲದಲ್ಲಿ ನಿರ್ಮಾಣವಾದ ರೀತಿಯಲ್ಲಿಯೇ ಇಂದಿಗೆ ಇರುವುದಿಲ್ಲ. ಇಂದಿಗೆ ಅತ್ಯಂತ ಅಚ್ಚುಕಟ್ಟಾಗಿ ಇರುವ ದೇವಾಲಯವು ಹಲವು ಬಾರಿ ಜೀರ್ಣೋದ್ಧಾರ ಗೊಂಡಿರುವಂತಿದೆ. ಶಿಲಾಮಯವಾದ ಹೊರಭಿತ್ತಿ ಯಾಗಲೀ ಮೂಲ ವಿಮಾನವಾಗಲೀ ಇಂದಿಗೆ ಉಳಿದಿಲ್ಲ. ಆದರೆ ಮೂಲ ಸ್ಥಿತಿಯಲ್ಲಿದ್ದಂತೆಯೇ ನಂತರದ ಕಾಲದಲ್ಲಿ ಅದನ್ನು ಜೀರ್ಣೋದ್ಧಾರ ಮಾಡಿರಬಹುದು ಎಂದೆನಿಸುತ್ತದೆ. ಇವೆಲ್ಲವನ್ನು ಪರಿಗಣಿಸಿ ಕಳೆದ ಮೂವತ್ತು ವರ್ಷಗಳ ಹಿಂದೆ ಇಡೀ ದೇವಾಲಯವನ್ನು ಪ್ರಾಚ್ಯವಸ್ತು ಇಲಾಖೆಯಿಂದ ದುರಸ್ತಿಮಾಡಲಾಗಿದೆ.

ಜಾಲಂಧ್ರಗಳು

ಕಲ್ಲೇಶ್ವರ ದೇವಾಲಯದಲ್ಲಿದ್ದ ಜಾಲಂಧ್ರಗಳು ಹಾಳಾಗಿವೆ. ಈಗ ಕೇವಲ ಎರಡು ಜಾಲವಾತಾಯನಗಳಿದ್ದು ಅದು ದೇವಾಲಯದ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿವೆ, ದಕ್ಷಿಣದ ಜಾಲವಾತಾಯನವು ಸಿಂಹದ ಮೇಲೆ ಕುಳಿತಿರುವ ಇಬ್ಬರು ಯಕ್ಷರನ್ನು ಹೊಂದಿದೆ. ಉತ್ತರದ ಜಾಲಂದ್ರವು ಎರಡು ಬಳ್ಳಿಗಳಲ್ಲಿರುವ ಕಮಲಗಳನ್ನು ಹೊಂದಿದೆ.



ಇನ್ನಿತರ ದೇವಾಲಯಗಳು


ಕಲ್ಲೇಶ್ವರ ದೇವಾಲಯವು ಷಟ್‌ಲಿಂಗ ದೇವಾಲಯಗಳ ಸಮೂಹವಾಗಿದೆ. ಇದರಲ್ಲಿ ಕಲ್ಲೇಶ್ವರ ದೇವಾಲಯವನ್ನು ಹೊರತುಪಡಿಸಿ ಒಟ್ಟು ಐದು ದೇವಾಲಯಗಳಿವೆ.
ಅವುಗಳೆಂದರೆ;

ದೇವಾಲಯ 1 :

ಕಲ್ಲೇಶ್ವರ ದೇವಾಲಯದ ಉತ್ತರದ ಕಡೆ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ಗೂಢಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಪ್ರಾಚೀನ ಶಿವಲಿಂಗವಿದ್ದು ತೆರೆದ ಅಂತರಾಳದಲ್ಲಿ ಪುಟ್ಟದಾದ ಸಣ್ಣ ನಂದಿಶಿಲ್ಪವನ್ನು ಇರಿಸಲಾಗಿದೆ. ಚತುರಶ್ರವಾದ ನಾಲ್ಕು ಕಂಬಗಳು ಗೂಢಮಂಟಪದಲ್ಲಿದ್ದು ಇವುಗಳು ಗ್ರಾನೈಟ್ ಕಲ್ಲಿನಲ್ಲಿ ನಿರ್ಮಿಸಿದ ಕಂಬಗಳಾಗಿವೆ. ಈ ಕಂಬಗಳಲ್ಲಿ ನೊಳಂಬರ ಕಾಲದ ಹಾರಗಳಂತಹ ರಚನೆಗಳಿದ್ದು ಅದರಲ್ಲಿ ಯಾವುದೇ ರೀತಿಯ ಕೆತ್ತನೆಯನ್ನು ಮಾಡಿರುವುದಿಲ್ಲ. ಬಾಗಿಲುವಾಡಗಳೂ ಸಹ ಯಾವುದೇ ಅಲಂಕರಣಗಳನ್ನು ಹೊಂದಿಲ್ಲದೇ ಅತ್ಯಂತ ಸರಳವಾಗಿದೆ. ಎತ್ತರದ ಪೀಠದ ಮೇಲೆ ನಿಂತಿರುವ ಈ ದೇವಾಲಯದ ರಚನೆ ಕಲ್ಲೇಶ್ವರ ದೇವಾಲಯವನ್ನೇ ಹೋಲುತ್ತದೆ.

ದೇವಾಲಯ 2 :

ಕಲ್ಲೇಶ್ವರ ದೇವಾಲಯದ ಉತ್ತರದ ಕಡೆ ಮೇಲಿನ ದೇವಾಲಯ 1ರ ಪಕ್ಕದಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ಗೂಢಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಪ್ರಾಚೀನ ಶಿವಲಿಂಗವಿದ್ದು ತೆರೆದ ಅಂತರಾಳದಲ್ಲಿ ಮುಟ್ಟದಾದ ಸಣ್ಣ ನಂದಿಶಿಲ್ಪವನ್ನು ಇರಿಸಲಾಗಿದೆ. ಚತುರಶ್ರವಾದ ವಿಜಯನಗರ ಕಾಲದ ನಾಲ್ಕು ಕಂಬಗಳು ಗೂಢ ಮಂಟಪದಲ್ಲಿದ್ದು ಇವುಗಳು ಗ್ರಾನೈಟ್ ಕಲ್ಲಿನಲ್ಲಿ ನಿರ್ಮಿಸಿದ ಕಂಬಗಳಾಗಿವೆ. ಸರಳವಾದ ಭಿತ್ತಿಯಿದೆ. ವಿತಾನದಲ್ಲಿ ಕಮಲದ ಚಿತ್ರಣವಿದೆ. ಬಾಗಿಲುವಾಡಗಳೂ ಸಹ ಯಾವುದೇ ಅಲಂಕರಣಗಳನ್ನು ಹೊಂದಿಲ್ಲದೇ ಅತ್ಯಂತ ಸರಳವಾಗಿದೆ. ಎತ್ತರದ ಪೀಠದ ಮೇಲೆ ನಿಂತಿರುವ ಈ ದೇವಾಲಯದ ರಚನೆ ಕಲ್ಲೇಶ್ವರ ದೇವಾಲಯವನ್ನೇ ಹೋಲುತ್ತದೆ.



ಸುಂಕಂ ಗೋವರ್ಧನ
ಬೆಂಗಳೂರು
ಮೊ : 9535762464

ಬಸವ ಮಂಟಪ :

ಈ ದೇವಾಲಯು 2ರ ಅಭಿಮುಖವಾಗಿ ವಿಜಯನಗರೋತ್ತರ ಕಾಲಘಟ್ಟದಲ್ಲಿ ನಿರ್ಮಿಸಲಾದ ನಂದಿ ಮಂಟಪವಿದೆ. ಪಶ್ಚಿಮಾಭಿಮುಖವಾಗಿರುವ ಸರಳವಾದ ಒಂದು ಮಂಟಪದಲ್ಲಿ ಪ್ರಾಚೀನ ನಂದಿಯ ಶಿಲ್ಪವನ್ನು ಇರಿಸಲಾಗಿದೆ. ಈ ನಂದಿಯು

ಅತ್ಯಂತ ಅಲಂಕಾರಿಕವಾಗಿದ್ದು ಕತ್ತಿನಲ್ಲಿ ಸರಗಳನ್ನು ಧರಿಸಿದ್ದು ನೀಳವಾದ ಘಂಟೆಗಳಿರುವ ಘಂಟಾಹಾರವನ್ನು ನಂದಿಯು ಹೊಂದಿದೆ. ವಿಶೇಷವಾದ ಸಂಗತಿಯೆಂದರೆ ಈ ಘಂಟಾಹಾರವನ್ನು ಬೆನ್ನಿನಲ್ಲಿ ಬಿಗಿದಿರುವ ಗಂಟೂ ಸಹ ಸೊಗಸಾಗಿ ಮೂಡಿಬಂದಿದೆ.

ದೇವಾಲಯ 3 :

ದೇವಾಲಯ 1 ಮತ್ತು ದೇವಾಲಯ 2 ಎದುರು, ದೇವಾಲಯ 2ರ ಅಭಿಮುಖವಾಗಿರುವ ಬಸವ ಮಂಟಪದ ಪಕ್ಕದಲ್ಲಿ ಈ ದೇವಾಲಯವಿದೆ. ಕಲ್ಲೇಶ್ವರ ದೇವಾಲಯದ ಉತ್ತರದ ಕಡೆ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಗರ್ಭಗೃಹವನ್ನು ಮಾತ್ರ ಹೊಂದಿದ್ದು ಬಾಗಿಲಾಗಲೀ ಬಾಗಿಲುವಾಡವಾಗಲೀ ಇಲ್ಲ. ಅತ್ಯಂತ ಸರಳವಾಗಿರುವ ಈ ಗುಡಿಯು ಬಹುಶಃ ವಿಜಯ ನಗರೋತ್ತರ ಕಾಲಘಟ್ಟದಲ್ಲಿ ನಿರ್ಮಾಣವಾಗಿರಬಹುದು. ಈ ಮೇಲೆ ತಿಳಿಸಿದ ದೇವಾಲಯ 1, 2, 3 ಹಾಗೂ ನಂದಿಮಂಟಪಗಳು ಕಲ್ಲೇಶ್ವರ ದೇವಾಲಯದ ಎಡಗಡೆಯಲ್ಲಿ ಉತ್ತರದ ದಿಕ್ಕಿನಲ್ಲಿದ್ದರೆ ಕೆಳಗೆ ತಿಳಿಸಲಾಗುವ ಎರಡು ದೇವಾಲಯಗಳು ಕಲ್ಲೇಶ್ವರ ದೇವಾಲಯದ ಬಲಗಡೆಯಲ್ಲಿ ಬರುತ್ತವೆ.

ದೇವಾಲಯ 4 :

ಕಲ್ಲೇಶ್ವರ ದೇವಾಲಯದ ಎದುರಿನಲ್ಲಿ ಬಲಗಡೆಯಲ್ಲಿ ಪೂರ್ವಾಭಿಮುಖವಾಗಿರುವ ಈ ದೇವಾಲಯವು ಅತ್ಯಂತ ಸರಳವಾಗಿದ್ದು ಗರ್ಭಗುಡಿ ಹಾಗು ಅಂತರಾಳವನ್ನು ಹೊಂದಿರುವ ಸರಳವಾದ ಗುಡಿಯಾಗಿದೆ.

ದೇವಾಲಯ 5 :

ಕಲ್ಲೇಶ್ವರ ದೇವಾಲಯದ ಬಲಗಡೆ ಉಮಾಮಹೇಶ್ವರ ಗುಡಿಯ ಹಿಂದೆ ಇರುವ ಈ ದೇವಾಲಯವು ಕಲ್ಲೇಶ್ವರ ದೇವಾಲಯದ ಎಡಪಕ್ಕದಲ್ಲಿರುವ ದೇವಾಲಯ 1ರಂತೆಯೇ ಪ್ರಾಚೀನವಾದುದಾಗಿದೆ. ಬಹುಶಃ ಇದು ನೊಳಂಬರ ಕಾಲದಲ್ಲಿಯೇ ನಿರ್ಮಾಣವಾದ ದೇವಾಲಯವಾಗಿದೆ. ಈ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ, ಗೂಢಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಪ್ರಾಚೀನ ಶಿವಲಿಂಗವಿದ್ದು ತೆರೆದ ಅಂತರಾಳದಲ್ಲಿ ಪುಟ್ಟದಾದ ಅತ್ಯಂತ ಭಗ್ನವಾದ ಗಣಪತಿಯ ತಲೆ ಹಾಗೂ ಇನ್ನೆರಡು ರುಂಡ ಹಾಗೂ ಕೈಕಾಲುಗಳಿಲ್ಲದ ಎರಡು ಶಿಲ್ಪಗಳನ್ನು ಇರಿಸಲಾಗಿದೆ.(ನವೆಂಬರ್ 2018) ಇದನ್ನು ಹಾಳುಮಾಡದೇ ಅಲ್ಲೇ ಎಲ್ಲಾದರೂ ಕಾಪಾಡುವಂತೆ ಅಲ್ಲಿನ ಸ್ಥಳೀಯರನ್ನು ಪ್ರಸ್ತುತ ಲೇಖಕನಿಂದ ಕೋರಲಾಗಿದೆ ರುದ್ರಕಾಂತ ಮಾದರಿಯ ನಾಲ್ಕು ಕಂಬಗಳು ಗೂಢಮಂಟಪದಲ್ಲಿವೆ. ಬಾಗಿಲುವಾಡ ಗಳೂ ಸಹ ಯಾವುದೇ ಅಲಂಕರಣಗಳನ್ನು ಹೊಂದಿಲ್ಲದೇ ಅತ್ಯಂತ ಸರಳವಾಗಿದೆ.

ಜೀರ್ಣೋದ್ಧಾರ

ಬಹುಶಃ ಈ ದೇವಾಲಯವು ಜೀರ್ಣೋದ್ಧಾರ ಗೊಂಡಾಗ ಅನಾಥವಾಗಿದ್ದ ಎರಡು ಹೊಯ್ಸಳ ವಿಗ್ರಹಗಳನ್ನು ತೆಗೆದುಕೊಂಡು ಬಂದು ಕಲ್ಲೇಶ್ವರ ದೇವಾಲಯದಲ್ಲಿ ಕಾಪಿಟ್ಟಿರಬಹುದು ಎಂದೆನಿಸುತ್ತದೆ. ಇದೇ ಊರಿನಲ್ಲಿರುವ ಅತ್ಯಂತ ಸುಂದರವಾದ ಹೊಯ್ಸಳರ ಕಾಲದ ಲಕ್ಷ್ಮೀನರಸಿಂಹ ಸ್ವಾಮಿ ದೇವಾಲಯಕ್ಕೆ ಸೇರಿರಬಹುದಾದ ಸೂರ್ಯ ಮತ್ತು ಚೆನ್ನಕೇಶವನ ಶಿಲ್ಪಗಳನ್ನು ಕಲ್ಲೇಶ್ವರ ದೇವಾಲಯದ ಹೊರಗೆ ದೇಗುಲಕ್ಕೆ ಅಭಿಮುಖವಾಗಿ ನಂದಿ ಮಂಟಪದ ಪಕ್ಕದಲ್ಲಿ ಇರಿಸಲಾಗಿದೆ. ದೇಗುಲದ ಎದುರಿಗೆ ಉತ್ತರಕ್ಕೆ ಕೇಶವನ ಶಿಲ್ಪವನ್ನು ಹಾಗೂ ಪೂರ್ವಕ್ಕೆ ಸೂರ್ಯನ ಶಿಲ್ಪವನ್ನೂ ಸಣ್ಣ ಸಣ್ಣ ಮಂಟಪಗಳಲ್ಲಿ ಇರಿಸಲಾಗಿದೆ. ನೊಳಂಬರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯವನ್ನು ಬಹುಶಃ ಹೊಯ್ಸಳರ ಕಾಲದಲ್ಲಿಯೇ ಒಂದು ಬಾರಿ ಜೀರ್ಣೋದ್ಧಾರ ಗೊಳಿಸಿರುವಂತೆ ತೋರುತ್ತದೆ. ನಂತರ ವಿಜಯನಗರೋತ್ತರ ಕಾಲಘಟ್ಟದಲ್ಲಿ ಪಾಳೆಯಗಾರರ ಕಾಲದಲ್ಲಿ ಮತ್ತೊಮ್ಮೆ ಜೀರ್ಣೋದ್ಧಾರಗೊಳಿಸಲಾಗಿದೆ. ಈ ಪ್ರದೇಶದಲ್ಲಿ ಹಾಗಲವಾಡಿಯ ಅರಸರ ಆಳ್ವಿಕೆಯಿತ್ತು ಎಂದು ಇಲ್ಲಿನ ಜನರ ಸ್ಮೃತಿಕೋಶದಲ್ಲಿರುವುದರಿಂದ ಬಹುಶಃ ಅವರೇ ಈ ದೇವಾಲಯಗಳ ಜೀರ್ಣೋದ್ಧಾರವನ್ನು ಮಾಡಿರಲೂ ಬಹುದು. 1935ರ ಮೈಸೂರು ಪುರಾತತ್ವ ವರದಿಯು ಐದು ವರ್ಷಗಳ ಹಿಂದೆ ಈ ದೇವಾಲಯವು ಭದ್ರಮ್ಮ ಅವರಿಂದ ಜೀರ್ಣೋದ್ಧಾರಗೊಂಡಿರುವುದನ್ನು ದಾಖಲಿಸುತ್ತದೆ, ಅಂದರೆ 1930ರಲ್ಲಿ ಇದು ಜೀರ್ಣೋದ್ಧಾರಗೊಂಡಿದೆ. ಆಂಡ್ರ ಕೋಹೆನ್ ಅವರು ತಮ್ಮ ಕ್ಷೇತ್ರಕಾರ್ಯ ಸಂದರ್ಭದಲ್ಲಿ ದಾಖಲಿಸಿರುವ ಹಾಗೆ 1987ರಲ್ಲಿ ಪುರಾತತ್ವ ಇಲಾಖೆಯವ ರಿಂದ ಈ ಗುಡಿಯು ಜೀರ್ಣೋದ್ಧಾರಗೊಂಡಿದೆ. ಪ್ರಸ್ತುತ ನಾನು ನವೆಂಬರ್ 2018ರಲ್ಲಿ ಕ್ಷೇತ್ರಕಾರ್ಯವನ್ನು ಮಾಡುತ್ತಿದ್ದಾಗ ಇಡೀ ದೇವಾಲಯವನ್ನು ಮತ್ತೆ ದುರಸ್ತಿಗೊಳಿಸಿ ಸುಣ್ಣಬಣ್ಣ ಮಾಡಿಸಿ ರಂಭಾಪುರಿ ಶ್ರೀಗಳಿಂದ ನವೆಂಬರ್ 28ರಿಂದ 30ರವರೆಗೆ ನಡೆದ ಪ್ರಾಣಪ್ರತಿಷ್ಠಾಪನ ಸಂದರ್ಭದಲ್ಲಿ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ಸಾರ್ವಜನಿಕ ವೀಕ್ಷಣೆಗೆ ಮುಕ್ತಗೊಳಿಸಲಾಗಿದೆ. ಕಲ್ಲೇಶ್ವರ ದೇವಾಲಯದಲ್ಲಿದ್ದ ರುದ್ರಕಾಂತ ಕಂಬಗಳನ್ನು, ಬಾಗಿಲುವಾಡ ವನ್ನು ಪಾಲಿಶ್ ಮಾಡಲಾಗಿದೆ. ಉಳಿದಂತೆ ಸುಣ್ಣಬಣ್ಣಗಳಿಗೆ ಮಾತ್ರ ಈ ದುರಸ್ತಿ ಸೀಮಿತವಾಗಿದೆ. ಮುಂದುವರೆಯುವುದು.....

ವಚನಗಳಲ್ಲಿ ಲಂಚದ ವಿಮರ್ಶೆ

ಭಾರತೀಯ ಚಿಂತನೆ ಪರಂಪರೆಯಲ್ಲಿ ನೈತಿಕತೆ ಎನ್ನುವುದು ಕೇವಲ ವೈಯಕ್ತಿಕ ಗುಣವಲ್ಲ; ಅದು ಸಮಾಜದ ಸ್ಥಿರತೆಗೆ ಅವಶ್ಯವಾದ ಆಧಾರಶಿಲೆ. ಧರ್ಮ, ಸತ್ಯ, ನ್ಯಾಯ, ಸಮತ್ವ ಈ ಮೌಲ್ಯಗಳ ಮೇಲೆ ನಿಂತಾಗ ಮಾತ್ರ ಸಮಾಜವು ಸುಸ್ಥಿರವಾಗಿ ಬೆಳೆಯುತ್ತದೆ. ಆದರೆ ಈ ಮೌಲ್ಯಗಳನ್ನು ಒಳಗಿನಿಂದ ಕುಂದಿಸುವ ಒಂದು ಸೂಕ್ಷ್ಮ ದೋಷ ಮಾನವ ಇತಿಹಾಸದ ಎಲ್ಲ ಹಂತಗಳಲ್ಲೂ ಕಾಣಿಸಿಕೊಂಡಿದೆ; ಅದು **"ಲಂಚ"**. ಲಂಚವೆಂದರೆ ಕೇವಲ ಹಣದ ಅಕ್ರಮ ವ್ಯವಹಾರವಲ್ಲ. ಅದು ನ್ಯಾಯವನ್ನು ವಕ್ರಮಾಡುವ ಮನೋವೃತ್ತಿ; ಅದು ಅಧಿಕಾರವನ್ನು ದುರುಪಯೋಗ ಮಾಡುವ ಅತೃಪ್ತಿ; ಅದು ಸತ್ಯವನ್ನು ಮೌನಗೊಳಿಸುವ ಗುಪ್ತ ಒಪ್ಪಂದ. ಲಂಚವು ವ್ಯಕ್ತಿಯ ಲೋಭದಿಂದ ಆರಂಭವಾಗಿ, ವ್ಯವಸ್ಥೆಯ ಕುಸಿತದವರೆಗೆ ಸಾಗುವ ಒಂದು ನೈತಿಕ ಸರಪಳಿ. ಪ್ರಾಚೀನ ರಾಜ್ಯಶಾಸ್ತ್ರಗಳಲ್ಲಿ ಕೂಡ ಲಂಚದ ಅಪಾಯವನ್ನು ಗಂಭೀರವಾಗಿ ಗುರುತಿಸಲಾಗಿದೆ. ಆದರೆ ಶರಣರ ವಚನಸಾಹಿತ್ಯದಲ್ಲಿ ಈ ವಿಚಾರವು ಮತ್ತಷ್ಟು ಆಳವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಲಂಚವು ಕೇವಲ ಆಡಳಿತದ ಸಮಸ್ಯೆಯಾಗಿ ಕಾಣಿಸಿಕೊಳ್ಳುವುದಿಲ್ಲ; ಅದು ಆತ್ಮದ ಪಾತಕವಾಗಿ ಚಿತ್ರಿತವಾಗುತ್ತದೆ. ಶರಣರು ಲಂಚವನ್ನು ಹಣದ ವಿನಿಮಯದ ಮಟ್ಟಕ್ಕೆ ಸೀಮಿತಗೊಳಿಸದೇ, ಅದನ್ನು ಅಳಿಮನದ ಸಂಕೇತವಾಗಿ, ಕಪಟಭಕ್ತಿಯ ರೂಪವಾಗಿ, ಧರ್ಮದ ವಿರುದ್ಧದ ನಡೆವಾಗಿ ಅರ್ಥೈಸುತ್ತಾರೆ.

ವಿಶೇಷವಾಗಿ ಸತ್ಯಕ್ಕ ಅವರ ಆತ್ಮಪ್ರತಿಜ್ಞೆಯ ವಚನ, ಸರ್ವಜ್ಞ ಅವರ ಸಾಮಾಜಿಕ ವ್ಯಂಗ್ಯಭರಿತ ತ್ರಿಪದಿಗಳು ಮತ್ತು ಜೇಡರ ದಾಸಿಮಯ್ಯ ಅವರ ರೂಪಕಪೂರ್ಣ ಅಭಿವ್ಯಕ್ತಿಗಳು ಇವುಗಳ ಮೂಲಕ ಲಂಚದ ವಿವಿಧ ಆಯಾಮಗಳು ಸ್ಪಷ್ಟವಾಗುತ್ತವೆ. ಸತ್ಯಕ್ಕ ಲಂಚವನ್ನು ದೈವಸಾಕ್ಷಿಗೆ ಎದುರಾಗಿ ತಿರಸ್ಕರಿಸುತ್ತಾರೆ; ಸರ್ವಜ್ಞರು ಲಂಚದ ಕೃತಕ ಬೆಳಕನ್ನು ಸೂರ್ಯನ ಶುದ್ಧ ಬೆಳಕಿನೊಂದಿಗೆ ಹೋಲಿಸಿ ಅದರ ಅಸತ್ಯತೆಯನ್ನು ಬಯಲಿಗೆಳೆಯುತ್ತಾರೆ; ಜೇಡರ ದಾಸಿಮಯ್ಯರು ಹರಿದ ಗೋಣಿಯ ರೂಪಕದ ಮೂಲಕ ಲಂಚದಿಂದ ಬಂದ ಲಾಭದ ಖಾಲಿತನವನ್ನು ತೋರಿಸುತ್ತಾರೆ. ಈ ಹಿನ್ನೆಲೆಯಲ್ಲಿಯೇ ಲಂಚದ ವಿಷಯವನ್ನು ವಚನಗಳ ಬೆಳಕಿನಲ್ಲಿ ಪರಿಶೀಲಿಸುವುದು ಅಗತ್ಯ. ಏಕೆಂದರೆ ಲಂಚದ ವಿರುದ್ಧದ ಹೋರಾಟ ಕೇವಲ ಕಾನೂನು ಕ್ರಮಗಳಿಂದ ಸಾಧ್ಯವಲ್ಲ; ಅದು ಮನಸ್ಸಿನ ಶುದ್ಧಿಯಿಂದ ಮಾತ್ರ ಸಾಧ್ಯ. ಶರಣರು ಸೂಚಿಸುವ ಮಾರ್ಗ– ತೃಪ್ತಿ, ನಿಷ್ಠೆ, ಆತ್ಮಸಾಕ್ಷಿಯ ಜಾಗೃತಿ– ಇವೇ ಲಂಚದ ವಿರುದ್ಧದ ನಿಜವಾದ ಔಷಧಗಳು. ಹೀಗಾಗಿ ಲಂಚದ ವಿಚಾರವು ಸಾಮಾಜಿಕ ವಿಮರ್ಶೆಯ ವಿಷಯವಾಗಿಯೇ ಉಳಿಯದೆ, ಆತ್ಮಪರಿಶೀಲನೆಯ ದಾರಿಯನ್ನೂ ತೆರೆಯುತ್ತದೆ. ಈ ಲೇಖನದಲ್ಲಿ ಆ ದಾರಿಯನ್ನೇ ವಚನಗಳ ಮೂಲಕ ಅನುಸರಿಸಲು ಪ್ರಯತ್ನಿಸಲಾಗಿದೆ.

ಮೊದಲು ಸತ್ಯಕ್ಕನ ವಚನವನ್ನು ಗಮನಿಸೋಣ;

ಲಂಚವಂಚನಕ್ಕೆ ಕೈಯಾನದೆ ಭಾಷೆ.
ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದರೆ
ನಾನು ಕೈ ಮುಟ್ಟಿ ಎತ್ತಿದೆನಾದರೆ
ನಿಮ್ಮಾಣೆ ನಿಮ್ಮ ಪ್ರಮಥರಾಣೆ.
ಅದೇನು ಕಾರಣವೆಂದರೆ, ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ.
ಇಂತಲ್ಲದೆ ನಾನು ಅಳಿಮನವ ಮಾಡಿ
ಪರದ್ರವ್ಯಕ್ಕೆ ಆಸೆ ಮಾಡಿದೆನಾದರೆ,
ನೀನಾಗಲೆ ಎನ್ನ ನರಕದಲ್ಲಿ ಅದ್ದಿ
ನೀನೆದ್ದು ಹೋಗಾ ಶಂಭುಜಕ್ಕೇಶ್ವರಾ.

ಈ ವಚನವು ಲಂಚದ ವಿರುದ್ಧದ ಆತ್ಮಪ್ರತಿಜ್ಞೆ. **"ಲಂಚವಂಚನಕ್ಕೆ ಕೈಯಾನದೆ"** – ಲಂಚದ ಸ್ಪರ್ಶಕ್ಕೂ ಅವಕಾಶ ಕೊಡದ ನಿಲುವು. ಇಲ್ಲಿ ಲಂಚವೆಂದರೆ ಕೇವಲ ಹಣವಲ್ಲ; ವಂಚನೆಯೊಂದಿಗೆ ಸೇರಿದ ಅನ್ಯಾಯ. ಯಾರೂ ನೋಡದ ಜಾಗದಲ್ಲಿ ಬಿದ್ದಿರುವ ಚಿನ್ನವನ್ನೂ ಎತ್ತದಿರಲು ತಾನು ದೇವನ ಮುಂದೆ ಪ್ರಮಾಣ ಮಾಡುತ್ತಾಳೆ. ಇದು ಕಾನೂನಿನ ಭಯವಲ್ಲ; ಆತ್ಮಸಾಕ್ಷಿಯ ನಿಷ್ಠೆ. **"ನೀವಿಕ್ಕಿದ ಭಿಕ್ಷದಲ್ಲಿಪ್ಪೆನಾಗಿ"** ಎಂಬ ಸಾಲು ತೃಪ್ತಿಯ ತತ್ವವನ್ನು ಸೂಚಿಸುತ್ತದೆ. ದೇವಪ್ರಸಾದವೇ ಸಾಕು ಎನ್ನುವ ಮನಸ್ಸಿಗೆ ಲಂಚದ ಆಸೆ ಹುಟ್ಟುವುದಿಲ್ಲ. ಆದರೆ **"ಅಳಿಮನವ ಮಾಡಿ"** ಎಂಬ ಮಾತು ಲಂಚದ ಮೂಲವನ್ನು ಸ್ಪಷ್ಟಪಡಿಸುತ್ತದೆ. ಅಳಿಮನ, ಅಂದರೆ ಕಪಟಮನಸ್ಸು. ಸತ್ಯಕ್ಕನ ದೃಷ್ಟಿಯಲ್ಲಿ ಲಂಚವು ಆತ್ಮಪಾತಕ; ಅದು ನರಕದ ದಾರಿ.



ಡಾ. ಜಿ.ವಿ.ಮಂಜುನಾಥ
ಇತಿಹಾಸ ಉಪನ್ಯಾಸಕರು
ಕೊಟ್ರೆ ನಂಜಪ್ಪ ಪ.ಪೂ.ಕಾಲೇಜು
ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ –
577526. ಮೊ : 9945727746

ಇದೇ ವಿಚಾರವನ್ನು ಸಾಮಾಜಿಕ ವ್ಯಂಗ್ಯದ ಮೂಲಕ ಉಜ್ವಲಗೊಳಿಸುವವರು ಸರ್ವಜ್ಞರು. ಅವರು ತಮ್ಮ ತ್ರಿಪದಿಯಲ್ಲಿ ಹೀಗೆ ಹೇಳುತ್ತಾರೆ:

ಸೊಡರು ಲಂಚವಕೊಂಡು ಕೊಡುವದೊಪ್ಪಚಿ ಬೆಳಗ
ಪೊಡವಿಗೆ ಸೂರ್ಯ ಬೆಳಗೀವೋಲ್ಲಂಚವ
ಹಿಡಿಯದವ ಧರ್ಮಿ

ಲಂಚದಿಂದ ನಡೆಯುವ ವ್ಯವಹಾರಗಳು ಹೊರಗೆ ಹೊಳೆಯುತ್ತವೆ. ಅಧಿಕಾರ, ಸ್ಥಾನ, ಗೌರವ ಇವೆಲ್ಲವೂ ದೊರಕಬಹುದು. ಆದರೆ ಆ ಬೆಳಕು "ಒಪ್ಪಚಿ ಬೆಳಗು"; ಅದು ಕೃತಕ. ಸೂರ್ಯನ ಬೆಳಕಿನಂತೆ ಶುದ್ಧ, ಸಮಾನ, ಸ್ವಾಭಾವಿಕವಲ್ಲ. ಆದ್ದರಿಂದ "ಲಂಚವ ಹಿಡಿಯದವ ಧರ್ಮಿ" ಎಂದು ಅವರು ಸ್ಪಷ್ಟ ತೀರ್ಪು ನೀಡುತ್ತಾರೆ. ಧರ್ಮವೆಂದರೆ ಉಪದೇಶವಲ್ಲ; ಲಂಚವನ್ನು ನಿರಾಕರಿಸುವ ಧೈರ್ಯ. ಸರ್ವಜ್ಞರ ಮತ್ತೊಂದು ತ್ರಿಪದಿ ಲಂಚದ ಒಳಗಂಟಿದ ಸ್ವರೂಪವನ್ನು ತೋರಿಸುತ್ತದೆ:

ಗಡಿಯನಾಡಿನ ಸುಂಕ, ತಡಿಯಲಂಬಿಗ ಕೂಲಿ,
ಮಡದಿಯರೊತ್ತೆ, ಒಳಲಂಚ, ಇವು ನಾಲ್ಕು
ಅಡಿಯಿಟ್ಟಡಿಲ್ಲ;

ಇಲ್ಲಿ "ಒಳಲಂಚ" ಎಂಬ ಪದ ಅತ್ಯಂತ ಗಂಭೀರ. ಬಯಲಿನಲ್ಲಿ ಕಾಣದ, ಗುಪ್ತವಾಗಿ ನಡೆಯುವ ಲಂಚವೇ ವ್ಯವಸ್ಥೆಯನ್ನು ಒಳಗಿನಿಂದ ಕುಸಿತಗೊಳಿಸುತ್ತದೆ. ಅನ್ಯಾಯ ಸುಂಕ, ಅಕ್ರಮ ಕೂಲಿ, ಮಹಿಳೆಯರ ಮೇಲೆ ಒತ್ತಡ ಮತ್ತು ಒಳಲಂಚ ಇವೆಲ್ಲವೂ ನೈತಿಕ ನೆಲೆಯಿಲ್ಲದ ಸಮಾಜದ ಲಕ್ಷಣಗಳು. "ಅಡಿಯಿಟ್ಟಡಿಲ್ಲ" ಎಂಬ ಮಾತು ಲಂಚದ ಮೇಲೆ ನಿಂತ ವ್ಯವಸ್ಥೆ ಶಾಶ್ವತವಾಗುವುದಿಲ್ಲ ಎಂಬ ಎಚ್ಚರಿಕೆ. ಸರ್ವಜ್ಞರು ಮತ್ತೊಂದು ತ್ರಿಪದಿಯಲ್ಲಿ ಇನ್ನೊಂದು ವ್ಯಂಗ್ಯಪ್ರಶ್ನೆ ಕೇಳುತ್ತಾರೆ;

ಚಿಂಚವೆರಡೆತ್ತಾಗಿ ಸಂಚಿನಾ ಸೊಸೆಯಾಗಿ
ಮಿಂಚಾಗಿ ಬರುವ ಮಗನಾದ ರಾಮನೆಗೆ
ಲಂಚ ತಪ್ಪುವುದೆ?

ದ್ವಿಮುಖತನ, ಸಂಚು, ಮೇಲ್ಮೈ ಮೆರುಗು ಇವುಗಳ ನಡುವೆ ಬೆಳೆದವನಿಗೆ ಲಂಚ ತಪ್ಪಿಸುವುದು ಕಷ್ಟವೆಂದು ಸರ್ವಜ್ಞ ಸೂಚಿಸುತ್ತಾರೆ. ಅಂದರೆ ಲಂಚವು ವ್ಯಕ್ತಿಯ ತಪ್ಪಷ್ಟೇ ಅಲ್ಲ; ಅದು ಸಾಮಾಜಿಕ ಸಂಸ್ಕೃತಿಯ ಪ್ರತಿಫಲ. ಇದೇ ವಿಚಾರವನ್ನು ಆಧ್ಯಾತ್ಮಿಕ ರೂಪಕದಲ್ಲಿ ಗಾಢವಾಗಿ ಹೇಳುವವರು ಜೇಡರ ದಾಸಿಮಯ್ಯರು;

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲಾ ನಡೆದನಾ ಸುಂಕಕಂಜಿ.
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು।
ಅಳಿಮನದವನ ಭಕ್ತಿ ಇಂತಾಯಿತ್ತು। ರಾಮನಾಥ.

ಹರಿದ ಗೋಣಿಯಲ್ಲಿ ತುಂಬಿದ ಧಾನ್ಯ ದಾರಿಯಲ್ಲಿ ಸುರಿದು ಹೋಗುವಂತೆ, ಲಂಚದಿಂದ ಪಡೆದ ಸಂಪತ್ತು ಶಾಶ್ವತವಲ್ಲ. ಹೊರಗೆ ತುಂಬಿದಂತೆ ಕಾಣುವ ಗೋಣಿ ಕೊನೆಯಲ್ಲಿ ಖಾಲಿಯಾಗುತ್ತದೆ. "ಅಳಿಮನದವನ ಭಕ್ತಿ" ಕಪಟಮನಸ್ಸಿನ ಭಕ್ತಿ. ಲಂಚ ಸ್ವೀಕರಿಸುವವನು ಹೊರಗೆ ಭಕ್ತನಂತೆ ಕಾಣಬಹುದು; ಆದರೆ ಒಳಗೆ ಖಾಲಿತನ. ಲಂಚದಿಂದ ಬಂದ ಲಾಭ ಬರಿಗೋಣಿಯಂತೆ.

ಈ ಎಲ್ಲಾ ವಚನಗಳನ್ನು ಒಟ್ಟುಗೂಡಿಸಿದಾಗ ಸ್ಪಷ್ಟವಾಗುವುದು ಲಂಚವು ಕೇವಲ ಕಾನೂನುಬಾಹಿರ ವ್ಯವಹಾರವಲ್ಲ; ಅದು ಅತೃಪ್ತಿ, ಕಪಟ, ದ್ವಂದ್ವ ಮತ್ತು ಆತ್ಮವಂಚನೆಯ ರೂಪ. ಸತ್ಯಕ್ಕ ಆತ್ಮಪ್ರತಿಜ್ಞೆಯ ಮೂಲಕ ಲಂಚವನ್ನು ತಿರಸ್ಕರಿಸುತ್ತಾರೆ. ಸರ್ವಜ್ಞರು ಸಾಮಾಜಿಕ ವ್ಯಂಗ್ಯದ ಮೂಲಕ ಅದರ ಕೃತಕತೆಯನ್ನು ಬಯಲಿಗೆಳೆಯುತ್ತಾರೆ. ಜೇಡರ ದಾಸಿಮಯ್ಯರು ರೂಪಕದ ಮೂಲಕ ಅದರ ಖಾಲಿತನವನ್ನು ತೋರಿಸುತ್ತಾರೆ.

ಹೀಗಾಗಿ ವಚನಸಾಹಿತ್ಯದ ಸ್ಪಷ್ಟ ಸಂದೇಶ: ಲಂಚದಿಂದ ಬಂದ ಬೆಳಕು ಕೃತಕ; ಲಂಚದಿಂದ ನಿಂತ ವ್ಯವಸ್ಥೆಗೆ ಅಡಿ ಇಲ್ಲ; ಲಂಚದಿಂದ ಬಂದ ಸಂಪತ್ತು ಶಾಶ್ವತವಲ್ಲ; ಲಂಚದಿಂದ ಕಲ್ಮಶವಾದ ಮನಸ್ಸು ಭಕ್ತಿಯನ್ನೂ ಖಾಲಿ ಮಾಡುತ್ತದೆ. ಧರ್ಮವೇ ಸೂರ್ಯನ ಬೆಳಕು. ಲಂಚವನ್ನು ತ್ಯಜಿಸುವುದು ಕೇವಲ ಸಾಮಾಜಿಕ ಶುದ್ಧತೆ ಅಲ್ಲ; ಅದು ಆತ್ಮಶುದ್ಧಿಯ ಮಹಾಸಾಧನೆ.

ನಮ್ಮ ಬ್ಯಾಂಕ್ :
ತುಮಕೂರು ವೀರಶೈವ ಕೋ–ಆಪರೇಟೀವ್
ಬ್ಯಾಂಕ್ (ಲಿ)
ನೊಳಂಬವಾಣಿ
ಖಾತೆ ಸಂಖ್ಯೆ : 00063090000189
ಶಾಖೆ : ಬಸವೇಶ್ವರನಗರ, ಬೆಂಗಳೂರು.
ಐ.ಎಫ್.ಎಸ್.ಸಿ. : BKL0362TVC
ಬ್ಯಾಂಕ್ : IDBI BANK LTD

ಉದ್ಯಮಿಯಾಗು ಉದ್ಯೋಗ ಕೊಡು

ನೊಳಂಬ ಉದ್ಯಮಿದಾರರ ಸಹಕಾರ ಸಂಘ, ಬೆಂಗಳೂರು ಹಾಗೂ ನೊಳಂಬ ಲಿಂಗಾಯತ ಸಂಘ, ಹುಬ್ಬಳ್ಳಿ–ಧಾರವಾಡ ಮತ್ತು ಸಮಾಜದ ಎಲ್ಲಾ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕೇಂದ್ರ, ರಾಜ್ಯ ಸರ್ಕಾರದ ಸವಲತ್ತುಗಳೊಂದಿಗೆ ಕೈಗಾರಿಕೆ, ಸೇವೆ ಮತ್ತು ವ್ಯಾಪಾರ ಪ್ರಾರಂಭಿಸಲು ಇಂದು ದಿನಾಂಕ 28/02/2026 ರಂದು ಬೆಳಿಗ್ಗೆ 09:30 ಗಂಟೆಗೆ ಒಂದು ದಿನದ ನಾವಿನ್ಯತೆಯ ಉದ್ಯಮಶೀಲತಾ ಕಾರ್ಯಕ್ರಮವನ್ನು ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಪಿ.ಜಯರಾಜ ಉಪನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ಹಾಗೂ ನೊಳಂಬ ಲಿಂಗಾಯತ ಸಂಘ ಹುಬ್ಬಳ್ಳಿ–ಧಾರವಾಡದ ಅಧ್ಯಕ್ಷರಾದ ವೀರೇಶ ಗಡದ, ಗೌರವಾಧ್ಯಕ್ಷರಾದ ಶಂಕರಮೂರ್ತಿರವರು ಹಾಗೂ ಸಂಘದ ಗಣ್ಯರಿಂದ ಸಸಿಗೆ ನೀರೆರೆಯುವ ಮೂಲಕ ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಪ್ರಾರಂಭದಲ್ಲಿ ಡಾ. ನಿಧಿಶ್ರೀ ರವರು ಉದ್ಯಮವನ್ನು ಸ್ಥಾಪಿಸಲು ಉದ್ದಿಮೆದಾರರ ಮಾನಸಿಕ ಹಾಗೂ ದೈಹಿಕ ಸಿದ್ಧತೆ ಕುರಿತು ವಿವರವಾಗಿ ತಿಳಿಸಿದರು. ನಂತರ ಉದ್ಯಮಶೀಲತೆ ಹೇಗೆ ಪ್ರಾರಂಭ, ಉದ್ಯಮಶೀಲರಾಗಲು ಇರುವ ಮುಖ್ಯವಾದ ಗುಣಲಕ್ಷಣಗಳ ಬಗ್ಗೆ ವಿವರವಾಗಿ ಪಿ.ಜಯರಾಜ ಉಪನಿರ್ದೇಶಕರು ತಿಳಿಸಿದರು. ನಂತರ, ಕಾರ್ಯಕ್ರಮದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಬಳಸಿಕೊಂಡು ಉದ್ಯಮವನ್ನು ಪ್ರಾರಂಭಿಸುವ ಬಗ್ಗೆ ತಾರಕೇಶ್ವರ ಉಪನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆರವರು ಸಂಕ್ಷೀಪ್ತವಾಗಿ ತಿಳಿಸಿದರು. ಮುಂದುವರೆದಂತೆ, ಬೆಂಗಳೂರಿನ ನ್ಯಾಷನಲ್ ಹಾರ್ಟಿಕಲ್ಚರ್ ಮಿಷನ್‌ನ ಹಿರಿಯ ವಿಜ್ಞಾನಿಗಳಾದ ಡಾ. ಧನಂಜಯರವರು ಕೇಂದ್ರ ಮತ್ತು ರಾಜ್ಯ ಸರ್ಕಾರದ ತೋಟಗಾರಿಕೆ ಮತ್ತು ಕೃಷಿ ಇಲಾಖೆಯಿಂದ ಉತ್ಪನ್ನಗಳನ್ನು ಪ್ರಾರಂಭಿಸುವ ಬಗ್ಗೆ ಸವಿವರವಾಗಿ ತಿಳಿಸಿದರು. ನಂತರ, ಸುಧಾಕರ, ಮಾಲಿಕರು ಸುರಕ್ಷಾ ಕಾರ್‌ಕೇರ್ ಬೆಂಗಳೂರುರವರು ನಡೆದು ಬಂದ ದಾರಿ, ಹಾಗೂ ಅವರ ಯಶೋಗಾಥೆಯ ಬಗ್ಗೆ ಭಾವಿ ಉದ್ಯಮದಾರರಿಗೆ ತಿಳಿಸಿ, ಉತ್ತೇಜನವನ್ನ ನೀಡಿದರು. ಹಾಗೆ ಹಾವೇರಿ ಜಿಲ್ಲೆಯವರಾದ ಕಾಗಿನೆಲೆ ಪರಮೇಶ್ವರಪ್ಪರವರು ಪ್ರಸ್ತುತ ಹೈದಾರಾಬಾದಿನಲ್ಲಿ ಕೈಗಾರಿಕೋದ್ಯಮರಾಗಿ ಅವರ 40 ವರ್ಷಗಳ ಅನುಭವಗಳ ಬಗ್ಗೆ ಉದ್ದಿಮೆದಾರರಿಗೆ ತಿಳಿಸಿ ಪ್ರಾರಂಭದಿಂದ ಕೊನೆಯವರೆಗೆ ಆಗುವ ಕಷ್ಟಸುಖಗಳನ್ನು ತಿಳಿಸಿದರು.

ಶ್ರೀಯುತ ಮಲ್ಲಿಕಾರ್ಜುನ ಉಪನಿರ್ದೇಶಕರು, ವಿಶ್ವೇಶ್ವರಯ್ಯಾ ಟ್ರೇಡ್ ಕೌನ್ಸಿಲ್ ಬೆಂಗಳೂರು ರವರು ಮಾತನಾಡುತ್ತಾ ಹುಬ್ಬಳ್ಳಿ–ಧಾರವಾಡದಿಂದ ರಫ್ತು ಮತ್ತು ಆಮುದುದಿಂದ ಸುಮಾರು 4 ಸಾವಿರ ಕೋಟಿ ವಹಿವಾಟು ಆಗುತ್ತಿದ್ದು, ಇದರ ಬಗ್ಗೆ ಆಸಕ್ತರು ಸರ್ಕಾರದಿಂದ ಪಡೆಯುವ ಸವಲತ್ತುಗಳ ಬಗ್ಗೆ ತಿಳಿಸಿದರು.

ಶ್ರೀ ವೆಂಕಟೇಶ ದೇಶಪಾಂಡೆರವರು ಸ್ಥಳೀಯ ಐಟಿ–ಬಿಟಿ ವಿಭಾಗದಿಂದ ಸ್ಟಾರ್ಟ್‌ಅಪ್ ಮತ್ತು ಬೆಂಗಳೂರನ್ನು ಹೊರತುಪಡಿಸಿ ಇತರ ಸ್ಥಳಗಳಲ್ಲಿಯೂ ಕೈಗಾರಿಕೆಗಳನ್ನು ಯಾವ ರೀತಿ ಪ್ರಾರಂಭ ಮಾಡಬೇಕೆಂದು ತಿಳಿಸಿ, ಉದ್ದಿಮೆದಾರರಿಗೆ ಉತ್ತೇಜನ ನೀಡಿದರು.

ಕೊನೆಯದಾಗಿ ನೊಳಂಬ ಲಿಂಗಾಯತ ಸಂಘ, ಬೆಂಗಳೂರು ಕೇಂದ್ರ ಘಟಕದಿಂದ ಅಧ್ಯಕ್ಷರಾದ ಶ್ರೀ ಚಂದ್ರಶೇಖರರವರು ನೆರೆದಿದ್ದ ಎಲ್ಲಾ ಸಮಾಜ ಬಾಂಧವರಿಗೆ ಮತ್ತು ಫಲಾನುಭವಿಗಳಿಗೆ ಹಿತವಚನವನ್ನು ನೀಡಿ, ಒಳ್ಳೆಯ ಉದ್ಯಮಿದಾರರಾಗಲು ಶುಭ ಹಾರೈಸಿದರು. ಕೊನೆಯದಾಗಿ ನೆರೆದಿರುವಂತಹ ಎಲ್ಲಾ ಹಿರಿಯರು ಭಾವೀ ಉದ್ದಿಮೆದಾರರು ಈ ಒಂದು ದಿನದ ಕಾರ್ಯಕ್ರಮದಲ್ಲಿ ದೊರೆತಂತಹ ಅನುಕೂಲಗಳ ಬಗ್ಗೆ ಚರ್ಚೆಯೊಂದಿಗೆ ಕಾರ್ಯಾಗಾರವನ್ನು ಮುಕ್ತಾಯಗೊಳಿಸಿ, ಹುಬ್ಬಳ್ಳಿ–ಧಾರವಾಡದ ವಿವಿಧ ಕಾಲೇಜುಗಳಿಂದ ನೂರಾರು ಪ್ರತಿಭಾನ್ವಿತ ವಿದ್ಯಾರ್ಥಿಗಳು ಭಾಗವಹಿಸಿ, ಇದರಲ್ಲಿ 16 ಜನ ಇಂದೇ ಕೈಗಾರಿಕೆ ಸೇವೆ ಮತ್ತು ವ್ಯಾಪಾರದಲ್ಲಿ ಸ್ಥಾಪಿಸಲು, ವಿವಿಧ ಇಲಾಖೆಗಳ ಆನ್‌ಲೈನ್ ಅರ್ಜಿಗಳ ಮುಖಾಂತರ ನೋಂದಾಯಿಸಲಾಯಿತು.



ವೀರೇಶ ಗಡದ
ಅಧ್ಯಕ್ಷರು
ನೊಳಂಬ ಲಿಂಗಾಯತ ಸಂಘ
ಹುಬ್ಬಳ್ಳಿ–ಧಾರವಾಡ

ಕಾಯಕವೇ ಕೈಲಾಸ

॥ ಓಂ ಶ್ರೀಗುರು ಬಸವಲಿಂಗಾಯ ನಮಃ ॥ ॥ ಓಂ ಶ್ರೀ ಗುರುಸಿದ್ಧರಾಮೇಶ್ವರಾಯ ನಮಃ ॥
ಸರ್ವರಿಗೂ ಶರಣು ಶರಣಾರ್ಥಿಗಳು

ಶ್ರೀಗುರು ಸಿದ್ಧರಾಮೇಶ್ವರರ 853ನೇ ಜಯಂತಿ ಮಹೋತ್ಸವ ಕಾರ್ಯಕ್ರಮವು ಪ್ರತಿ ವರ್ಷದಂತೆ ಈ ಬಾರಿ ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ವ್ಯವಸ್ಥಿತವಾಗಿ ವೈಭವದಿಂದ ನಡೆಯಿತು. ವಿಶೇಷವಾಗಿ ಮೂರನೇ ವರ್ಷದ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.


ಶ್ರೀಗುರು ಸಿದ್ಧರಾಮೇಶ್ವರರ 853ನೇ ಜಯಂತಿಯಲ್ಲಿ ಬಸವಾಂಜಲಿ ಮಾತಾಜಿಯವರು ಮತ್ತು ಕೆಲವು ಸಮಾನ ಮನಸ್ಕರು ಸೇರಿ ಚಿಕ್ಕಬಾಸೂರಿನಲ್ಲಿ ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದರು. ಈ ಕಾರ್ಯಕ್ರಮ ಬೆಂಗಳೂರಿನಲ್ಲಿಯೂ ಸಹ ನಡೆಯಿತು.

ಸುಸಜ್ಜಿತವಾದ ವೇದಿಕೆಯಲ್ಲಿ ವಿಶ್ವಗುರು ಕರ್ನಾಟಕ ರಾಜ್ಯದ ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣನವರ ಹಾಗೂ ಕಾಯಕಯೋಗಿ ನೊಳಂಬ ಲಿಂಗಾಯತ ಸಮಾಜದ ಗುರುಸಿದ್ಧರಾಮೇಶ್ವರರ ಭಾವಚಿತ್ರಗಳು ಅಲಂಕರಿಸಲಾಯಿತು.

ಮೊದಲಿಗೆ ಭಾವಚಿತ್ರಕ್ಕೆ ಶರಣರ ಸಮ್ಮುಖದಲ್ಲಿ ಪರಮಪೂಜ್ಯ ಡಾ. ಮಾತೆ ಬಸವಾಂಜಲಿ ಮಾತಾಜಿಯವರು ಪೂಜೆ ಸಲ್ಲಿಸಿದರು. ಸೇವಾ ಕಾರ್ಯಕರ್ತರು ಸಹ ಪೂಜೆ ಸಲ್ಲಿಸಿ, ಬಹಳ ಶಿಸ್ತಿನಿಂದ ಕಾರ್ಯಕ್ರಮದಲ್ಲಿ ಭಾಗಿಯಾದರು. ಲಿಂಗಾಯತ ಧರ್ಮದ ಇಷ್ಟಲಿಂಗ ಪೂಜಾ ಪ್ರಾತ್ಯಕ್ಷಿಕೆಯನ್ನು ಶ್ರೀ ಮಾತಾಜಿಯವರು ಸವಿಸ್ತಾರವಾಗಿ ತಿಳಿಸುತ್ತಾ ಸರಳವಾಗಿ ಯಾವುದೇ ಆಡಂಬರವಿಲ್ಲದೇ ಶ್ರದ್ಧಾಭಕ್ತಿಯಿಂದ ಪೂಜೆ ಮಾಡುವುದನ್ನು ತೋರಿಸಿಕೊಟ್ಟರು.

ಕರ್ನಾಟಕ ಹಾಗೂ ಬೇರೆ ಬೇರೆ ರಾಜ್ಯಗಳಿಂದ ಬಂದಿದ್ದ ಆಸಕ್ತ ಶರಣರು ಶ್ರೀ ಮಾತಾಜಿಯವರ ನೇತೃತ್ವದಲ್ಲಿ 400 ಶರಣರು ಇಷ್ಟಲಿಂಗ ದೀಕ್ಷೆಯನ್ನು ಸ್ವೀಕರಿಸಿದರು. ಶ್ರೀ ಮಾತಾಜಿಯವರು ವಚನಗಳ ಆಧಾರಿತವಾಗಿ ದೀಕ್ಷೆ ನೀಡಿ ಯಾವುದೇ ವೈಧಿಕ ಆಚರಣೆಗಳಿಲ್ಲದೆ ಸರಳವಾಗಿ ಇಷ್ಟಲಿಂಗ ಪೂಜೆಯನ್ನು ಮಾಡಿಕೊಳ್ಳಬೇಕು ಎಂಬ ವಿಧಾನವನ್ನು ತೋರಿಸಿಕೊಟ್ಟರು. ಗುರು ಬಸವಣ್ಣನವರು ಕೊಟ್ಟು ಲಿಂಗಾಯತ ಧರ್ಮವನ್ನು ಶಿವಯೋಗಿ ಸಿದ್ಧರಾಮೇಶ್ವರರು ಚಿನ್ಮಯಜ್ಞಾನಿ ಚೆನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆಯನ್ನು ಸ್ವೀಕರಿಸಿದ್ದಾರೆ. ಅದರಂತೆ ನಾವೆಲ್ಲರೂ ಇಷ್ಟಲಿಂಗ ದೀಕ್ಷೆಯನ್ನು ತೆಗೆದುಕೊಂಡು ಕಾಯಕ ದಾಸೋಹ ಪ್ರಜ್ಞೆಯಿಂದ ಜೀವನ ಸಾಗಿಸೋಣ ಎಂದು ಆಶೀರ್ವಚನ ನೀಡಿದರು. ಸಭಾ ವೇದಿಕೆ ನಿರ್ವಹಿಸಿದ ವ್ಯವಸ್ಥಾಪಕರು, ಮಾಧ್ಯಮ ಮಿತ್ರರು, ಛಾಯಾಗ್ರಾಹಕರು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

ಈ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸೇವೆ ಸಲ್ಲಿಸಿದ ಶರಣ/ಶರಣೆಯರಾದ, ಶರಣೆ ಶಶಿಕಲಾ ದೇವರಾಜ್ ಕುಟುಂಬದವರು, ಡಾ. ರಾಕೇಶ್ ಬಿ.ಸಿ. ನೊಳಂಬವಾಣಿ ಸಂಪಾದಕರು, ಶ್ರೀಯುತ ಪ್ರಭುಲಿಂಗ ರುದ್ರಪ್ಪ ದೊಡ್ಡಮನಿ, ಹಾವೇರಿ. ಯಶೋಧಮ್ಮ ವಡೇರಹಳ್ಳಿ. ಮಂಜುಳ, ಮಲ್ಲಿಕಾರ್ಜುನ, ಕಣವೇಹಳ್ಳಿ. ಶೈಲ ನಟರಾಜ್, ತಿಪಟೂರು. ಪದ್ಮ ನಾಗರಾಜ್ ಕುಟುಂಬದವರು, ಕಾಶಿನಾಥ್ ಕಲ್ಕೆರೆ. ರಾಗಿ ಶಿವಲಿಂಗಣ್ಣ ಕುಟುಂಬದವರು, ಗಂಗಮ್ಮ, ಸುಮ, ಕಲ್ಪನ, ಪಾಲಮ್ಮ, ಬಸವರಾಜಣ್ಣ, ಶೋಭ, ಅವಿನಾಶ್ ತಾಳಕಟ್ಟ, ಪ್ರಭು ಹಿತ್ತಲಮನಿ, ಶಿವನಗೌಡ್ರು ಸೂಡಂಬಿ, ದಾಸೋಹ ಸಮಿತಿ ಹಾಗೂ ಇತರರು ಮತ್ತು ಭಾಗವಹಿಸಿದ ಶರಣ/ಶರಣೆಯರೆಲ್ಲರಿಗೂ ಶರಣು ಶರಣಾರ್ಥಿ.



ನಾಗರಾಜಪ್ಪ ಟಿ.
ಕಾರ್ಯಕಾರಿ ಸಮಿತಿ ನಿರ್ದೇಶಕರು
ನೊಳಂಬ ಲಿಂಗಾಯತ ಸಂಘ (ರಿ.), ಬೆಂಗಳೂರು.

ಆರೋಗ್ಯಾಮೃತ 41

ಜೀವಾಮೃತ

ಹಿಂದಿನ ಸಂಚಿಕೆಯಿಂದ.....


ಮುಪ್ಪಿನಲ್ಲಿ ಬರುವ ದೃಷ್ಟಿದೋಷವನ್ನು ತಡೆಯಲು ಯೌವ್ವನಾವಸ್ಥೆಯಲ್ಲಿ ಇರುವಾಗಲೇ ಸಿದ್ಧತೆ ಮಾಡಿಕೊಂಡಿರ ಬೇಕು. ಸಾಧ್ಯವಾದಷ್ಟು ಮಟ್ಟಿಗೆ ದೂರದರ್ಶನದ ದೃಶ್ಯಗಳಿಂದ ದೂರವಿರುವುದು; ನಿಸರ್ಗದತ್ತ ಪೌಷ್ಟಿಕ ಆಹಾರಗಳಿಂದ ಹಣ್ಣು ತರಕಾರಿಗಳನ್ನು ಹೆಚ್ಚಾಗಿ ಉಪಯೋಗಿಸುವುದು, ಇವುಗಳ ಜೊತೆಗೆ ಕಣ್ಣಿಗೆ ಪುಷ್ಟಿ ಕೊಡುವ ಕಣ್ಣಿನ ಕೆಲವು ವ್ಯಾಯಾಮಗಳನ್ನು ರೂಢಿಸಿಕೊಳ್ಳಬೇಕು. ಕಣ್ಣು ದೇವರು ನೀಡಿರುವ ಭಾಗ್ಯ. ಅದನ್ನು ಸರಿಯಾಗಿ ಉಪಯೋಗಿಸಿ ಕೊಳ್ಳುವುದು ಸೌಭಾಗ್ಯ. ಅದನ್ನು ತಪ್ಪು ತಪ್ಪಾಗಿ ಉಪಯೋಗಿಸಿದರೆ ದೌರ್ಭಾಗ್ಯ. ಕೊನೆಗೆ ಕಣ್ಣು ತನ್ನ ವಿಕಾರವನ್ನು ಕಳೆದುಕೊಂಡು ನೋಡಿದ ದೃಶ್ಯಗಳೆಲ್ಲವನ್ನೂ ಮಂಗಳಮಯವಾಗಿಸುವ ಶಕ್ತಿಯನ್ನು ಪಡೆದುಕೊಳ್ಳುತ್ತದೆ. ಆಗ ಕಣ್ಣು ತನ್ನ ಕಣ್ತನದ ಪರಾಕಾಷ್ಠತೆಯನ್ನು ಮುಟ್ಟಿ ಶಿವಲಿಂಗವೆನಿಸಿಕೊಳ್ಳುತ್ತದೆ. ವಚನದ ಮುಂದಿನ ವಾಕ್ಯ ಹೀಗಿದೆ;

ಮತ್ತೊಂದು ಕೇಳದಂತೆ ಕಿವುಡನ ಮಾಡಯ್ಯ ತಂದೆ

ಪಂಚೇಂದ್ರಿಯಗಳಲ್ಲಿ ಕಿವಿಯೂ ಒಂದು. ಕಿವಿಯ ಮಹತ್ವ ಎಷ್ಟಿದೆ ಎಂಬುದು ಕಣ್ಣಿಲ್ಲದವರಿಗೆ ಅರಿವಾಗುವಷ್ಟು ಬೇರೆಯವರಿಗೆ ಅರಿವಾಗುವುದಿಲ್ಲ. ಸಾಮಾನ್ಯ ಕಿವಿಯ ಮಹತ್ವ ಅರ್ಥವಾಗುವುದು ಯಾವಾಗ ಗೊತ್ತೇ? ಇಳಿವಯಸ್ಸಿನಲ್ಲಿ ಕೇಳುವುದು ಕಡಿಮೆಯಾಗುತ್ತಾ ಬಂದಾಗಲೇ. ಕೆಲವು ಸ್ತ್ರೀಯರು ಕಿವಿ ಕೇಳುವುದಕ್ಕಾಗಿ ಇರುವ ಅಂಗ ಎನ್ನುವುದಕ್ಕಿಂತ ಅದು ಆಭರಣವನ್ನು ಧರಿಸಲಿಕ್ಕೆ ಇರುವ ಒಂದು ಪ್ರದರ್ಶನದ ಅಂಗವೆಂದು ಭಾವಿಸಿದಂತಿದೆ. ಈ ಕಾರಣದಿಂದಲೇ ಏನೋ ಕಿವಿಯ ಮೂರು–ನಾಲ್ಕು ಕಡೆ ಚುಚ್ಚಿಕೊಂಡು ಆಭರಣಗಳನ್ನು ಸಿಕ್ಕಿಸಿಕೊಂಡು ಕಳ್ಳರ ಬಾಯಲ್ಲೂ ನೀರು ಸುರಿಯುವಂತೆ ಮಾಡುತ್ತಿದ್ದಾರೆ. ಹೀಗೆ ಮಾಡುವುದರ ಬದಲು ಕಿವಿಯನ್ನು ಒಳ್ಳೊಳ್ಳೆಯ ಸಂಗತಿಗಳನ್ನು ಕೇಳಲು ಬಳಸಬೇಕು. ಬಸವಣ್ಣನವರು 'ಮತ್ತೊಂದ ಕೇಳದಂತೆ' ಎಂದು ಬಳಸಿದ್ದಾರೆ. ಅಂದರೆ ಯಾವುದನ್ನು ಕೇಳಿದರೆ ಕಿವಿ ಹೊಲಸಾಗಿ ಆ ಮೂಲಕ ಮನವೂ ಹೊಲಸಾಗುತ್ತದೆಯೋ ಅದನ್ನು ಕೇಳಬಾರದು. ಅಂದರೆ ಕೆಟ್ಟ ಹಾಡುಗಳನ್ನು ಕೇಳಬಾರದು. ಚಾಡಿ ಮಾತುಗಳನ್ನು ಕೇಳಬಾರದು. 'ಕಿವಿಗೆ ನಿಮ್ಮ ಶರಣರ ಗೀತಂಗಳನ್ನು ಕೇಳುವುದೇ ಶೃಂಗಾರ' ಎನ್ನುವುದು ಶರಣರ ನಿಲುವಾಗಿದೆ.

ಇದುವರೆಗೆ ಬಸವಣ್ಣನವರ ವಚನದಲ್ಲಿ ತ್ಯಾಗಾಂಗದ ಗುಟ್ಟನ್ನು ಅರಿತುಕೊಂಡಿರಿ. ಈ ಸಂದರ್ಭದಲ್ಲಿ ಮಹಾತ್ಮ ಗಾಂಧೀಜಿಯವರು ಯಾವಾಗಲೂ ತಮ್ಮ ಬಳಿ ಇಟ್ಟುಕೊಳ್ಳುತ್ತಿದ್ದ ಮೂರು ಚೈನಿ ಗೊಂಬೆಗಳು ನೆನಪಾಗುತ್ತವೆ. ಅವುಗಳಲ್ಲಿ ಒಂದು ಕಣ್ಣನ್ನು ಮುಚ್ಚಿಕೊಂಡಿತ್ತು, ಮತ್ತೊಂದು ಕಿವಿಯನ್ನು ಮುಚ್ಚಿಕೊಂಡಿತ್ತು, ಇನ್ನೊಂದು ಬಾಯನ್ನು ಮುಚ್ಚಿಕೊಂಡಿತ್ತು. ಇದರರ್ಥ ನಿಮಗೆ ಗೊತ್ತೇ ಇದೆಯಲ್ಲವೆ; ಕೆಟ್ಟದ್ದನ್ನು ನೋಡಬೇಡ, ಕೆಟ್ಟದ್ದನ್ನು ಕೇಳಬೇಡ, ಕೆಟ್ಟದ್ದನ್ನು ಮಾತನಾಡಬೇಡ.

ತ್ಯಾಗಾಂಗದ ಮುಂದಿನ ಘಟ್ಟ ಭೋಗಾಂಗ. ಅದರ ಬಗ್ಗೆ ಈಗ ತಿಳಿದುಕೊಳ್ಳೋಣ. ಭೋಗ ಎಂಬ ಶಬ್ದವನ್ನು ಕೇಳಿದೊಡನೆಯೆ ಬೆಚ್ಚಿ ಬೀಳುತ್ತೀರೋ ಏನೊ! ಏನು ಧರ್ಮಕ್ಷೇತ್ರದಲ್ಲಿ ಭೋಗವೆ? ಹೌದು ಶರಣ ಧರ್ಮದಲ್ಲಿ ಭೋಗಕ್ಕೂ ಒಂದು ಸ್ಥಾನವಿದೆ. ತ್ಯಾಗ ಸಹಿತವಾದ ಭೋಗವು ಮಾನವನನ್ನು ಯೋಗ ಜೀವನದತ್ತ ಕರೆದೊಯ್ಯುತ್ತದೆ ಎಂಬುದು ಶರಣರ ಅಭಿಮತ ವಾಗಿದೆ. ಋಷಿಗಳು ರೂಪಿಸಿದ ಭಾರತೀಯ ಸಂಸ್ಕೃತಿಯಲ್ಲಿಯೂ ನಾಲ್ಕು ಪುರುಷಾರ್ಥಗಳಲ್ಲಿ ಹೇಳಿಲ್ಲವೆ? ಧರ್ಮ ಅರ್ಥ ಕಾಮ ಹಾಗೂ ಮೋಕ್ಷ ಇವು ನಾಲ್ಕು ಪುರುಷಾರ್ಥಗಳು ಧರ್ಮಸಹಿತವಾಗಿ ಗಳಿಸಿದ ಅರ್ಥ ಧರ್ಮದ ನಿಯಮ ಗಳಿಗನುಸಾರವಾಗಿ ಅನುಭವಿಸಿದ



ಶ್ರೀ ಶ್ರೀ ಬಸವಾನಂದಸ್ವಾಮಿಗಳವರು
ಗುರುಬಸವ ಮಹಾಮನೆ,
ಮನಗುಂಡಿ, ಧಾರವಾಡ

ಕಾಮ ಸುಲಭವಾಗಿ ಮೋಕ್ಷ ಪ್ರಾಪ್ತಿಯನ್ನು ಮಾಡಿಕೊಡಬಲ್ಲವು. ಶರಣರು ಈ ವಿಷಯವನ್ನು ಇನ್ನೂ ಕ್ರಮಬದ್ಧವಾಗಿ ವೈಜ್ಞಾನಿಕವಾಗಿ ಹೇಳಿದ್ದಾರೆ. ಕರ್ಮೇಂದ್ರಿಯ ಜ್ಞಾನೇಂದ್ರಿಯಗಳನ್ನು ದುಷ್ಟವೃತ್ತಿಗಳಿಂದ ದೂರಮಾಡಿದ ಮೇಲೆ ಅವುಗಳನ್ನು ಹಾಗೆಯೇ ಉಳಿಸಬಾರದು. ಒಂದು ವೇಳೆ ಹಾಗೇ ಉಳಿಸಿದರೆ ಅವಕಾಶ ಸಿಕ್ಕಾಗ ಅವು ಮೊದಲಿಗಿಂತಲೂ ಹೆಚ್ಚು ದುಷ್ಟ ಪ್ರವೃತ್ತಿಗಳಲ್ಲಿ ತೊಡಗಬಹುದು. ವಿಶ್ವಾಮಿತ್ರರ ತಪಸ್ಸು ಭಂಗವಾಗಿ ಮೇನಕೆಯನ್ನು ವರಿಸಿದ್ದಾಗಲೇ ಹೆಚ್ಚು ಭೋಗಾಪೇಕ್ಷೆ ಗಳಾಗಿರುವುದಕ್ಕೆ ಇದೇ ಕಾರಣ. ಅವರು ಈ ಜಗತ್ತನ್ನು ಸಂಸಾರವನ್ನು ಮಾಯೆಯ ಆಟವೆಂದು ಭಾವಿಸಿ ಇದರಿಂದ ಬಿಡಿಸಿಕೊಳ್ಳಬೇಕು. ವಿಮುಖರಾಗಬೇಕೆಂದು ಹೋಗಿ ಅರಣ್ಯದಲ್ಲಿ ನೆಲಸಿದರು. ಹೆಣ್ಣು ಹೊನ್ನು ಮಣ್ಣುಗಳನ್ನು ಹೀಗಳೆದು ದೂರ ಉಳಿಯಲು ಪ್ರಯತ್ನಿಸಿದರು. ಯಾವಾಗ ಅವರು ಇವುಗಳನ್ನು ದೂರವಿರಿಸಿದರೋ, ಮನಸ್ಸಿನಲ್ಲಿ ಅವುಗಳ ಬಗ್ಗೆ ಆಕರ್ಷಣೆ ಬೆಳೆಯುತ್ತಾ ಹೋಯಿತು. ಒಂದು ಸಣ್ಣ ಅವಕಾಶ ಸಿಕ್ಕರೂ ಸಾಮಾನ್ಯ ಹೆಣ್ಣು ಮುಂದೆ ಬಂದರೂ ಎಷ್ಟೋ ದಿನಗಳಿಂದ ನೋಡದೆ ಇರುವುದರಿಂದ ಅವರ ಪಾಲಿಗೆ ಆಕೆ ದೇವಕನ್ನಿಕೆಯ ಹಾಗೆ ಕಾಣುತ್ತಿದ್ದಳು. ಮುಗಿಯಿತು ಮುಂದಿನ ವಿಷಯವನ್ನು ಹೇಳುವುದಿನ್ನೇನು. ಶರಣರು ಇದು ಸರಿಯಾದ ಮಾರ್ಗವಲ್ಲ ಎಂದರು. ಇದನ್ನು ಶರಣರು ಎಷ್ಟರಮಟ್ಟಿಗೆ ಖಂಡಿಸುತಾರೆಂದರೆ ಸಕಲೇಶ ಮಾದರಸರೆಂಬ ಶರಣರು ತಮ್ಮ ಒಂದು ವಚನದಲ್ಲಿ 'ಆರುವನೊಲ್ಲೆನೆಂದು ಅರಣ್ಯಕ್ಕೆ ಹೋಗುವುದು ದುರುಳತನ' ಎಂದು ಹೇಳಿದ್ದಾರೆ. ಹೆಣ್ಣು ಹೊನ್ನು ಮಣ್ಣುಗಳ ಮಧ್ಯದಲ್ಲಿಯೇ ಇದ್ದು ಅವುಗಳನ್ನು ಮಾಯೆ ಎಂದುಕೊಳ್ಳುವುದರ ಬದಲು ತನ್ನ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕೆನ್ನುತ್ತಾರೆ ಅಲ್ಲಮಪ್ರಭುಗಳು.

ಹೆಣ್ಣು ಮಾಯೆಯೆಂಬರು ಹೆಣ್ಣು ಮಾಯೆಯಲ್ಲ
ಹೊನ್ನು ಮಾಯೆಯೆಂಬರು ಹೊನ್ನು ಮಾಯೆಯಲ್ಲ
ಮಣ್ಣು ಮಾಯೆಯೆಂಬರು ಮಣ್ಣು ಮಾಯೆಯಲ್ಲ
ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ

ಮಾಯೆಯ ಅಸ್ತಿತ್ವ ಇರುವುದು ನಮ್ಮ ಎದುರಿಗೆ ಪಸರಿಸಿರುವ ಸೃಷ್ಟಿಯಲ್ಲಲ್ಲ. ಅದು ಇರುವುದು ನೋಡುವ ನಮ್ಮ ದೃಷ್ಟಿಯಲ್ಲಿ. ನಿಮಗೆಲ್ಲ ಕನ್ನಡಕ ಹಾಕಿಕೊಂಡು ರೂಢಿ ಇದೆಯಲ್ಲವೆ? ನಮ್ಮ ಕಡೆ ಅದನ್ನು ಚಸ್ಮ ಅಥವಾ ಚಾಳೀಸು ಅನ್ನುತ್ತಾರೆ. ಏನೇ ಅನ್ನಲಿ ಬಿಡಿ ಕನ್ನಡಕದ ಗುಣ ಏನೂ ಬದಲಾವಣೆ ಆಗುವುದಿಲ್ಲವಲ್ಲ. ಕನ್ನಡಕದ ಮೂಲಕ ನೋಡಿಯೂ ನಿಮಗೆ ಗೊತ್ತಿದೆ. ನೀವು ಯಾವ ಕನ್ನಡಕ ಧರಿಸುತ್ತೀರೋ ಹಾಗೆ ವಸ್ತುಗಳ ಬಣ್ಣ ಬದಲಾದಂತೆ ಕಾಣುತ್ತದೆ ಅಲ್ಲವೆ? ವಸ್ತುಗಳು ಹೇಗಿರುತ್ತವೆಯೋ ಹಾಗೆ ಇರುತ್ತವೆ. ಜಾತ್ರೆಗೆ ಹೋಗಿದ್ದೀರಲ್ಲವೆ ಮಜಕ್ಕಾಗಿ ಬಣ್ಣಬಣ್ಣದ ಕನ್ನಡಕಗಳನ್ನು ಧರಿಸಿ ವಸ್ತುಗಳನ್ನು ನೋಡಿರುವುದು ನೆನಪಿದೆಯಲ್ಲವೆ.

ವ್ಯತ್ಯಾಸ ಆಗುತ್ತಿರುವುದು ನಿಮ್ಮ ಕನ್ನಡಕದಲ್ಲಿ ಬೇರೆ ಬೇರೆ ಬಣ್ಣಗಳು ತೋರುತ್ತಿರುವುದು ನಿಮ್ಮ ಕಣ್ಣಿಗೆ ಸೃಷ್ಟಿ ಹೇಗಿರುತ್ತದೆಯೋ ಹಾಗೆ ಇರುತ್ತದೆ. ಸಂನ್ಯಾಸಿ ಧರಿಸಿರುವ ವೈರಾಗ್ಯದ ಕನ್ನಡಕಕ್ಕೆ ಸೃಷ್ಟಿ ಒಂದು ಥರ ಕಂಡರೆ ಭೋಗಿ ಧರಿಸಿರುವ ಆಸೆಯ ಕನ್ನಡಕಕ್ಕೆ ಮತ್ತೊಂದು ರೀತಿ ತೋರುತ್ತದೆ. ಇವೆರಡನ್ನು ಅಲ್ಲಗಳೆದು ಪ್ರೇಮಿ ಧರಿಸಿರುವ ದೈವೀ ಪ್ರೀತಿಯ ಕನ್ನಡಕಕ್ಕೆ ಇನ್ನೊಂದು ರೀತಿ ಕಾಣುತ್ತದೆ. ಪ್ರೇಮಿ ಎಂದಾಕ್ಷಣ ನಿಮ್ಮ ಕಣ್ಣ ಮುಂದೆ ಯಾರು ಬರುತ್ತಿದ್ದಾರೆ ಹೇಳಿ. ಅದೇ ನಿಮ್ಮ ಕಾಲೇಜು ಹುಡುಗ ಹುಡುಗಿಯರ ಕಾಮ ಚೇಷ್ಟೆಗಳು ತಾನೇ. ಖಂಡಿತಾ ಅದು ಪ್ರೇಮವಲ್ಲ. ಅದನ್ನು ಬೇಕಾದರೆ ಪ್ರೇಮದ ಆಭಾಸ ಎಂದು ಕರೆಯಲಿ. ನಿಜವಾದ ಪ್ರೇಮಿಯ ದೃಷ್ಟಿಗೆ ಈ ಜಗತ್ತಿನಲ್ಲಿ ತ್ಯಾಜ್ಯವಾದದ್ದು ಏನೂ ಇಲ್ಲ, ಒಂದು ಸಾಮಾನ್ಯ ಗರಿಕೆಯೂ ಅವನ ದೃಷ್ಟಿಯಲ್ಲಿ ಪರಮಾತ್ಮನ ಅದ್ಭುತ ಲೀಲೆಯಾಗಿ ತೋರುತ್ತದೆ. ಆರೋಗ್ಯದ ದೃಷ್ಟಿಯಿಂದ ಗರಿಕೆಯ ರಸ ಅಮೃತಕ್ಕೆ ಸಮಾನವೆಂದು ಹೇಳುತ್ತಾರೆ. ಗರಿಕೆಯಲ್ಲಿ ಅಮೃತ ಕಾಣುವ ಪ್ರೇಮಿ ಹೆಣ್ಣಿನಲ್ಲಿ ತಾಯ್ತನವನ್ನು, ಒಲವಿನ ಸತಿತ್ವವನ್ನು ಅಕ್ಕರೆಯ ಶಿಶುತನವನ್ನು ಕಾಣಲಾರನೆ. ಹೊನ್ನು ಅವನ ದೃಷ್ಟಿಯಲ್ಲಿ ತ್ಯಾಜ್ಯವಲ್ಲ. ಅದು ಜಂಗಮವನೊಲಿಸಲು ಪರಮಾತ್ಮನು ಕರುಣಿಸಿರುವ ಸಾಧನವಾಗಿ ದೀನರು, ದುಃಖಿತರು, ದುರ್ಬಲರು ರೋಗಿಗಳನ್ನು ಸಾಂತ್ವನಗೊಳಿಸುವ ಪ್ರಸಾದವಾಗಿ ತೋರುತ್ತದೆ.

ಮಣ್ಣಿನ ಕಣಕಣವೂ ದಿವ್ಯತೆಯ ಪ್ರಸಾದ ಬೆಳೆದು ಕೊಡುವ ಜೀವಂತ ಭೂತಾಯಿಯಾಗಿ ತೋರುತ್ತದೆ. ಇಂತಹ ಹೆಣ್ಣು ಹೊನ್ನು ಮಣ್ಣನ್ನು ಮಾಯೆ ಎಂದು ಕರೆಯುವುದು ಭಕ್ತನ ದೃಷ್ಟಿಗೆ ಎಂದೂ ಒಪ್ಪಿಗೆಯಾಗುವುದಿಲ್ಲ. ಈ ಸಂದರ್ಭದಲ್ಲಿ ಬಸವಣ್ಣನವರ ಬಹಳ ಪ್ರಸಿದ್ಧವಾದ ಒಂದು ವಚನವನ್ನು ನಿಮಗೆ ತಿಳಿಸಲೇಬೇಕಾಗಿದೆ. ಏಕೆಂದರೆ ಕೆಲವು ದೊಡ್ಡ ದೊಡ್ಡ ಡಾಕ್ಟರೇಟ್ ಪದವೀಧರರು ಕೂಡ ತಪ್ಪಾಗಿ ಅರ್ಥೈಸುವುದನ್ನು ಕೇಳಿದ್ದೇನೆ.

ಮುಂದುವರೆಯುವುದು.....

ಆರೋಗ್ಯಕ್ಕಾಗಿ ಆಯುರ್ವೇದ ಲೈಫು ಹೀಗಿರಲಿ: ಸಂಚಿಕೆ–5

ವ್ಯಾಯಾಮದ ನಂತರ
ಅಭ್ಯಂಗ ವಿಧಿ/ಅಭ್ಯಂಜನ/ ಎಣ್ಣೆ ಉಜ್ಜುವುದು

ಅಭ್ಯಂಗವೆಂದರೆ ಸಾಮಾನ್ಯರಲ್ಲಿ ಇರುವ ಭಾವನೆಯುಗಾದಿ ಹಬ್ಬಕ್ಕೆ ಮತ್ತು ದೀಪಾವಳಿಗಳಿಗೆ ಮಾತ್ರ ಸೀಮಿತವಾಗಿರುವ ವಿಧಿ ಎಂದು. ಹಾಗಿಲ್ಲದೆ ನಮ್ಮ ದೇಹದ ಅತಿ ದೊಡ್ಡ ಅಂಗವಾದ ಚರ್ಮದ ಮೂಲಕ ದೇಹರಕ್ಷಣೆ ಮತ್ತು ಪೋಷಣೆ ಮಾಡುವಂತಹ ವಿಧಿ ಅಭ್ಯಂಗ ವಿಧಿ. ಇದನ್ನು ಆರೋಗ್ಯವಂತರು ಪ್ರತಿನಿತ್ಯವೂ ಆಚರಿಸಬೇಕೆಂದು ಆಯುರ್ವೇದ ಒತ್ತಿ ಹೇಳುತ್ತದೆ.

ಅಭ್ಯಂಗಂಮಾಚರೇನ್ನಿತ್ಯಂ : ಎಣ್ಣೆಯನ್ನು ತಲೆ ಮೈಗಳಿಗೆ ಹಚ್ಚಿಕೊಳ್ಳುವುದಕ್ಕೆ ಅಭ್ಯಂಗವೆಂದು ಹೆಸರು ಇದನ್ನು ಪ್ರತಿದಿನವೂ ಆಚರಿಸಬೇಕು. ಅಭ್ಯಂಗದಿಂದ ಶರೀರಕ್ಕೆ, ಶರೀರದ ಅಂಗಗಳಿಗೆ ಪುಷ್ಟಿ ದೊರೆಯುತ್ತದೆ. ಇದನ್ನು ವಿಶೇಷವಾಗಿ ತಲೆ, ಕಿವಿ, ಹಾಗೂ ಪಾದಗಳಿಗೆ ಹೆಚ್ಚಾಗಿ ಮಾಡಬೇಕು. ಇಡೀ ದೇಹಕ್ಕೆ ಎಣ್ಣೆ ತಿಕ್ಕುವುದರಿಂದ ವಾತ ಕಫ ದೋಷಗಳು ಕಡಿಮೆಯಾಗಿ ಶರೀರದ ಆಯಾಸ ಪರಿಹಾರವಾಗುವುದು. ದೇಹಬಲ, ಸುಖ, ನಿದ್ರೆ, ವರ್ಣ, ಕೋಮಲತೆ, ಸುಕುಮಾರತೆ, ಆಯಸ್ಸು, ಶರೀರ ಪುಷ್ಟಿ, ಮುಂತಾದವು ಹೆಚ್ಚಾಗುತ್ತದೆ.

ಶಿರೋ ಅಭ್ಯಂಗ – ತಲೆಗೆ ಎಣ್ಣೆ ಹಚ್ಚುವುದು : ತಲೆಗೆ ಎಣ್ಣೆ ಹಚ್ಚುವುದ ರಿಂದ ಎಲ್ಲಾ ಇಂದ್ರಿಯಗಳು ತೃಪ್ತಿ ಯಾಗುತ್ತವೆ. ಅದರ ರೋಗಗಳು ಇಲ್ಲವಾಗುತ್ತವೆ ಕೂದಲುಗಳು ದಟ್ಟವಾಗಿ, ನೀಳವಾಗಿ, ಕೋಮಲ ವಾಗಿ, ದೃಢವಾಗಿ, ಹಾಗೂ ಕಪ್ಪು ಬಣ್ಣದ್ದಾಗಿಯೇ ಉಳಿಯುತ್ತದೆ.

ಕರ್ಣ ಪೂರಣ/ಕಿವಿಗೆ ಎಣ್ಣೆ ಬಿಡುವುದು : ಪ್ರತಿದಿನವೂ ಕಿವಿಗಳಿಗೆ ಎಣ್ಣೆ ಹಾಕುವುದರಿಂದ ಕಿವಿಗೆ ಬರುವ ರೋಗಗಳು, ಕಿವಿಯಲ್ಲಿನ ಮೇಣ, ಕತ್ತು ದವಡೆ ಹಿಡಿಯುವುದು, ಕಿವುಡುತನ, ಕಿವಿ ಗುಂಯ್ ಗುಡುವುದು ಮುಂತಾದವುಗ ಳಿಂದ ಪಾರಾಗಬಹುದು. ಕಿವಿಗೆ ಎಣ್ಣೆ ಹಾಕುವ ಪದ್ಧತಿ ಹಿಂದಿನಿಂದಲೂ ಇದೆ. ಕಿವಿಗೆ ಎಣ್ಣೆ ಬಿಡುವುದರಿಂದ ಕಿವಿ ಸೋರುವ ತೊಂದರೆಯಾಗುತ್ತದೆ ಎಂಬ ತಪ್ಪು ಭಾವನೆ ಇದೆ. ಆದರೆ ಸರಿಯಾದ ಕ್ರಮದಲ್ಲಿ ಕಿವಿಗೆ ಎಣ್ಣೆ ಹಾಕುವುದರಿಂದ ಎಲ್ಲಾ ಕಿವಿ ರೋಗಗಳಿಂದ ದೂರವಿರಬಹುದು. ಅದಕ್ಕಾಗಿ ಕಿವಿಗೆ ಹಾಕುವ ಎಣ್ಣೆ ಸ್ವಲ್ಪ ಬೆಚ್ಚಗಾಗಿಸಿ ಅದನ್ನು ಕಿವಿಗೆ ಹನಿಮೂಲಕ ಹಾಕಿದ್ದು ಕೆಲ ಸಮಯದ ನಂತರ ಒಣ ಹತ್ತಿಯಿಂದ ಅಥವಾ ಹತ್ತಿಯ ಬಡ್ಡುಗಳಿಂದ ಸಂಪೂರ್ಣ ಒಣಗಿಸುವುದು ಸರಿಯಾದ ಕ್ರಮ. ಆಧುನಿಕ ಜಗತ್ತಿನಲ್ಲಿ ಇಂದ್ರಿಯಗಳ ಅತಿ, ಮಿಥ್ಯಾಯೋಗಗಳ ಬಲಿಪಶು ಆಗುತ್ತಿರುವುದರಲ್ಲಿ ಕಿವಿಗಳು ಮುಖ್ಯವಾಗಿವೆ. ಕಿವಿಗಳಿಗೆ ತುರುಕಿಕೊಳ್ಳುವ ಕೇಳುವ ಸಾಧನಗಳು, ಪಾಡ್‌ಗಳು, ಸದಾ ಮೊಬೈಲನ್ನು ಕಿವಿಗೆ ಒತ್ತಿ ಹಿಡಿದು ಮಾತಾಡುವುದು, ದೊಡ್ಡ ಸದ್ದಿನ ಸಂಗೀತಗಳನ್ನು ಅತಿಯಾಗಿ ಕೇಳುವುದು, ವಾಹನಗಳ ಕರ್ಕಶ ಶಬ್ದ, ದೂರದರ್ಶನದ ಮುಂದೆ ದೂರ ಕೂರದೆ ಅಂಟಿಕೊಂಡು ಕುಳಿತು ಜೋರಾಗಿ ಶಬ್ದವಿರಿಸಿ ಕೇಳುವುದು ಮುಂತಾದವು ಕಾರಣವಾಗಿವೆ. ಇವುಗಳನ್ನೂ ಸರಿಪಡಿಸಿಕೊಳ್ಳಬೇಕು ಮತ್ತು ಕಿವಿಗೆ ಎಣ್ಣೆ ಬಿಡುವುದರಿಂದ ಇವುಗಳ ಬಾಧೆಯಿಂದ ದೂರಾಗಬಹುದು.

ಅಂಗಾಲಿಗೆ ಎಣ್ಣೆ ನೀವುವುದು : ತಲೆಗೆ ಹಚ್ಚಿದಂತೆ ವಿಶೇಷವಾಗಿ ಅಂಗಾಲು ಗಳಿಗೆ ಎಣ್ಣೆ ತಿಕ್ಕಿ ನೀವಿದರೆ ಕಣ್ಣಿನ ಶಕ್ತಿ ಹೆಚ್ಚುತ್ತದೆ, ಕಾಲುಗಳು ಜುಮುಗಟ್ಟುವುದು, ಕಾಲು ಸೆಳೆತ, ನೋವು, ಬಿರಿಯುವುದು ಇವುಗಳ ನಿವಾರಣೆ ಯಾಗುವುದು. ಇದನ್ನು ರಾತ್ರಿ ಮಲಗುವ ಮೊದಲು ಹಚ್ಚಿದರೆ ಸುಖನಿದ್ರೆ ಬರುವುದು.

ಅಭ್ಯಂಗಕ್ಕೆ ಎಳ್ಳೆಣ್ಣೆ ಒಳ್ಳೆಯದು : ದೇಶ, ಕಾಲ, ದೇಹ ಪ್ರಕೃತಿಗಳಿಗನುಗುಣವಾಗಿ ಕೊಬ್ಬರಿ ಎಣ್ಣೆ, ಸಾಸಿವೆ ಎಣ್ಣೆ, ಹರಳೆಣ್ಣೆ ಮತ್ತು ತುಪ್ಪಗಳನ್ನೂ ಉಪಯೋಗಿಸ ಬಹುದು. ಅಲ್ಲದೆ ಔಷಧಸಿದ್ಧ ಸುವಾಸಿತ ಎಣ್ಣೆಗಳನ್ನೂ ಬಳಸಬಹುದು. ಎಣ್ಣೆಯನ್ನು ಸ್ವಲ್ಪ ಬೆಚ್ಚಗಾಗಿಸಿ ಬಳಸಬೇಕು. ಪ್ರತಿನಿತ್ಯ ಎಣ್ಣೆ ನೀವಿಕೊಂಡು ಗಂಟೆಗಟ್ಟಲೆ ಬಿಡಬೇಕು ಎಂದು ಹಲವರ ಅನಿಸಿಕೆ, ಹಾಗಲ್ಲದೆ ಕೆಲವು ಹೊತ್ತು ಅಂದರೆ ಸುಮಾರು 15 ನಿಮಿಷದಿಂದ 30 ನಿಮಿಷದಷ್ಟಾದರೂ ಬಿಟ್ಟರೆ ಸಾಕಾಗುವುದು. ಸಮಯವಿದ್ದಲ್ಲಿ ಇನ್ನು ಹೆಚ್ಚು ಕಾಲ ಬಿಡಬಹುದು.

'ಆ ಎಣ್ಣೆ ನಶೆ ತಂದು ಆರೋಗ್ಯಕ್ಕೆ ಕುತ್ತು ತಂದರೆ, ಈ ಎಣ್ಣೆ ಸುಖ ತಂದು ಆರೋಗ್ಯಕ್ಕೆ ಒತ್ತು ನೀಡುವುದು'




ಡಾ. ಶ್ರೀಪ್ರಸಾದ್ ಎಚ್.ಎಸ್.
ಬಿಎಎಂಎಸ್ (ಆ), ಬಿಎಎಂಎಸ್ (ಇಂ)
ಶ್ರೀಪ್ರಸಾದ್ ಆಯುರ್ವೇದ # 9
ಮನುವನ, ವಿಜಯನಗರ.
ಬೆಂಗಳೂರು–40. 080–23301090

ಸಿದ್ಧರಾಮೇಶ್ವರನ ವಚನವೂ ಸೇರಿ ಕೆಲವು ವಿಶೇಷಗಳ ಚಿತ್ರದುರ್ಗದ ಶಾಸನ

ಚಿತ್ರದುರ್ಗದ ಬೆಟ್ಟದ ಮೇಲಿನ ಸಂಪಿಗೆ ಸಿದ್ಧೇಶ್ವರ ದೇವಾಲಯದ ನವರಂಗದ ಪ್ರವೇಶದ್ವಾರದ ಮುಂದೆ ಜಗಲಿಯ ಮೇಲಿರುವ ಎರಡು ಶಾಸನಗಳು ಸಾ.ಶ. 14ನೆಯ ಶತಮಾನದವಿದ್ದು, ವಿಜಯನಗರದ ದೊರೆ ಬುಕ್ಕರಾಯನ ಕಾಲಕ್ಕೆ ಸೇರಿದವಾಗಿವೆ. ಈ ಎರಡು ಶಾಸನಗಳಲ್ಲಿ ಒಂದು ಸಾ.ಶ. 1355ರ ವರ್ಷದ್ದಾದರೆ, ಇನ್ನೊಂದು ಸಾ.ಶ. 1356ರ ವರ್ಷದ್ದಾಗಿದೆ. ಬುಕ್ಕರಾಯನು ಹೊಸಪಟ್ಟಣದಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ, ಅವನ ಅಳಿಯ (ಭಾವಮೈದುನ?) ಸಾಯ್ಯನಾಯಕನ ಮಗನಾದ ಮಲ್ಲಿನಾಥ ಒಡೆಯನು ಚಿಮ್ಮತ್ತನಕಲ್ಲನ್ನು (ಆಗಿನ ಚಿತ್ರದುರ್ಗ) ಆಳುತ್ತಿದ್ದನು. ಆಗ ಅವನು ಸಿದ್ಧನಾಥ (ಈಗ ಸಂಪಿಗೆ ಸಿದ್ಧೇಶ್ವರ) ದೇವರಿಗೆ ಕಲ್ಲಿನ ಉಪ್ಪರಿಗೆ, ಕಲ್ಲಿನ ಉಯ್ಯಾಲೆ, ಶಿಖರ ಇವುಗಳನ್ನು ಮಾಡಿಸಿದ್ದಾಗಿ ಈ ಶಾಸನಗಳು ಹೇಳುತ್ತವೆ. ಅದಲ್ಲದೆ, ಈ ದೇವರ ಸೇವೆಗಾಗಿ, ಮಲ್ಲಿನಾಥ ಒಡೆಯನು ಸಾ.ಶ. 1355ರ ಶಾಸನದಲ್ಲಿ ಚಿಕ್ಕಪುರ ಎಂಬ ಗ್ರಾಮವನ್ನೂ ಸಾ.ಶ. 1356ರ ಶಾಸನದಲ್ಲಿ ಮುಸುವಡಿಯಪುರ ಎಂಬ ಗ್ರಾಮವನ್ನೂ ದಾನ ಗ್ರಾಮಗಳಾಗಿ, ಆ ದೇವರ ಸೇವೆ ಮಾಡುತ್ತಿದ್ದ ಸ್ಥಾನಿಕ ಹಿರಿಯ ಸಿದ್ಧಂಣಗಳ ಮಗ ಸೋವಂಣನವರಿಗೆ ಒಪ್ಪಿಸಿದ್ದಾಗಿ ಈ ಶಾಸನಗಳು ಹೇಳುತ್ತವೆ. ಇದೇ ಮಲ್ಲಿನಾಥ ಒಡೆಯನ ತಲಾ ಒಂದೊಂದು ಶಾಸನ ಇದೇ ಚಿತ್ರದುರ್ಗ ತಾಲೂಕಿನ ಚಿಕ್ಕಪುರ ಗ್ರಾಮದಲ್ಲೂ ಮತ್ತು ಮುಸುಂಡಿಹಾಳು ಗ್ರಾಮದಲ್ಲೂ ಇವೆ.

ಈ ಮಲ್ಲಿನಾಥ ಒಡೆಯನಿಗೆ 'ನಡೆಗೋಂಟೆ ಮಲ್ಲ' ಎಂಬ ಬಿರುದಿದ್ದಿತು. ಅವನು ಮಹಾವೀರ ಎಂಬುದನ್ನು ಶತ್ರು ಪಕ್ಷದವರೂ ಕೂಡಾ ಒಪ್ಪಿಕೊಂಡಿದ್ದರು. ಅದನ್ನು ಹೇಳುವ ಪದ್ಯ ಹೀಗಿದೆ:

ತುರುಕ ದಳಕ್ಕೆ ಸೇವುಣ ದಳಕ್ಕೆ
ತೆಲುಂಗದಳಕ್ಕೆ ಪಾಂಡ್ಯರು
ಬ್ಬರದ ದಳಕ್ಕೆ ಹೊಯಿಸಣ ದಳಕ್ಕೆ
ಮಹೋನ್ನತಿವೆತ್ತ ಮಂಡಳೇ
ಶ್ವರ ನಡೆಗೋಂಟೆ ಸಾಯ್ಯನ ಕುಮಾರನಗ್ಗಳ
ಮಲ್ಲಿನಾಥನಂ ಪರಬಳ ಧೀರನೆಂದೊಲಿದು
ಮಂನಿಸುವಂ ಸುರತಾಳ ಭೂಭುಜಂ
(ಎಪಿಗ್ರಾಫಿಯ ಕರ್ನಾಟಿಕ ಸಂಪುಟ 11, ಚಿತ್ರದುರ್ಗ 2 ಮತ್ತು 3)



ಡಾ. ಬಿ.ರಾಜಶೇಖರಪ್ಪ
ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು (ನಿ) 2ನೆಯ ಕ್ರಾಸ್ (ಪಶ್ಚಿಮ), ಜೆ.ಸಿ.ಆರ್.ಬಡಾವಣೆ, ಚಿತ್ರದುರ್ಗ–01.
ಮೊ : 94802 26064

'ನಡೆಗೋಂಟೆ' 'ನಡೆಗೋಂಟೆಮಲ್ಲ' ಎನಿಸಿದ್ದ ಮಲ್ಲಿನಾಥ ಒಡೆಯನು, ಮುಸಲ್ಮಾನ, ಸೇವುಣ, ತೆಲುಂಗ, ಪಾಂಡ್ಯ, ಹೊಯಿಸಣ – ಈ ಎಲ್ಲ ಸೈನ್ಯಗಳಲ್ಲಿ ಗೌರವ ಖ್ಯಾತಿಗಳನ್ನು ಪಡೆದಿದ್ದ. ಅಷ್ಟೇ ಅಲ್ಲ, ಅವನು ಶತ್ರು ಪಕ್ಷದವನಿದ್ದರೂ ಸುರತಾಳನು ಅರ್ಥಾತ್ ಸುಲ್ತಾನನು 'ಇವನು ನಮ್ಮ ಶತ್ರು ಪಕ್ಷದಲ್ಲೇ ಧೀರ ಎಂದು ಪ್ರೀತಿ ತೋರಿ ಮನ್ನಣೆ ಮಾಡುತ್ತಾನೆ'– ಎನ್ನುತ್ತದೆ ಈ ಪದ್ಯ. ಈ ಸುಲ್ತಾನ ಬಹುಶಃ ಬಹಮನಿ ಸುಲ್ತಾನನಾದ ಅಲ್ಲಾವುದ್ದೀನ್ ಹಸನ್ ಬಹ್‌ಮನ್‌ಷಾನೇ (ಸಾ.ಶ. 1347–58) ಎಂದು ರೈಸ್ ಊಹಿಸಿದ್ದಾರೆ. ಮಲ್ಲಿನಾಥನ ಶೌರ್ಯವನ್ನು ಹೇಳುವ ಇನ್ನೊಂದು ಪದ್ಯ ಹೀಗಿದೆ:


ಅಗಳುಗಳಾಳುವೇರಿಗಳು ಡೆಂಕಣಿ ಅಟ್ಟಳೆ
ಕೊತ್ತಳಂಗಳೊಡ್ಡುಗಳೊಳು ಕೊಂಟೆಯೆಂದೆನಿಸಿಕೊಂಡಿಹ
ಕೋಂಟೆಯನೇನ ಬಣ್ಣಿಸಲುಬಗೆವುದೆ ಮಾರ್ಬಲಕ್ಕೆ
ನಿಜಸೇನೆಗೆ ವಜ್ರದ ಕೋಂಟೆಯಾಗಿ ತೋಱುಗು ನಡೆಗೋಂಟೆ
ಮಲ್ಲನ ಭುಜಾಬಳವೀ ಅವನೀತಳಾಗ್ರದೊಳ್
(ಎಕ 11, ಚಿತ್ರದುರ್ಗ 2 ಮತ್ತು 3)

ಕಂದಕ, ಬತೇರಿ, ಡೆಂಕಣಿ, ಅಟ್ಟಳೆ, ಕೊತ್ತಳ, ಮುಂತಾದವುಗಳಿಂದ ಕೂಡಿ ಕೋಟೆಯೆನಿಸಿಕೊಂಡಿರುವ ಕೋಟೆಯನ್ನು ಏನೆಂದು ವರ್ಣಿಸುವುದು? ಶತ್ರುಸೈನ್ಯಕ್ಕೆ ಮತ್ತು ತನ್ನ ಸೈನ್ಯಕ್ಕೆ ವಜ್ರದ ಕೋಟೆಯಾಗಿ ತೋರುತ್ತದೆ, ನಡೆಗೋಂಟೆ ಮಲ್ಲನ ಭುಜಬಲ, ಈ ಜಗತ್ತಿನಲ್ಲಿ – ಎನ್ನುತ್ತದೆ ಈ ಪದ್ಯ. ಈ ಪದ್ಯದಲ್ಲಿ ಒಂದು ಕೋಟೆ ನಿಜವಾದ ಕೋಟೆ ಎನಿಸಿಕೊಳ್ಳಬೇಕಾದರೆ ಅದು ಏನೇನನ್ನು ಒಳಗೊಂಡಿರಬೇಕು ಎಂಬುದನ್ನೂ ಈ ಪದ್ಯ ಸಾದರ ಪಡಿಸುತ್ತದೆ. ಕೋಟೆಯು ವಿವಿಧ ಅಂಗಗಳನ್ನು ಬಣ್ಣಿಸುವ ಇಂಥ ಪದ್ಯಗಳು ಶಾಸನಗಳಲ್ಲಿ ವಿರಳವೆಂದೇ ಹೇಳಬೇಕು. ಇನ್ನೊಂದು ಪದ್ಯ ಇನ್ನೂ

ಅತಿಶಯವಾಗಿದೆ, ಇದು ಕೂಡಾ ನಡೆಗೋಂಟೆಮಲ್ಲ ಎನಿಸಿದ ಮಲ್ಲಿನಾಥ ಒಡೆಯನನ್ನು ಕುರಿತುದೇ ಆಗಿದೆ. ಸಂಸ್ಕೃತದ ಆ ಪದ್ಯ ಹೀಗಿದೆ :

ಮೇರೋರ್ಮೂರ್ಧ್ನ್ಯಮರಾವತೀಮಧಿವಸತ್ಯಾಖಂಡಲೋ ದ್ವಾರಕಾ ಮಧ್ಯಸ್ಥೇ ಮಧುಸೂದನೋ ವಿಹರತೇ ರುದ್ರೋತಿ ರೌಪ್ಯಾಚಲೇ ಶ್ಲಾಘ್ಯ ಸ್ಯಾವೆಯ ಮಲ್ಲಿನಾಥ ನೃಪತಿಶ್ಚೈಕಾಂಗ ವೀರೋ ಜಗತ್ತ್ರ ಖ್ಯಾತೋ ನಡೆಗೊಂಟೆಮಲ್ಲ ಬಿರಿದೋ ದುರ್ಗಂ ವಿನಾ ವರ್ತತೇ

(ಎಕ 11, ಚಿತ್ರದುರ್ಗ 3)



ಮೇರುವಿನ ನೆತ್ತಿಯ ಅಮರಾವತಿಯಲ್ಲಿ ಇಂದ್ರನು ವಾಸಿಸುತ್ತಾನೆ. ದ್ವಾರಕೆಯ ಮಧ್ಯದಲ್ಲಿ ಕೃಷ್ಣನು ವಿಹರಿಸುತ್ತಾನೆ. ಇನ್ನು ರುದ್ರನೋ ಬೆಳ್ಳಿಬೆಟ್ಟವೆನಿಸಿದ ಕೈಲಾಸದಲ್ಲಿ ವಿಹರಿಸುತ್ತಾನೆ. ಆದರೆ, ಸ್ಯಾವೆಯ ಮಲ್ಲಿನಾಥ ದೊರೆ ಏಕಾಂಗವೀರನಾಗಿ ಜಗತ್ಪ್ರಸಿದ್ಧವಾದ 'ನಡೆಗೋಂಟೆಮಲ್ಲ' ಎಂಬ ಬಿರುದಾಂಕಿತನಾಗಿ ರಕ್ಷಣೆಗೆ ಯಾವ ದುರ್ಗವೂ ಬೇಕಿಲ್ಲದೆ ಇರಬಲ್ಲವನಾಗಿದ್ದಾನೆ. ಅಂದರೆ ಇಂದ್ರ ಕೃಷ್ಣ ರುದ್ರ ಇವರೆಲ್ಲ ಸುರಕ್ಷಿತ ಜಾಗಗಳಲ್ಲೆ ಇರುವುದರಿಂದ ಯಾರ ದಾಳಿಗೂ ಸುಲಭವಾಗಿ ಸಿಕ್ಕದವರಾಗಿ, ಸುರಕ್ಷಿತವಾಗಿಯೇ ಇದ್ದಾರೆ. ಆದರೆ ಅವರಿಗಿರುವಂಥ ಯಾವ ಸುರಕ್ಷತತೆಯೂ ಇಲ್ಲದೆ ತಾನೇ ನಡೆದಾಡುವ ಒಂದು ಕೋಟೆಯಾಗಿ ಇರಬಲ್ಲವನಾಗಿದ್ದಾನೆ, ಮಲ್ಲಿನಾಥ ದೊರೆ! ಹೀಗಿರುವ ಈ ಪದ್ಯದ ಕಾವ್ಯ ಸೌಂದರ್ಯವನ್ನು ಮತ್ತೆ ಬೇರೆ ಮಾತುಗಳಲ್ಲಿ ಹೇಳುವುದು ಅಗತ್ಯವಿಲ್ಲ. ಅಷ್ಟು ಚೆನ್ನಾಗಿ ಈ ಪದ್ಯ ಮಲ್ಲಿನಾಥನ 'ನಡೆಗೋಂಟೆಮಲ್ಲ' ಎಂಬ ಬಿರುದಿನ ಅರ್ಥ ಓದುಗರ ಮನಸ್ಸಿಗೆ ಸ್ಫುರಿಸುವಂತೆ ಮೂಡಿಬಂದಿದೆ.

ಈ ಶಾಸನದ ಆರಂಭ ಭಾಗದಲ್ಲಿ ಒಂದು ಲಿಂಗಸ್ತೋತ್ರ ಬರುತ್ತದೆ. ಇದು ಯಾವ ಪದ್ಯಜಾತಿ ಎಂದು ಹೇಳಿಲ್ಲ. ಆದರೂ ಈ ಪದ್ಯದ ಛಂದಸ್ಸು ಭೋಗಷಟ್ಪದಿ – ಅದರಲ್ಲೂ ಮಾತ್ರಾಗಣಾನ್ವಿತವಾದ ಭೋಗ ಷಟ್ಪದಿಯ ಒಂದು ಪ್ರಕಾರ ಎಂದು (ಶ್ರೀಮತಿ ಹನುಮಾಕ್ಷಿ ಗೋಗಿ ಅವರು) ಪ್ರತಿಪಾದಿಸಲು ಯತ್ನಿಸಿದ್ದರು. ಬಿ.ಎಲ್.ರೈಸ್ ಅವರು ಈ ಪದ್ಯಭಾಗದ ಪಾಠ ಸಮಗ್ರವಾಗಿಲ್ಲ ಎಂಬುದನ್ನು ತೋರಿಸಿದ್ದಾರೆ. ಹಾಗಿರುವಾಗ ಛಂದಸ್ಸಿನಂಥ ಲೆಕ್ಕಾಚಾರಬದ್ಧವಾದ ತಾಂತ್ರಿಕ ಅಂಶವನ್ನು ಕುರಿತು ತರ್ಕಿಸುವುದು ಮತ್ತು ನಿರ್ಣಯಿಸುವುದು ನಿರ್ದುಷ್ಟ ಎನಿಸುವುದಿಲ್ಲ. ಇದರ ಪಾಠ "ಪಠ್ಯ ದೋಷಗಳಿಂದ ಕೂಡಿರುವುದರಿಂದ ನಿರ್ಣಯ ತೊಡಕಿನದು" ಎಂದು ಶ್ರೀಮತಿ ಗೋಗಿಯವರು ಹೇಳಿದರೂ ಛಂದಸ್ಸು ಭೋಗಷಟ್ಪದಿಯ ಒಂದು ಪ್ರಕಾರ ಎಂದು ನಿಶ್ಚಯಿಸಲು ಪ್ರಯತ್ನಿಸಿದ್ದಾರೆ. ಪಾಠ ಅಸಮಗ್ರವಿದ್ದರೂ ಇದೊಂದು ಷಟ್ಪದಿ ಇರಬೇಕೆನಿಸಿ ರೈಸ್ ಅವರು ಈ ಶಾಸನದ ರೋಮನ್ ಲಿಪ್ಯಂತರದ ಪಾಠ ಕೊಡುವಾಗ ಆರು ಸಾಲುಗಳಲ್ಲಿ ಈ ಭಾಗವನ್ನು ತೋರಿಸಲು ಯತ್ನಿಸಿದ್ದರು. ಅವರು ಹಾಗೆ ತೋರಿಸಿದ್ದೇ ಶ್ರೀಮತಿ ಗೋಗಿ ಅವರಿಗೆ ಅದರ ಛಂದಸ್ಸು ಷಟ್ಪದಿ ಎಂದು ತೋರಿಸಲು ಸ್ಫೂರ್ತಿಯಾಗಿರಬೇಕು.

ಚಿತ್ರದುರ್ಗ ಶಾಸನಗಳ ಬಗ್ಗೆ ಕುತೂಹಲ ತಾಳಿ ಅಧ್ಯಯನ ಮಾಡುತ್ತ ಬಂದ ನನಗೆ ರೈಸ್‌ರಿಂದ ಪ್ರಕಟವಾಗಿದ್ದ ಕೆಲವು ಶಾಸನಗಳ ಓದಿಕೆಯಲ್ಲಿ ವ್ಯತ್ಯಾಸವಾಗಿದ್ದುದು ಗಮನಕ್ಕೆ ಬಂದಿತ್ತಾದ್ದರಿಂದ ಇಲ್ಲೂ ಏನಾದರೂ ಹಾಗೆ ಆಗಿರಬಹುದೆ ಎಂದು ಶಾಸನವನ್ನು ಖುದ್ದಾಗಿ ನೋಡಿ ಪರಿಶೀಲಿಸಿದಾಗ, ಅದರಲ್ಲಿ ಯಾವ ಅಕ್ಷರಗಳೂ ಮುಕ್ಕಾಗಿಲ್ಲದೆ ಪಾಠ ಪೂರ್ಣವಾಗಿ ಇದ್ದುದು ನನಗೆ ಗೋಚರಿಸಿತು. ಈ ಭಾಗದ ಎಲ್ಲ ಅಕ್ಷರಗಳೂ ಸುಸ್ಥಿತಿಯಲ್ಲಿದ್ದು ಪಾಠ ಪೂರ್ಣವಾಗಿ ದೊರೆತಿತು. ಅದರ ಪ್ರಕಾರ ಇಲ್ಲಿರುವುದು ಷಟ್ಪದಿಯಲ್ಲ ಬೇರೆಯದೇ ಒಂದು ಛಂದಸ್ಸು ಎಂದು ಮನಸ್ಸಿಗೆ ಕಂಡಿತು. ಮತ್ತಷ್ಟು ಆ ಬಗ್ಗೆ ಯೋಚಿಸಿದಾಗ ಇಲ್ಲಿ ಪ್ರಾಸ ನಿಯತವಾಗಿಲ್ಲದ, ಜಾನಪದ ರೀತಿಯ ಎರಡು ತ್ರಿಪದಿಗಳು ಇಲ್ಲಿ ಕೂಡಿಕೊಂಡಿರುವಂತೆ ಕಂಡಿತು. ಅದನ್ನು ಹೀಗೆ ತೋರಿಸಬಹುದು:

ಪರಮನೆ ಪರಭವ । ಕ್ರುತನೆ ಪರಾಪರನೆ
ಪರಮೇಶನೀಶನೆ ಪಂನ್ನೆಗಾ । ಧಾರನೆ
ಪಲವು ಲೋಕ ಹಿತಾರ್ಥ್ಥನೆ ॥
ಪಾಪಧಾವನೆ ಪಾ । ಲಿಪನೆ ಪರಾಭುಜನೆ

ಪರಸುಧರಪ್ರೀತನೆ ಪವಿತ್ರನೆ । ಕರುಣಿಸೈ
ವರದಾನಿ ಪ್ರಸಿದ್ಧ ಲಿಂಗವೆ ॥

(ಎಕ 11, ಚಿತ್ರದುರ್ಗ 3)

''ರೈಸರು ವಿದೇಶೀಯರಾದರೂ, ನಮ್ಮ ಶಾಸನಗಳನ್ನು ಓದುವುದರಲ್ಲಿ ಪ್ರಕಟಿಸುವುದರಲ್ಲಿ ಅಸಾಧಾರಣವಾಗಿ ದುಡಿದಿದ್ದಾರೆ. ಇದು ಸ್ಮರಣೀಯ. ಆದರೂ ಅಂಥ ಲಿಪಿತಜ್ಞರ ಓದಿಕೆಯಲ್ಲೂ ಅಲ್ಲಲ್ಲಿ ಸ್ಖಾಲಿತ್ಯಗಳಾಗಿವೆ–ಎಂಬುದನ್ನು ಹೇಳಲೇಬೇಕು.'' ಅದಕ್ಕೆ ಒಂದು ಉದಾಹರಣೆ ಈ ಶಾಸನದ ಈ ಭಾಗದ ಪಾಠ. ಪ ಕಾರದ ಸುಂದರ ಅನುಪ್ರಾಸವಿರುವ ಸಂಸ್ಕೃತ ಪದಗಳಿಂದ ತುಂಬಿರುವ ಈ ಭಾಗ ಒಂದು ಸುಂದರವಾದ ಲಿಂಗಸ್ತೋತ್ರವಾಗಿದೆ. ಇಂಥ ಲಿಂಗಸ್ತೋತ್ರಗಳು ಸಿಕ್ಕುವುದು ತುಂಬ ವಿರಳವೇ ಸರಿ. ಮೂಲದಲ್ಲಿ ದಂಡ ಚಿಹ್ನೆಗಳನ್ನು ಹಾಕಿಲ್ಲದಿದ್ದರೂ ಈ ಪಾಠದಲ್ಲಿ ಅಗತ್ಯವಾದೆಡೆ ದಂಡ ಚಿಹ್ನೆಗಳನ್ನು ಹಾಕಿ ಇಲ್ಲಿ ಎರಡು ತ್ರಿಪದಿಗಳು ಮೇಳೈಸಿರುವುದನ್ನು ತೋರಿಸಿದೆ. ಇದರಿಂದ ಇಲ್ಲಿರುವುದು ಆದಿಪ್ರಾಸ ಇಲ್ಲದಿರುವ ಜಾನಪದದ ರೀತಿಯ ಎರಡು ತ್ರಿಪದಿಗಳು ಪರಸ್ಪರ ಕೂಡಿಕೊಂಡಿರುವುದನ್ನು ಗುರುತಿಸಬಹುದಾಗಿದೆ.

ಸಿದ್ಧರಾಮೇಶ್ವರನ ವಚನ

12ನೆಯ ಶತಮಾನದ ಖ್ಯಾತ ಶಿವಶರಣರಲ್ಲಿ ಸಿದ್ಧರಾಮೇಶ್ವರರೂ ಒಬ್ಬರು. ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮಡಿವಾಳ ಮಾಚಿದೇವ ಮುಂತಾದವರ ಸಾಲಿನಲ್ಲಿ ಬರುವ ಸಿದ್ಧರಾಮೇಶ್ವರರು ವಚನಕಾರರೆಂದೂ ಪ್ರಸಿದ್ಧರಾಗಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಇತ್ತೀಚಿನ ಒಂದು ವಚನ ಸಂಕಲನದಂತೆ ಅವರ 1679 ವಚನಗಳು ಉಪಲಬ್ಧವಾಗಿವೆ. (ನೋಡಿ : ಸಿದ್ಧರಾಮೇಶ್ವರ ವಚನ ಸಂಪುಟ, ಸಂ. ಡಾ. ಎಸ್. ವಿದ್ಯಾಶಂಕರ, ಕರ್ನಾಟಕ ಸರ್ಕಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಪ್ರಥಮ ಮುದ್ರಣ, 1993)

ಸಿದ್ಧರಾಮೇಶ್ವರರು ವಚನಗಳಲ್ಲಿ 'ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ಅಂಕಿತವನ್ನು ಬಳಸಿದ್ದರೆ, ತ್ರಿಪದಿಗಳಲ್ಲಿ 'ಯೋಗಿನಾಥ' ಎಂಬ ಅಂಕಿತವನ್ನು ಬಳಸಿದ್ದಾರೆ. ಅದು ಈಗಾಗಲೇ ತಿಳಿದ ಸಂಗತಿ. ಅವರು ಬರೆದ ವಚನಗಳೆಷ್ಟು ಎಂಬ ಬಗ್ಗೆ, ಪ್ರಕಟವಾಗಿರುವ ವಚನಗಳಲ್ಲಿ ಹಲವು ಅವರ ವಚನಗಳಲ್ಲ ಎಂಬ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಬಂದಿವೆ, ವಾದ ವಿವಾದಗಳೂ ಆಗಿವೆ. ಮೇಲೆ ಹೇಳಿದ ವಚನಗಳಲ್ಲದೆ ಮತ್ತೆ ಮೇಲೆ ಹೇಳಿದ ರೀತಿಯವಲ್ಲದ, ಮೇಲೆ ಹೇಳಿದ ರೀತಿಯ ಅಂಕಿತಗಳಿಲ್ಲದ, ಬೇರೆ ಎರಡು ವಚನಗಳು ಸಿದ್ಧರಾಮೇಶ್ವರರವೇ ವಚನಗಳೆಂಬುದನ್ನು ಡಾ. ಆರ್.ಸಿ. ಹಿರೇಮಠ ಅವರು ತೋರಿಸಿಕೊಟ್ಟಿದ್ದಾರೆ. (ನೋಡಿ : ಅವರೇ ಸಂಪಾದಿಸಿರುವ 'ಶ್ರೀ ಸಿದ್ಧರಾಮೇಶ್ವರನ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1968, ಪ್ರಸ್ತಾವನೆ, ಪು. 25 ರಿಂದ 62).

ಅವರು ಗುರುತಿಸಿರುವ ವಚನಗಳು ಶಾಸನಗಳಲ್ಲಿ ಮಾತ್ರ ಬಂದಿರುವವುಗಳು. ಅವು ಸಿದ್ಧರಾಮೇಶ್ವರರ ವಚನಗಳ ತಾಳೇಗರಿ ಹಸ್ತಪ್ರತಿಗಳಲ್ಲಾಗಲಿ, ಕಾಗದದ ಹಸ್ತಪ್ರತಿಗಳಲ್ಲಾಗಲಿ ಎಲ್ಲೂ ಬಂದವುಗಳಲ್ಲ. ವಚನಗಳು ಎರಡಿದ್ದರೂ ಇವೆರಡರ ತಿರುಳೂ ಒಂದೇ ಆಗಿದೆ.

ಆ ಎರಡು ಬಗೆಯ ವಚನಗಳು ಕರ್ನಾಟಕದ ಮತ್ತು ಮಹಾರಾಷ್ಟ್ರದ ಯಾವ ಯಾವ ಸ್ಥಳಗಳಲ್ಲಿಯ ಶಾಸನಗಳಲ್ಲಿ ಬಂದಿವೆ ಎಂಬುದನ್ನೂ ಅವರು ಪಟ್ಟಿ ಮಾಡಿದ್ದಾರೆ. ಆ ವಚನಗಳು ಮೊದಲಿಗೆ ಸಾ.ಶ. 1190ರಿಂದಲೇ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತವೆ. ಅಲ್ಲಿಂದ ಮುಂದೆ ಅಂಥ ವಚನಗಳು ಸಾ.ಶ. 14ನೆಯ ಶತಮಾನದ ವರೆಗೂ ಕಾಣಿಸಿಕೊಳ್ಳುತ್ತವೆ. ಹಾಗೆ ಕಾಣಿಸಿಕೊಳ್ಳುವ ಶಾಸನಗಳಲ್ಲಿ ಪ್ರಾಯಶಃ ಕಟ್ಟಕಡೆಯದು ಸಾ.ಶ. 1356ರ ವರ್ಷದ ಚಿತ್ರದುರ್ಗದ ಶಾಸನವಾಗಿದೆ. ಆ ಶಾಸನದಲ್ಲಿ ವಚನ ಹೇಗೆ ಬಂದಿದೆ ಎಂಬುದನ್ನು ಪರಿಶೀಲಿಸುವ ಪ್ರಯತ್ನವನ್ನು ಇಲ್ಲಿ ಕೈಕೊಳ್ಳಲಾಗಿದೆ. ಆ ವಚನದಲ್ಲಿ ಸಿದ್ಧರಾಮೇಶ್ವರನದೆಂದು ಸ್ಪಷ್ಟವಾಗಿ ತಿಳಿಸುವ ಅಂಕಿತ 'ಕಪಿಲಸಿದ್ಧಮಲ್ಲಿಕಾರ್ಜುನ' ಆಗಲಿ, 'ಯೋಗಿನಾಥ' ಎಂಬುದಾಗಲಿ ಇಲ್ಲದಿದ್ದರೂ, ಕೆಲವು ಶಾಸನಗಳಲ್ಲಿ ಈ ವಚನದ ಒಕ್ಕಣೆಯ ಕಡೆಯಲ್ಲಿ 'ಎಂಬುದು ಗುರುಸಿದ್ಧರಾಮನಾಥ ದೇವರ ವಚನ' ಎಂಬ ಮಾತು ಬಂದಿರುವುದು, ಇವು ಸಿದ್ಧರಾಮೇಶ್ವರ ಕೃತ ವಚನಗಳೇ ಎಂದು ತಿಳಿಯಬೇಕಾಗುತ್ತದೆ. ದೇವಾಲಯ ದತ್ತಿಗಳ ರಕ್ಷಣೆಯನ್ನು ಪೌರಾಣಿಕ ಶೈಲಿಯಲ್ಲಿ ಅಥವಾ ಕಾವ್ಯಮಯ ಶೈಲಿಯಲ್ಲಿ ಒಟ್ಟಾರೆ ಕಥನದ ಶೈಲಿಯಲ್ಲಿ ಈ ವಚನಗಳು ಸಾರುತ್ತವೆ. ಈ ವಚನಗಳು ಸಿದ್ಧರಾಮೇಶ್ವರರ ಇತರ ವಚನಗಳ ಭಾಷೆ ಶೈಲಿಗೆ ಸಂಪೂರ್ಣ ವಿಭಿನ್ನವಾಗಿವೆ. ದೇವಾಲಯ ಇತ್ಯಾದಿಗಳಿಗೆ ಬಿಟ್ಟ ದತ್ತಿ ದಾನಗಳ ಸಂರಕ್ಷಣೆಯ ಬಗ್ಗೆ ಹೇಳುವುದರಿಂದ ಆ ವಚನಗಳು ಸಿದ್ಧರಾಮೇಶ್ವರ ಸ್ಥಾವರಲಿಂಗ ಸ್ಥಾಪನೆ ಮತ್ತು ದೇವಾಲಯಗಳ ಬಗ್ಗೆ ನಿರಾಕರಣೆಯ ಧೋರಣೆ ಹೊಂದಿದ್ದ ಅಲ್ಲಮಪ್ರಭು ಬಸವಣ್ಣ ಇವರ ಸಂಪರ್ಕಕ್ಕೆ ಬರುವ

ಮುಂಚಿನ ಕಾಲದ– ಅಂದರೆ ಕೆರೆ, ತೋಟ, ದೇವಾಲಯ, ಅರವಟ್ಟಿಗೆ ಮುಂತಾದವುಗಳ ನಿರ್ಮಾಣದಲ್ಲಿ ಆಸಕ್ತನಾಗಿದ್ದ ಕಾಲದ– ಸಿದ್ಧರಾಮೇಶ್ವರರ ವಚನ ಎಂದು ತಿಳಿಯಬೇಕಾಗುತ್ತದೆ. ಇದರಿಂದ ಒಂದು ಕಾಲಕ್ಕೆ ಸಿದ್ಧರಾಮೇಶ್ವರರು, ದೇವಾಲಯ ನಿರ್ಮಾಣ, ತೋಟ, ಅರವಟ್ಟಿಗೆ, ಕೆರೆ ಮುಂತಾದುವುಗಳಿಗೆ ಬರುತ್ತಿದ್ದ ದತ್ತಿಗಳು ಸುರಕ್ಷಿತವಾಗಿರಬೇಕೆಂಬ ಕಾರಣಕ್ಕೆ ಇಂಥ ವಚನಗಳನ್ನು ರಚಿಸಿರಬೇಕು ಎಂದು ಅಭಿಪ್ರಾಯಪಡಬಹುದು. ಮೊದಲಿಗೆ ಅವರಿಂದ ಸ್ಫೂರ್ತಿ ಹೊಂದಿದ್ದ ಕೆಲವು ಶಿಷ್ಯರು ಆಮೇಲಿನ ಕಾಲದಲ್ಲಿ ಇಂಥ ವಚನಗಳನ್ನು ಪ್ರಚಾರ ಮಾಡಿರಬೇಕೆಂದು ಕಾಣುತ್ತದೆ. ಆದರೆ ದೇವಾಲಯಗಳನ್ನು ನಿರಾಕರಿಸಿದ್ದ ಇತರ ಶರಣರು ಇಂಥ ಯಾವ ವಚನಗಳನ್ನೂ ರಚಿಸಹೋಗಲಿಲ್ಲ ಎಂಬುದು ಸ್ಪಷ್ಟವಿರುವ ಸಂಗತಿ.

ಸಿದ್ಧರಾಮೇಶ್ವರರದೆನ್ನುವ ವಚನ ಚಿತ್ರದುರ್ಗ ಶಾಸನದಲ್ಲಿ ಹೇಗೆ ಬಂದಿದೆ ಎಂಬುದನ್ನು ನೋಡೋಣ. ಅದು ಮುಂದಿನಂತಿದೆ :

[ಇ]ರುಳುಂ ಪಗಲುಂ ಪರಿವ ಕಳ್ಳಕೊಳ್ಳಿಯಾದರಂ
ಮನ್ನೆಯ ಮಹಾಮಂಡಲೇಶ್ವರನಾದರಂ
ಧರೆಯನಾಳ್ವ ಚಕ್ರವರ್ತಿಯಾದರಂ
ಪೃಥ್ವೀಪತಿ ರಾಯನಾದರಂ
ಈ ಸ್ಥಾನದಲು ಮಾನ್ಯವಾಗಿದ್ದ ಊರುಗಳಂ ಭೂಮಿಗಳಂ
ಧನಗಳಂ ಮನಂ [ಪೇಸದೆ ಕ]ಳದುಕೊಂಡೆನೆಂಬಾತನ
ಮಾತೆಪಿತುರ್ಗಳೆಲ್ಲವಂ ಎಪ್ಪತ್ತಏಳು ಕೋಟಿ ವರುಷಂಬರಂ
ಪುಳುಗೊಂಡ ನರಕದಲಿಕ್ಕಿ [ನೀನಾಹುತಿ]ಗೊಳುತ್ತಿರು ಕಂಡಾ
ಎಲೆ [ಪಾಪ]ವೆ ಈ ದೇವರ ಭೂಮಿ ಧನಕ್ಕೆ ಆನಂಜುವೆನೆಂದು
ಪಂದೆಯಂ ಪಾವಡರ್ದಂತೆ ಮನಂ ಪೆದಟಿ ಪೊಡಮಟ್ಟು
ಪೋಪನ [ಬೇಗ] ಶೀಘ್ರ ಕವಿಳಾಸಕ್ಕೆ ಕೊಂಡು ಬಾ ಕಂಡಾ
ಎಲೆ ಪುಣ್ಯವೆ ಇಂತೀ ಎರಡರ ಬೆಂಗೆ ಪುಣ್ಯಪಾಪಂಗಳು
ಪೊರ್ದುಕೊಂಡಿರ್ಪವು
ದಿಟಂ ಸತ್ಯಂ ಕಂಡಿರೆ ಎಲೆಎಲೆ ಬಹುಜನಂಗಳಿರಾ
ಸಂದೆಗಂ ಕಂಡಿರಾದರೆ ಸಂದು ಪೋಪಿರಿ ನರಕಕ್ಕೆ

[ಎಕ 11, ಚಿತ್ರದುರ್ಗ 3]

[ರಾತ್ರಿ ಹಗಲುಗಳಲ್ಲಿ ಓಡಾಡುವ ಕೊಳ್ಳಿಕಳ್ಳರಾಗಲಿ, ಸಾಮಂತ ಮಹಾಮಂಡಲೇಶ್ವರರಾಗಲಿ, ಭೂಮಿಯನ್ನು ಆಳುವ ಚಕ್ರವರ್ತಿಯಾಗಲಿ, ಪೃಥ್ವೀಪತಿ ರಾಯನಾಗಲಿ, ಈ ಸ್ಥಾನದಲ್ಲಿ ದೇವರಿಗಾಗಿ ಎಂದು ಮಾನ್ಯವಾಗಿದ್ದ ಊರುಗಳನ್ನೂ ಭೂಮಿಗಳನ್ನೂ ಸಂಪತ್ತನ್ನೂ, ಮನದಲ್ಲಿ ಹೇಸದೆ ನಾನು ವಶಪಡಿಸಿಕೊಳ್ಳುತ್ತೇನೆ ಎಂಬುವವನ ತಾಯಿ ತಂದೆಗಳೆಲ್ಲರನ್ನೂ ಎಪ್ಪತ್ತೇಳು ಕೋಟಿ ವರ್ಷಗಳವರೆಗೆ ಹುಳು ತುಂಬಿದ ನರಕದಲ್ಲಿಕ್ಕಿ ನೀನು ಆಹುತಿ ತೆಗೆದುಕೊಳ್ಳುತ್ತಿರು, ಕಂಡೆಯಾ ಎಲೆ ಪಾಪವೆ; ದೇವರ ಭೂಮಿಗೆ ಸಂಪತ್ತಿಗೆ ನಾನು ಅಂಜುತ್ತೇನೆ, ಎಂದು ಮೈಮೇಲೆ ಹಾವು ಬಿದ್ದವನ ಹಾಗೆ ಮನಸ್ಸಲ್ಲಿ ಹೆದರಿ, ಸುಮ್ಮನೆ ಕೈಮುಗಿದು ಹೋಗುವವನನ್ನು ಬೇಗನೆ ಕೈಲಾಸಕ್ಕೆ ಕರೆದುಕೊಂಡು ಬಾ, ಕಂಡೆಯಾ ಎಲೆ ಪುಣ್ಯವೆ– ಹೀಗೆಂದು ಶಿವನು ಅವೆರಡಕ್ಕೂ ಆಜ್ಞೆ ಇತ್ತನು. ಹೀಗಾಗಿಯೇ ಅವೆರಡೂ ಎಲ್ಲರ ಬೆನ್ನ ಹಿಂದೆಯೂ ಕಾದುಕೊಂಡಿರುತ್ತವೆ. ಇದು ದಿಟ, ದಿಟ, ಸತ್ಯ, ಸತ್ಯ, ಇದರಲ್ಲಿ ಸಂಶಯ ಬೇಡ. ಸಂಶಯ ತಾಳಿದಿರಾದರೆ, ನರಕಕ್ಕೆ ಹೋಗುತ್ತೀರಿ, ಎಚ್ಚರ, ಎಚ್ಚರ.]

ದೇವಾಲಯ ಮಠ ಇತ್ಯಾದಿಗಳಿಗೆ ದಾನದತ್ತಿಗಳು ಭಕ್ತರಿಂದ, ಅಭಿಮಾನಿಗಳಿಂದ ಸಲ್ಲುತ್ತಲೇ ಇದ್ದುವು. ಹಾಗೆ ಸಲ್ಲುತ್ತಿದ್ದ ದಾನದತ್ತಿಗಳಿಗೆ ಸೂಕ್ತ ರಕ್ಷಣೆಯ ಅವಶ್ಯಕತೆ ಇತ್ತು. ಏಕೆಂದರೆ, ದೇವಾಲಯ ಮಠ ಇತ್ಯಾದಿಗಳ ಕಾರ್ಯಕಲಾಪಗಳು ನಿರಂತರವಾಗಿ ನಡೆದುಕೊಂಡು ಹೋಗಲು ಅವುಗಳು ಅಗತ್ಯವಾಗಿದ್ದುವು. ಹಾಗೆಂದೇ ದೇವಾಲಯ ನಿರ್ಮಾಣ ಇತ್ಯಾದಿಗಳಲ್ಲಿ ಆಸಕ್ತಿ ವಹಿಸಿದ್ದ ಸಿದ್ಧರಾಮೇಶ್ವರರಿಗೆ ಆ ದಾನ ದತ್ತಿಗಳು ಸೂಕ್ತವಾಗಿ ಸಂರಕ್ಷಿತವಾಗಿರಬೇಕು ಎಂಬ ಯೋಚನೆ ಸಹಜವಾಗೇ ಇದ್ದಿರಬೇಕು. ಹಾಗೆಂದೇ ಅವನು ಇಂಥ ವಚನಗಳಲ್ಲಿ – ದಾನದತ್ತಿಗಳ ಮೇಲೆ ಕಣ್ಣು ಹಾಕುತ್ತಿದ್ದವರಿಗೆ – ರಾಜ್ಯಾಡಳಿತದ ಅಧಿಕಾರ ವರ್ಗದವರಿಗಿಂತ– ಶಿವನೇ ಪುಣ್ಯ ಪಾಪಗಳನ್ನು ಪ್ರತಿಯೊಬ್ಬರ ಹಿಂದೆಯೂ ಕಾವಲಿಗೆ ಬಿಟ್ಟಿದ್ದಾನೆ ಎನ್ನುವ ನೈತಿಕ ಭಯ ಇಟ್ಟುಕೊಂಡು ನಡೆದುಕೊಳ್ಳುವಂತೆ ಮಾಡಲು ಇಂಥ ವಚನಗಳನ್ನು ರಚಿಸಿರಬೇಕು. ಸಿದ್ಧರಾಮೇಶ್ವರರು ಬಸವಣ್ಣ ಅಲ್ಲಮರ ಸಂಪರ್ಕಕ್ಕೆ ಬಂದ ಮೇಲೆ ಇಂಥ ವಚನಗಳನ್ನು ಬಹುಶಃ ರಚಿಸಿರಲಿಕ್ಕಿಲ್ಲವಾದರೂ, ಅವರಿಂದ ಸ್ಫೂರ್ತಿ ಪಡೆದ ಅವರ ಶಿಷ್ಯ ವರ್ಗದವರು ಈ ವಚನಗಳನ್ನು ದೇವಾಲಯಗಳ ವಿಷಯದಲ್ಲಿ ಮುನ್ನೆಲೆಗೆ ತಂದಿರಬೇಕು ಎನಿಸುತ್ತದೆ. ಹಾಗಲ್ಲದೆ ಇವು ಮತ್ತೆ ಪ್ರಸಾರಗೊಳ್ಳಲು ಬೇರೆ ಕಾರಣವೇನೂ ಕಾಣಿಸದು.

ಪತ್ರಿಕೆಗೆ ಚಂದಾದಾರರಾಗಿ
ಪತ್ರಿಕೆಯ ಬೆಳವಣಿಗೆಗೆ ಸಹಕರಿಸಿ

ಶಿವಯೋಗಿ ಸಿದ್ಧರಾಮ

ಸಂಕ್ರಾಂತಿಯ ದಿನದಂದು ಎಳ್ಳು ಬೆಲ್ಲ ತಿಂದು ಒಳ್ಳೆಯ ಮಾತನಾಡು ಎಂಬ ನುಡಿಗಟ್ಟು ಪ್ರಚಲಿತ. ಉತ್ತರ ಕರ್ನಾಟಕದಲ್ಲಿ ಹೆಚ್ಚು ಮನೆಯ ಸಂಕಾಂತ್ರಿ ಸುಗ್ಗಿ ಹಬ್ಬವಾಗಿ ಆಚರಿಸಲ್ಪಡುತ್ತದೆ. ಮುದ್ದುಗೌಡ ಮತ್ತು ಸುಗ್ಗವ್ವೆಯರಿಗೆ ರೇವಣ ಸಿದ್ಧೇಶ್ವರರ ಆಶೀರ್ವಾದದಿಂದ ಹುಟ್ಟಿದ ಮುಗ್ಧ ಶಿಶು ಸಿದ್ಧರಾಮ. ಧೂಳಿಮಾಕಾಳ ಎಂಬ ನಾಮಾಂಕಿತ ದೊಂದಿಗೆ ಮುಗ್ಧ ರಾಮನಾಗಿ ಬೆಳೆದ. ಧೂಳಿಮಾಕಾಳ ಬಾಲ್ಯದಲ್ಲಿ ಮಲ್ಲಯ್ಯ, ಮಲ್ಲಯ್ಯ ಎಂದು ಕಾಡುಮೇಡುಗಳಲ್ಲಿ ಹುಡುಕಿ ಮಲ್ಲಯ್ಯ ಸಿಗದಿದ್ದಾಗ ಕಮರಿಗೆ ಹಾರಲು ಪ್ರಯತ್ನಿಸುತ್ತಾನೆ. ಬಾಲಕನ ಮನಸ್ಸು ಅರಿತ ಮಲ್ಲಯ್ಯ ಪ್ರತ್ಯಕ್ಷನಾಗಿ ತನ್ನ ನಿಜರೂಪ ತೋರಿಸುತ್ತಾನೆ.

ಶ್ರೀಶೈಲಮಲ್ಲಿಕಾರ್ಜುನನ ದರ್ಶನ ಪಡೆದು ಮಲ್ಲಯ್ಯನ ಆಣತಿಯಂತೆ ತನ್ನ ಊರಿಗೆ ಮರಳುತ್ತಾರೆ. ಧೂಳಿಮಾಕಾಳನ ಮುಗ್ಧತೆಯನ್ನು ಅರಿತ ತಂದೆ ತಾಯಿಗಳು ದಿನನಿತ್ಯದಂತೆ ಕರುಗಳನ್ನು ಕಾಯಲು ಕಳುಹಿಸುತ್ತಾರೆ. ಕರುಗಳನ್ನು ಮೇಯಲು ಬಿಟ್ಟು ಹೊಲದಲ್ಲಿ ಸಿಕ್ಕ ಲಿಂಗವನ್ನು ಸದಾ ಪೂಜಿಸಿ ನವಣೆಯ ಹಾಲುಗಾಳನ್ನೇ ನೈವೇದ್ಯ ಮಾಡುತ್ತಾ ದಿನಗಳನ್ನು ನೂಕುತ್ತಾನೆ. ಶ್ರೀಶೈಲ ಮಲ್ಲಿಕಾರ್ಜುನನ ಅಶರೀರವಾಣಿ ಸದಾ ಕಿವಿಯಲ್ಲಿ ಗುಂಯ್ ಗುಡುತ್ತಿರುತ್ತದೆ. **"ಬೆಳೆಯುವ ಸಿರಿಯನ್ನು ಮೊಳಕೆಯಲ್ಲಿ"** ನೋಡು ಎಂಬಂತೆ ಸಿದ್ಧರಾಮ ಕುಡಿಯರ ಕುಡಿಯಾಗಿ ಬೆಳೆದು ಸಾಮಾಜಿಕ ಚಿಂತನೆಗೆ ತೊಡುಗುತ್ತಾನೆ. **"ಶರಣರ ಕುಲವನರಸಬೇಡಿ ಜಗದ ಹಿರಿಯರೆಲ್ಲರು ಕುಲಜರು ನಡೆನುಡಿಯಿಂದ"** ಎಂದಿದ್ದಾನೆ.

ಮಹಾತಾಯಿ ಸುಗ್ಗಲಾಂಬೆಯ ಉಸುರಿನ ವಾಣಿಯಂತೆ **"ಕೆರೆಯಂ ಕಟ್ಟಿಸು, ಬಾವಿಯಂ ತೆಗೆಸು, ದೇವಾಗಾರಂ ಮಾಡಿಸು, ಅಜ್ಜರಿಯಾಳ್ ಸಿಕ್ಕಿದ ಅನಾಥರಂ ಬಿಡಿಸು, ಮಿತ್ರರ್ಗೆ ಇಂಬುಗೈ ಶಿಷ್ಟರಂ ಮೊರೆ, ನಂಬಿದವರ್ಗೆ ಎರೆ–ವೊಟ್ಟಾಗಿರು"** ಎಂದು ಹಾಲುಣಿಸಿದರ ಪರಿಣಾಮ, ಸಿದ್ಧರಾಮನು ಲೋಲರಾಮನಾದ ಹಾಗೂ ಲೋಕೇಶ್ವರ ನಾದ, ಜನನಾಯಕನಾದ. ಕನ್ನಡದಲ್ಲಿ ಕುಡಿ ಚಿಗುರು ಎಂದು; ಸಂಸ್ಕೃತದಲ್ಲಿ ಪಲ್ಲವ ಎಂದು; ತಮಿಳಿನಲ್ಲಿ ನೊಳಂಬ ಎಂದು; ಅಂದರೆ ಚಿಗುರಿನಂತೆ ಸೂಕ್ಷ್ಮವಾದುದು, ಮೃದುವಾದುದು ಅದನ್ನು ಹೊಂದಿರುವವರು ಕುಡಿಯರು ಎಂದಾಗಿದೆ. ಕುಡಿಯರ ವಂಶ ಸಂಭೂತ ಸಿದ್ಧರಾಮೇಶ್ವರರು ಇಡೀ ನಾಡಿನ ಭಕ್ತರ ಆರಾಧ್ಯದೈವವೆಂದು ಪ್ರಸಿದ್ಧನಾಗಿದ್ದಾನೆ. ಸಿದ್ಧರಾಮನನ್ನು ಕುರಿತು ಹೀಗೆ ಸ್ತುತಿಸಿದ್ದಾರೆ.

"ನಿರಂತರ ಅಖಿಳರಿಗೆ ಅರಿವನೀವ ಮಹಾಂತ ನೆನಿಸಿದ ಸಿದ್ಧರಾಮಯ್ಯಂಗೆ ಶರಣಾರ್ಥಿ" ಹೀಗೆಂದು ಚಾಮರಸ ಕವಿ ಪ್ರಾರ್ಥಿಸಿದ್ದಾನೆ. ಸೊನ್ನಲಾಪುರದೊಳಿರುತಂ ಚರಣಾಂಬುಜಕ್ಕೆ ಶರಣು ಎಂದು ಲಕ್ಕಣ್ಣದಂಡೇಶ ನಮಸ್ಕರಿಸಿದ್ದಾನೆ. ಸಿದ್ಧರಾಮೇಶ್ವರ ಈಗ ಊರ್ಜಿತ ಶ್ರೇಯಮಂ ಎಂದು ಮಹಾಕವಿ ಷಡಕ್ಷರ ದೇವರು ನೆನೆದಿದ್ದಾರೆ. ಅರಿವಂತ ಮಹಾಶಿವಯೋಗಿ ಗುಹೇಶ್ವರ ಶರಣ ಸಿದ್ಧರಾಮಯ್ಯ ನಿನ್ನ ಕಂಡೆನ್ನ ಭವಂ ನಾಸ್ತಿಯಾಯಿತು ಎಂದು ಪ್ರಭುದೇವರು ಕೊಂಡಾಡಿದ್ದಾರೆ. (ವಚನ 1984) ಸಿದ್ದರಾಮೇಶ್ವರರ ಪದಂಗಳೇಮಗೀಗೆ ಭಕ್ತ ಜ್ಞಾನ, "ವೈರಾಗ್ಯಮಂ" ಎಂದು ವಿರೂಪಾಕ್ಷ ಪಂಡಿತನು ನೆನೆಸಿದ್ದಾನೆ.

"ಭಕ್ತನಾದಡೆ ಬಸವಣ್ಣನಂತಾಗಬೇಕು,
ಜಂಗಮನಾದಡೆ ಪ್ರಭುವಿನಂತಾಗಬೇಕು.
ಭೋಗಿಯಾದೊಡೆ ಚನ್ನ ಬಸವಣ್ಣನಂತಾಗಬೇಕು,
ಯೋಗಿಯಾದಡೆ ನನ್ನಂತಾಗುಬೇಕು ನೋಡಯ್ಯ
ಕಪಿಲಸಿದ್ಧ ಮಲ್ಲಿಕಾರ್ಜುನ"

ಇವನು ವಚನಕಾರರಲ್ಲಿ ಅಗ್ರಪುರುಷ ಸಿದ್ಧರಾಮನನ್ನು ಕುರಿತು ಶರಣರು ಮನತುಂಬಿ ಕೊಂಡಾಡಿದ್ದಾರೆ. **"ಯೋಗಿಗಳ ಯೋಗಿ ಶಿವಯೋಗಿ ಸಿದ್ಧರಾಮನೊಬ್ಬನೆ ಶಿವಯೋಗಿ"** ಎಂದು ಸೊಡ್ಡಳ ಬಾಚರಸ ಹೇಳುತ್ತಾರೆ. (ವಚನ 774) ಕರ್ಮಯೋಗದಿಂದ ಶಿವಯೋಗಕ್ಕೆ ಕಾಲಿರಿಸಿದ ಪ್ರಾಣಿ ಪಕ್ಷಿಗಳಿಗೆ, ಜೀವರಾಶಿ ಗಳಿಗೆ ನೀರುಣಿಸಿದ ಮಹಾನುಭಾವ ಸಿದ್ಧರಾಮ.

ರಾಘವಾಂಕ ಕವಿ ವಿರಚಿತ ಸಿದ್ಧರಾಮ ಚಾರಿತ್ರ ಒಂದು ವಿಶಿಷ್ಟವಾದ ಮಹಾಕಾವ್ಯ ಕೃತಿ ಅದೇ ರೀತಿ ಜಯದೇವಿ ತಾಯಿ ಲಿಗಾಡೆಯವರ ವಿರಚಿತ ಮಹಾಪುರಾಣ ಸಿದ್ಧರಾಮನನ್ನು ಕುರಿತ ಅಪರೂಪದ ಕೃತಿ.

ಸಿದ್ಧರಾಮರು ಶರಣರ ಅನುಭವ ಮಂಟಪದಲ್ಲಿ ಅಲ್ಲಮನ ಸ್ವಯಂ ಪ್ರಭೆಯ ಬೆಳಕಾಗಿ ಶೂನ್ಯ ಪೀಠದ ಮೂರನೇ ಪೀಠಾಧಿಪತಿಯಾಗಿ ಕಂಗೊಳಿಸಿದ್ದಾರೆ. ಇಂತಹ ಮಹಾಪುರುಷರ ಜಯಂತಿ ಸಂಕ್ರಾಂತಿಯ ದಿನದಂದು ಪ್ರತಿವರ್ಷ ವಿಜೃಂಭಣೆಯಿಂದ ನಡೆಯುತ್ತಿದೆ.

ಪ್ರತಿವರ್ಷದಂತೆ ಈ ವರ್ಷ 853ನೇ ಜಯಂತಿ ಯನ್ನು ನೊಳಂಬ ಲಿಂಗಾಯತ ಸಮಾಜ ಬೆಂಗಳೂರು ಇವರು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ಪಟ್ಟಣದಲ್ಲಿ ಜನವರಿ 14–15ರಂದು ವಿಜೃಂಭಣೆಯಿಂದ ಆಚರಿಸಲಾಯಿತು. ಇತ್ತೀಚಿಗೆ ಕರ್ನಾಟಕ ಸರ್ಕಾರ ಅನೇಕ ಶರಣರ, ಮಹನೀಯರ ಜಯಂತಿಯನ್ನು ಆಚರಿಸುತ್ತಾ ಬರುತ್ತಿದೆ. ಅದರಲ್ಲಿ ಶ್ರೀ ಗುರುಸಿದ್ಧರಾಮೇಶ್ವರರ ಜಯಂತಿಯು ಒಂದಾಗಿದೆ. ನಾವು ಕೂಡ ಸಿದ್ಧರಾಮನ ಆದರ್ಶಗಳನ್ನು ಮೈಗೂಡಿಸಿಕೊಳ್ಳೋಣ.

(ಕೃಪೆ ಮಹಾಕವಿ ರಾಘವಾಂಕ ವಿರಚಿತ ಸಿದ್ಧರಾಮ ಚಾರಿತ್ರ)



ಕತ್ತಿಗೆ ಚನ್ನಪ್ಪ
ಸಾಹಿತ್ಯಧಾರೆ, ಸಿದ್ಧರಾಮ ಬಡಾವಣೆ
ಶಿವಮೊಗ್ಗ. ಮೊ : 9844572572

ನೊಳಂಬವಾಣಿ

ಯುವಶಕ್ತಿ ಮತ್ತು ವಿಕಸಿತ ಭಾರತ

ವಿಶೇಷತೆಯಿಂದ ಕೂಡಿದ ಸಮಾಜದಲ್ಲಿ ನಾನಾ ರೀತಿಯ ವೈವಿಧ್ಯ ಉಳ್ಳವರನ್ನು ಕಾಣಬಹುದಾಗಿದೆ. ನಿಷ್ಠೆ ಪ್ರಾಮಾಣಿಕತೆ ಕರ್ತವ್ಯದ ಬಗ್ಗೆ ಕಾಳಜಿ ಮತ್ತು ಅವರು ಆಡುವ ಮಾತಿನಿಂದ ಮನುಷ್ಯರ ಒಳ್ಳೆಯ ನಡತೆ ವ್ಯಕ್ತವಾಗುತ್ತದೆ. ಪ್ರಾಮಾಣಿಕತೆ ಮತ್ತು ಕರ್ತವ್ಯ ನಿಷ್ಠೆಯು ಮನುಷ್ಯನ ಆರೋಗ್ಯ ಮತ್ತು ಗೌರವವನ್ನು ಹೆಚ್ಚಿಸುತ್ತದೆ ಹಾಗೂ ಮನಸ್ಸಿಗೆ ಸಂತೋಷವನ್ನುಂಟುಮಾಡುತ್ತದೆ. ಮನಸ್ಸಾಕ್ಷಿಗೆ ವಿರುದ್ಧವಾದ ಕೆಲಸಗಳನ್ನು ಮಾಡಿದಾಗ ಮನಸ್ಸಿನ ಸಂತೋಷವನ್ನು ಮತ್ತು ನಿದ್ದೆಯನ್ನು ಕೆಡಿಸುತ್ತದೆ.

ಈ ಜಗತ್ತು ವೈವಿದ್ಯಗಳ ಆಗರ. ಪ್ರತಿಯೊಬ್ಬ ವ್ಯಕ್ತಿಯ ಹುಟ್ಟು ಬೆಳವಣಿಗೆ ವ್ಯಕ್ತಿತ್ವ ಮತ್ತು ಪರಿಸರ ಬೇರೆ ಬೇರೆಯಾಗಿರುತ್ತದೆ. ಎಲ್ಲರಲ್ಲಿಯೂ ಒಂದೇ ರೀತಿಯ ವ್ಯಕ್ತಿತ್ವವನ್ನಾಗಲಿ ಗುಣಗಳನ್ನಾಗಲಿ ಅಳೆಯಲು ಸಾಧ್ಯವಿಲ್ಲ, ನಾವು ಸರಿ ಇತರರು ಸರಿಯಿಲ್ಲ ಎಂಬ ಅಹಂ ಮತ್ತು ತರ್ಕಬೇಡ. ಇಂದಿನ ಸಮಾಜದ ವ್ಯವಸ್ಥೆಯಲ್ಲಿ ನಮ್ಮನ್ನು ನಾವು ತಿದ್ದಿಕೊಂಡು ನಮ್ಮ ಮನಸ್ಸಿಗೆ ಸಂತೋಷ ನೀಡುವ ಕಾರ್ಯವನ್ನು ಮಾಡಿಕೊಂಡು ಬದುಕಬೇಕು. ಇನ್ನೊಬ್ಬರನ್ನು ತಿದ್ದುವ ಕೆಲಸ ನಮ್ಮದಲ್ಲ, ಅದಕ್ಕಾಗಿ ಶ್ರಮಿಸುವುದೂ ಬೇಡ.

ನಮ್ಮ ಬದುಕನ್ನು ನಮ್ಮ ಇಷ್ಟದಂತೆ ನಿಷ್ಠೆ ಮತ್ತು ಸತ್ಯದ ಮಾರ್ಗದಲ್ಲಿ ಮುನ್ನಡೆಸುವುದಕ್ಕೆ ಏನೇನು ಮಾಡಬೇಕೊ ಅದನ್ನು ಮಾಡುವುದು ಮಾತ್ರ ನಮ್ಮ ಕೆಲಸ. ಆಲ್ಬರ್ಟ್ ಐನ್‌ಸ್ಟೈನ್ ಒಂದು ಕಡೆ ಹೇಳುತ್ತಾರೆ "ಈ ಜಗತ್ತಿನಲ್ಲಿ ಯಾರೂ ಪರಿಪೂರ್ಣರಲ್ಲ" ಪ್ರತಿಯೊಬ್ಬರಲ್ಲೂ ಒಂದಲ್ಲಾ ಒಂದು ನ್ಯೂನ್ಯತೆ ಇದ್ದೇ ಇರುತ್ತದೆ. (No one is perfect in this world) ವ್ಯಕ್ತಿ ಪ್ರಾಮಾಣಿಕನಾಗಿದ್ದರೆ ಕರ್ತವ್ಯ ಪಾಲಕನಾಗಿದ್ದರೆ ಒಳ್ಳೆಯ ವ್ಯಕ್ತಿತ್ವ ಉಳ್ಳವನಾಗಿದ್ದರೆ ಅಂತಹವರು ಸಮಾಜದ ಎಲ್ಲೊ ಒಂದು ಕಡೆ ಗುರುತಿಸಲ್ಪಡುತ್ತಾರೆ ಮತ್ತು ಯುಕ್ತ ಮನೋವೃತ್ತಿ ಉಳ್ಳವರನ್ನು ಯಾವತ್ತೂ ತಪ್ಪು ದಾರಿಗೆ ಕೊಂಡೊಯ್ಯಲು ಸಾಧ್ಯವಿಲ್ಲ. (Right attitude never takes you to wrong direction) ಶ್ರೀ ಸಿದ್ಧಗಂಗಾ ಮಠದ ಪರಮ ಪೂಜ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಮಹಾಸ್ವಾಮಿಗಳವರು ತಮ್ಮ ಇಡೀ ಜೀವನವನ್ನು ಸಮಾಜದ ಏಳ್ಗೆಗಾಗಿ ತಮ್ಮನ್ನು ಮುಡುಪಾಗಿಸಿಕೊಂಡಿದ್ದರು. ದೀಪ ತಾನುರಿದು ಜಗತ್ತಿಗೆ ಬೆಳಕು ನೀಡಿದಂತೆ ಪೂಜ್ಯ ಶ್ರೀಗಳವರು ಮಾಡಿದ ತ್ಯಾಗ ಮತ್ತು ಸೇವೆಯ ಸಾಧನೆಯನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಲಕ್ಷಾಂತರ ವಿದ್ಯಾರ್ಥಿಗಳು ಮತ್ತು ಭಕ್ತರುಗಳು ತಮ್ಮ ಹೃದಯಗಳಲ್ಲಿ ಪೂಜ್ಯರನ್ನು ಆರಾಧ್ಯ ದೈವದಂತೆ ಪೂಜಿಸುತ್ತಾರೆ. ಸರ್ ಎಂ.ವಿಶ್ವೇಶ್ವರಯ್ಯನವರ ಕರ್ತವ್ಯ, ಪ್ರಾಮಾಣಿಕತೆ ಮತ್ತು ಅವರು ಮಾಡಿದ ಸಾಧನೆಯನ್ನು ಇಂದಿಗೂ ಗುರುತಿಸುತ್ತಾರೆ ಮತ್ತು ನೆನಪಿಸಿಕೊಳ್ಳುತ್ತಾರೆ ಹಾಗೆ ಇನ್ನೂ ಅನೇಕ ಮಹಾತ್ಮರುಗಳು ಮಹಾಪುರುಷರುಗಳು ಸಾಧನೆಗೈದು ಮರೆಯಾಗಿದ್ದಾರೆ. ಅವರುಗಳು ಮಾಡಿದ ಸಾಧನೆಗಳು ಸದಾ ನೆನಪು ಮಾಡಿಕೊಳ್ಳುವಂತಹವುಗಳಾಗಿವೆ.

ಸಮಾಜದಲ್ಲಿ ನಾನಾ ರೀತಿಯ ವ್ಯಕ್ತಿತ್ವವುಳ್ಳ ಜನರಿದ್ದಾರೆ. ಒಳ್ಳೆಯವರು–ಕೆಟ್ಟವರು, ಬುದ್ಧಿವಂತರು–ದಡ್ಡರು, ಜ್ಞಾನಿಗಳು–ಅಜ್ಞಾನಿಗಳು, ಕಳ್ಳರು–ಪ್ರಾಮಾಣಿಕರು, ಸ್ವಾರ್ಥಿಗಳು–ನಿಸ್ವಾರ್ಥಿಗಳು, ಸಂಕುಚಿತಮನೋಭಾವನೆಯುಳ್ಳವರೂ–ವಿಶಾಲಮನೋಭಾವನೆಯುಳ್ಳವರೂ ಇದ್ದಾರೆ. ಹೀಗೆ ನಾನಾ ರೀತಿಯ ಗುಣಗಳುಳ್ಳ ಜನರನ್ನು ಕಾಣಬಹುದಾಗಿದೆ. ಇದು ಒಂದು ರೀತಿಯ ವ್ಯವಸ್ಥೆಯಾದರೆ ಜಾತಿ ಸಂಘರ್ಷಗಳು ಅಧಿಕಾರಕ್ಕಾಗಿ ಕಚ್ಚಾಟ, ಒಬ್ಬನ ಬೆಳವಣಿಗೆಯನ್ನು ಕಂಡು ಇನ್ನೊಬ್ಬರು ಅಸೂಯೆ ಪಡುವುದು ಇಂತಹ ವ್ಯವಸ್ಥೆಯನ್ನು ಸಮಾಜದಲ್ಲಿ ನಾವು ಕಾಣುತ್ತಿದ್ದೇವೆ.

ಈ ಎಲ್ಲಾ ಅವ್ಯವಸ್ಥೆಯನ್ನು ಬದಿಗೊತ್ತಿ ಇಂದಿನ ಯುವ ಜನತೆ ಕೃತಕ ಬುದ್ಧಿ ಮತ್ತೆಯಂತಹ ತಂತ್ರಜ್ಞಾನವನ್ನು ಅರಿತು ಭಾರತದ ಮೂಲ ತತ್ವಗಳಾದ ಶಾಂತಿ, ಸಹನೆ, ಪ್ರೀತಿ ಮತ್ತು ವಿಶ್ವಾಸದ ಅಡಿಯಲ್ಲಿ ಭಾರತದ ವಿಕಸನಕ್ಕೆ ಪ್ರಯತ್ನಿಸಬೇಕು. ನಮ್ಮಲ್ಲಿರುವ ಹೇರಳವಾದ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಂಡು ಬದುಕಿನ ಮೂಲಭೂತ ಸೌಕರ್ಯಗಳ ಅವಶ್ಯಕತೆಗಾಗಿ ಹೊಸಹೊಸ ಬದಲಾವಣೆಗಳನ್ನು ತರುವುದರ ಮೂಲಕ ಹೊಸಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಗಾಗಿ ಎಲ್ಲರೂ ಒಟ್ಟಾಗಿ ಒಗ್ಗಟ್ಟಾಗಿ ಸಹಕಾರ ಮನೋಭಾವನೆಯಿಂದ ಕರ್ತವ್ಯಗಳನ್ನು ಮಾಡಿದಾಗ ಮಾತ್ರ ವಿಕಸಿತ ಭಾರತವನ್ನು ಕಾಣಲು ಸಾಧ್ಯ.



ಆರ್.ರಂಗನಾಥ್
ಬೆಂಗಳೂರು.
ಮೊ : 7829999060

ನೊಳಂಬರ ಆರಾಧ್ಯ ದೈವ ಶ್ರೀಗುರು ಸಿದ್ಧರಾಮೇಶ್ವರರು

ಪ್ರಭುವಿನ ದಯದಿಂದ ಬಂದೆನಿಲ್ಲಿಗೆ
ಇಷ್ಟಲಿಂಗದ ಮರ್ಮವನರಿದೆ
ಗುರುಬಸವನ ದಯೆ, ಚನ್ನಬಸವನ ಕೃಪೆ
ಇದಕ್ಕೆ ಮಿಗಿಲಾಗಿ ಕಂಡು ಧನ್ಯನಾದೆ
ಕಪಿಲಸಿದ್ಧ ಮಲ್ಲಿಕಾರ್ಜುನ



ಸೊಲ್ಲಾಪುರದ ಸಂತ ಕಾಯಕಯೋಗಿ, ನೊಳಂಬರ ಆರಾಧ್ಯ ದೈವ ಯೋಗಿಗಳ ಯೋಗಿ ಶಿವಯೋಗಿ, ಸಿದ್ಧರಾಮೇಶ್ವರರ ಜಯಂತೋತ್ಸವವನ್ನು ಸಮಾಜ ಬಾಂಧವರ ತನು–ಮನ–ಧನ ಸಹಕಾರದಿಂದ ನೊಳಂಬ ಲಿಂಗಾಯತ ಸಂಘವು ವರ್ಷದಿಂದ ವರ್ಷಕ್ಕೆ ಬಹಳ ಅದ್ದೂರಿಯಾಗಿ ವಿಜೃಂಭಣೆಯಿಂದ ಹಾಗೂ ವರ್ಣರಂಜಿತವಾಗಿ 'ನಭೋತೋ, ನಭವಿಷ್ಯತಿ' ಎಂಬಂತೆ ಆಚರಿಸುತ್ತಾ ಬರುತ್ತಿರುವುದು ಸಂತೋಷದ ವಿಷಯ.



ಆರ್.ರಾಜಯ್ಯ
ನಿವೃತ್ತ ಶಿಕ್ಷಕರು, ವ್ಯವಸ್ಥಾಪಕರು,
ನೊಳಂಬ ಲಿಂಗಾಯತ ಸಂಘ,
ಬಸವೇಶ್ವರನಗರ, ಬೆಂಗಳೂರು.

ಸಿದ್ಧರಾಮರು "ಕಾಯಕವೇ ಕೈಲಾಸ" ಎಂಬ ಬಸವಣ್ಣನವರ ನುಡಿಯಂತೆ ಜೀವನ ಮುಕ್ತಿಗೆ ಕಾಯಕವೇ ತಪಸ್ಸು ಎಂದು ಭಾವಿಸಿ ಕಾಯಕದ ದೀಪವಿಡಿದು ಸಕಲ ಜೀವರಾಶಿಗಳಿಗೆ ಜೀವ–ಜಲ ಉಣಬಡಿಸಲು ನೂರಾರು ಕೆರೆ–ಕಟ್ಟೆ–ಬಾವಿಗಳನ್ನು ತೋಡಿಸಿದ ಕೀರ್ತಿ ಸಿದ್ಧರಾಮರದು. ಕೃಷಿಯ ಮಾಡಿ ಉಣ್ಣದ ಹಸಿವು ಅರಿವ ಪರಿ ಇನ್ನೆಂತೋ? ಎಂದು ಅರಿತ ಸಿದ್ಧರಾಮರು ಕೃಷಿಗೆ ಹೆಚ್ಚು ಕಾಳಜಿಯನ್ನು ಹೊಂದಿದ್ದು, ತಮ್ಮ ಕಾರ್ಯಕ್ಷೇತ್ರ ಸೊನ್ನಲಿಗೆಯಲ್ಲಿ ಸುಮಾರು ನಾಲ್ಕು ಸಾವಿರ ಶರಣರ ಸಹಕಾರ ಹಾಗೂ ಸತತ ಪರಿಶ್ರಮದಿಂದ ದೇವಾಲಯಗಳು ಹಾಗೂ ದೊಡ್ಡ ಕೆರೆಯೊಂದನ್ನು ಕಟ್ಟಿಸಿ ಕೃಷಿ ಕಾಯಕಕ್ಕೆ ಹಾಗೂ ಅನ್ನದಾತರ ನೆರವಿಗೆ ಸಾಕಷ್ಟು ಪರಿಶ್ರಮ ಪಟ್ಟು ಕಾಯಕದ ಮಹತ್ವವನ್ನು ಜನರಿಗೆ ಮಾರ್ಗದರ್ಶನ ಮಾಡಿ ಬದುಕನ್ನು ಹಸನು ಮಾಡಿದ ಸಮಾಜೋದ್ಧಾರಕರಾಗಿ ಕರ್ಮಯೋಗಿಯಾದರು ಸಿದ್ಧರಾಮರು.

ಸೊನ್ನಲಿಗೆಯಲ್ಲಿ ಕೇವಲ ಲೋಕೋಪಯೋಗಿಯಾಗಿ ಕಾಯಕದಲ್ಲಿ ತೊಡಗಿದ್ದ ಸಿದ್ಧರಾಮರಿಗೆ ತನ್ನ ಕಾಯಕದ ಒತ್ತಡದಲ್ಲಿ ಭಕ್ತಿ ಅನುಸಂದಾನಗಳಂತಹ ಅನುಭಾವದ ಅರಿವೇ ಇರಲಿಲ್ಲ. ಅಂತಹ ಸಿದ್ಧರಾಮನನ್ನು ಎಚ್ಚರಿಸಿ ಆತ್ಮಜ್ಞಾನಿಯಾದ ಅಲ್ಲಮರು ಕಲ್ಯಾಣಕ್ಕೆ ಕರೆತಂದು ಬಸವಣ್ಣ ಮತ್ತು ಚನ್ನಬಸವಣ್ಣನವರನ್ನು ಪರಿಚಯಿಸುತ್ತಾರೆ. ಅವಿರಳ ಜ್ಞಾನಿ ಚನ್ನಬಸವಣ್ಣನವರಿಂದ ಇಷ್ಟಲಿಂಗ ದೀಕ್ಷೆ ಪಡೆದು ಇಷ್ಟಲಿಂಗದ ಮರ್ಮವನ್ನು ಅರಿಯುತ್ತಾರೆ. "ಶಿವಪಥವನ್ನು ಅರಿವಡೆ, ಗುರು ಪಥವೇ ಮೊದಲು" ಎಂದು ತಿಳಿದು ವಿಶ್ವಗುರುಬಸವಣ್ಣನವರ ದಯೆಯಿಂದ ಜ್ಞಾನ ಪಡೆಯುತ್ತಾರೆ. ಜ್ಞಾನಯೋಗದಿಂದ ಭಕ್ತಿಯೋಗ, ಭಕ್ತಿಯೋಗದಿಂದ ಶಿವಯೋಗ ಪಡೆದು ಶಿವಯೋಗಿಯಾಗುತ್ತಾರೆ ಸಿದ್ಧರಾಮರು. ಸಿದ್ಧರಾಮರು ತಪಸ್ಸು ಮಾಡಿ ಸ್ಥಳಗಳೆಲ್ಲ ಪುಣ್ಯ ಭೂಮಿಗಳಾಗಿವೆ.

ಶಿವಯೋಗ ಪಡೆದ ಸಿದ್ಧರಾಮರು ಮುಂದೆ ಅಪಾರ ಜ್ಞಾನ ಸಂಪತ್ತನ್ನು ಪಡೆದು ನಾಡಿನೆಲ್ಲೆಡೆ ಸಂಚರಿಸಿ ಸಾಮಾಜಿಕ ಪಿಡುಗುಗಳಾದ ಜಾತಿ–ಮತಗಳನ್ನು ತೊಡೆದು ಹಾಕುವಲ್ಲಿ ಜನರ ಮನಸ್ಸುಗಳನ್ನು ಪರಿವರ್ತಿಸಿ ಜೀವನವನ್ನು ಸುಖಮಯವಾಗಿಸುವಲ್ಲಿ ಮುಂದಾದರು. ಸಮಾಜದಲ್ಲಿ

ಅಮೂಲಾಗ್ರ ಬದಲಾವಣೆಗಳನ್ನು ತಂದು ಜಾತಿ–ಮತಗಳ ವ್ಯವಸ್ಥೆಯ ಬಗ್ಗೆ ಕಠೋರವಾಗಿ ಖಂಡಿಸಿ "ಮನುಜ ಕುಲ ಒಂದೇ" ಎಂದು ಸಕಲರಿಗೂ ಲೇಸನ್ನೇ ಬಯಸಿದ್ದ ಸಿದ್ಧಪುರುಷ. ಸಿದ್ಧರಾಮರು "ಧ್ರುವ ನಕ್ಷತ್ರದಂತೆ" ನಾಡನ್ನು ಬೆಳಗಿದ ಮಹಾದಾರ್ಶನಿಕರು. ಬಡವರು ದೀನ–ದಲಿತರ ಉದ್ಧಾರಕ್ಕಾಗಿ ಶ್ರಮಿಸಿ ಶರಣ ಪಥವನ್ನು ತೋರಿ ಬದುಕನ್ನು ಹಸನು ಮಾಡಿದ ಪುಣ್ಯವಂತರು.

ಇಂತಹ ಆದರ್ಶಗಳನ್ನು ಹಾಗೂ ತತ್ವ ಸಿದ್ಧಾಂತಗಳನ್ನು ಹೊಂದಿದ ನಮ್ಮ ನೊಳಂಬ ಲಿಂಗಾಯತ ಸಂಘವು ಗಾಮೀಣ ಪ್ರದೇಶದ ಬಡ ಹಾಗೂ ಪ್ರತಿಭಾವಂತ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗಲು ಕರ್ನಾಟಕದ ವಿವಿಧ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ದಾನಿಗಳ ಹೆಸರಿನಲ್ಲಿ ವಿದ್ಯಾರ್ಥಿ ನಿಲಯುಗಳನ್ನು ನಿರ್ಮಿಸಿ ಶಿಕ್ಷಣಕ್ಕೆ ಅನುಕೂಲವಾಗಲು ಊಟ–ವಸತಿಗಳನ್ನು ಕಲ್ಪಿಸಿಲಾಗುತ್ತಿದೆ. ಸಿದ್ಧರಾಮರ ನುಡಿಯಂತೆ "ಹೆಣ್ಣು ಹೆಣ್ಣಲ್ಲ, ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂಬಂತೆ ವಿಶೇಷವಾಗಿ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿ ಶೈಕ್ಷಣಿಕ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗಿದೆ. ಹೆಚ್ಚು ಜ್ಞಾನಾರ್ಜನೆಗಾಗಿ ದಾನಿಗಳ ಸಹಾಯದಿಂದ ಡಿಜಿಟಲ್ ಲೈಬ್ರರಿಗಳನ್ನು ಸ್ಥಾಪಿಸಲಾಗಿದೆ. ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಗಳಿಗೆ ಶಿಕ್ಷಣವನ್ನು ಮುಂದುವರಿಸಲು ವಿದ್ಯಾರ್ಥಿವೇತನವನ್ನು ಪ್ರತಿವರ್ಷ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿದೆ. ನಮ್ಮ ಸಂಘದಿಂದ ಸಹಾಯ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳು ಐ.ಎ.ಎಸ್. ಐ.ಪಿ.ಎಸ್. ಕೆ.ಎ.ಎಸ್. ಬಿ.ಇ. ಕಾನೂನು ಶಿಕ್ಷಣ ಹಾಗೂ ಇತ್ಯಾದಿ ಸ್ನಾತ್ತಕೋತ್ತರ ಪದವಿಗಳನ್ನು ಪಡೆದು ಉತ್ತಮ ಸ್ಥಾನದಲ್ಲಿದ್ದಾರೆ. ಉತ್ತಮ ಬದುಕನ್ನು ಕಟ್ಟಿಕೊಂಡು ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಇದಲ್ಲದೆ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲು ಪ್ರತಿವರ್ಷವೂ ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿ/ವಿದ್ಯಾರ್ಥಿನಿಯರುಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತಿದೆ.

ದಾನಿಗಳೇ ಸಂಘದ ಆಸ್ತಿ, ಸಮಾಜ ಉದ್ಧಾರವಾಗಬೇಕಾದರೆ ಆ ಸಮಾಜಕ್ಕೆ ದುಡಿದ ವ್ಯಕ್ತಿಗಳನ್ನು ಸ್ಮರಿಸುವುದು ಧರ್ಮ ಹಾಗೂ ಆದ್ಯ ಕರ್ತವ್ಯ ಎಂದು ಭಾವಿಸಿ ಪ್ರತಿವರ್ಷ ದಾನಿಗಳ ದಿನಾಚರಣೆಯನ್ನು ಆಚರಿಸುತ್ತಾ ಬರುತ್ತಿದ್ದೇವೆ.

ನೊಳಂಬರ ಸಂಸ್ಕೃತಿ, ಕೃಷಿ, ಸಾಹಿತ್ಯ, ಶಿಕ್ಷಣ, ಕಲೆಗಳ ಬಗ್ಗೆ ಅಧ್ಯಯನ ಮಾಡಲು ಮುಂದಿನ ಪೀಳಿಗೆಗೆ ಅನುಕೂಲವಾಗಲು ಸಂಘದಿಂದ ಹಾಗೂ ದಾನಿಗಳಿಂದ ಹಣ ಸಂಗ್ರಹ ತುಮಕೂರು ವಿಶ್ವವಿದ್ಯಾನಿಲಯದಲ್ಲಿ "ನೊಳಂಬ ಸಂಸ್ಕೃತಿ ಅಧ್ಯಯನ ಪೀಠ"ವನ್ನು ಸ್ಥಾಪಿಸಲಾಗಿದೆ.

ಶ್ರೀಗುರುಸಿದ್ಧರಾಮೇಶ್ವರ ಜಯಂತಿ ನಡೆದ ಬಹುತೇಕ ಸ್ಥಳಗಳಲ್ಲಿ ಜಯಂತಿಯ ಕುರುಹಾಗಿ ಸಮುದಾಯಭವನ, ದೇವಾಲಯಗಳ ಜೀರ್ಣೋದ್ಧಾರ ಕಾರ್ಯ, ಹಾಸ್ಟೆಲ್‌ಗಳ ನಿರ್ಮಾಣ ಮತ್ತು ನಿವೇಶನಗಳನ್ನು ಸಂಘವು ಹೊಂದಿದೆ ಹಾಗೂ ಹಲವಾರು ಸಮಾಜಮುಖಿ ಅಭಿವೃದ್ಧಿ ಕಾರ್ಯಗಳನ್ನು ಸಂಘವು ಕೈಗೊಂಡಿದ್ದು ಇನ್ನು ಹಲವಾರು ಸಮಾಜಮುಖಿ ಯೊಜನೆಗಳನ್ನು ಹಮ್ಮಿಕೊಳ್ಳುತ್ತಿದೆ.

ಪ್ರತಿವರ್ಷವು ಜನವರಿ ೧೪ ಮತ್ತು ೧೫ರಂದು ಸಿದ್ಧರಾಮೇಶ್ವರರ ಜಯಂತೋತ್ಸವವನ್ನು ಕರ್ನಾಟಕ ಮತ್ತು ಹೊರ ರಾಜ್ಯಗಳಾದ ಆಂಧ್ರ, ಮಹಾರಾಷ್ಟ್ರಗಳಲ್ಲಿ ಆಚರಿಸುತ್ತಾ ಸಿದ್ಧರಾಮೇಶ್ವರ ತತ್ವ ಸಿದ್ಧಾಂತಗಳು, ವಚನಗಳು, ಕೃಷಿ ಕಾಯಕ ತತ್ವ, ದಾಸೋಹ ತತ್ವ, ನಾಟಕಗಳನ್ನು ಬಿತ್ತರಿಸುವುದರ ಜೊತೆಗೆ ಇದರ ಅಂಗವಾಗಿ ಗ್ರಾಮೀಣ ಜನರಿಗೆ ಅರಿವು ಮೂಡಿಸಲು ಹಾಗೂ ಸ್ವಾಲಂಭಿಗಳಾಗಲು ಕಾನೂನು ಶಿಕ್ಷಣ, ವೈದ್ಯಕೀಯ ಶಿಕ್ಷಣ, ಕೃಷಿ, ಪಶು ಸಂಗೋಪನೆ, ಪುಸ್ತಕ ಪ್ರದರ್ಶನ, ಸ್ತಬ್ದಚಿತ್ರಗಳು ಮತ್ತು ಹೈನುಗಾರಿಕೆಗಳನ್ನು ಹೊಂದಿರುವ ವಸ್ತು ಪ್ರದರ್ಶನವನ್ನು ಏರ್ಪಡಿಲಾಗುತ್ತಿದೆ.

ಸಿದ್ಧರಾಮರ ನುಡಿಯಂತೆ ನಮ್ಮ ಜೀವನ ದೀಪದಂತೆ, ದೀಪದಂತಹ ಜನ್ಮ ಬಂದದು ತಿಳಿಯಬಾರದು, ಹೋಹುದು ತಿಳಿಯಬಾರದು, ನಡೆ–ನುಡಿಗಳಲ್ಲಿ ಒಂದಾಗಿ ಬದುಕನ್ನು ತಿಳಿದು ಬದುಕಿದರೆ ಜೀವನ ಸಾರ್ಥಕ. ಆದ್ದರಿಂದ ಶರಣ ಪಥದಲ್ಲಿ ನಾವು ಸಮಾಜಕ್ಕಾಗಿ, ಸಮಾಜಕ್ಕೋಸ್ಕರ, ಸಮಾಜದಲ್ಲಿ ಬದುಕಿದರೆ ನಮ್ಮ ಜೀವನ ಸಾರ್ಥಕ.

ನೊಳಂಬವಾಣಿ ಪತ್ರಿಕೆಯ ಚಂದದಾರರಾಗಲು ಮನವಿ

ನೊಳಂಬರ ಕೆರೆಕಟ್ಟೆ ಬಾವಿಗಳು

ಹಿಂದಿನ ಸಂಚಿಕೆಯಿಂದ.....

ಜನರ ಜೀವನದ ಮೂಲ ಕಸುಬು ಕೃಷಿ ಹಾಗೂ ಪಶುಪಾಲನೆ ಎಂಬುದನ್ನು ತಿಳಿದಿದ್ದ ನೊಳಂಬ ಪ್ರಭುಗಳು ಹೊಸಹಳ್ಳಿಯನ್ನು ಕೇಂದ್ರವಾಗಿ ಮಾಡಿಕೊಂಡು ಕೆರೆ, ಕಟ್ಟೆ, ಬಾವಿಗಳ ನಿರ್ಮಾಣಕ್ಕೆ ಆದ್ಯತೆ ನೀಡುತ್ತಾರೆ. ಈ ಮೂಲಕ ಜನರ ಕಷ್ಟ–ಕಾರ್ಪಣ್ಯಗಳು ಇಲ್ಲದಂತಾಗಿ ಶಾಂತಿ–ಸಮಾಧಾನದ ಜೀವನ ಸಾಗಿಸುವಲ್ಲಿ ಸಫಲರಾಗುತ್ತಾರೆ. ಮಾನವನ ಜೊತೆಗೆ ಪಶುಪ್ರಾಣಿ ಪಕ್ಷಿಗಳು ಸುಖ ಸಂತೋಷದಿಂದ ನೆಮ್ಮದಿ ಬಾಳು ಸಾಗಿಸಲು ನೆಲದಷ್ಟೆ ಜಲ ಮುಖ್ಯವೆಂಬುದನ್ನು ತಿಳಿಸಿರುವ ನೊಳಂಬರು ಪ್ರಕೃತಿ ರಕ್ಷಣೆಯತ್ತ ಸತ್ಕಾರ್ಯ ಪ್ರವೃತ್ತರಾಗಿ ಸರ್ವಶ್ರೇಷ್ಠ ಜಲ ಸಂರಕ್ಷಣಾ ವ್ಯವಸ್ಥೆಯನ್ನು ನೀಡಿದ್ದಾರೆ. ಆಧುನಿಕ ಸನ್ನಿವೇಶದ ನಾವುಗಳು ಇವುಗಳ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಲು ವಿಫಲರಾದರೆ ಕ್ಷೋಬೆಯುಂಟಾಗಲು ದಾರಿಯಾಗುತ್ತದೆ.

ಗುಬ್ಬಿಹೊಸಳ್ಳಿ ಸುತ್ತಮುತ್ತ ನಿರ್ಮಿಸಿರುವ ಕೆರೆಕಟ್ಟೆಗಳು ಪಾವಿತ್ರ್ಯತೆ ಕಾಪಾಡುವಲ್ಲಿ ತಪ್ಪಬಾರದು. ತಮಗೆ ಬೇಡವಾದ ವಸ್ತುಗಳನ್ನು ಕೆರೆ ಅಂಗಳಕ್ಕೆ ಸಾಗಿಸಬಾರದು. ಇದರಿಂದ ಅಸ್ವಸ್ಥತೆಯುಂಟಾಗುತ್ತದೆ. ಎಲ್ಲರು ಪ್ರಾಮಾಣಿಕರಾಗಿ ಸ್ವಾಸ್ಥ್ಯತೆಗೆ ಬಾಧಕರಾಗದೆ ಪ್ರಗತಿಪರರಾಗಲೆಂದು ನೊಳಂಬರ ಇಚ್ಛೆಯಾಗಿದ್ದಿತು. ಒಳಿತನ್ನು ಬಯಸಿ ನಮ್ಮ ಜೊತೆ ಎಲ್ಲರು ಬದುಕಬೇಕೆಂಬುದನ್ನು ಮನಗಂಡು ಜಲಶುದ್ಧಿ, ಜಲರಕ್ಷಣೆಯತ್ತ ನಾವುಗಳು ಗಮನಕೊಡಬೇಕಿದೆ.

ಸುವ್ಯವಸ್ಥಿತ ಸಧೃಡ ಕಾಮಗಾರಿಯ ಮೂಲಕ ಕೆರೆ, ಕಟ್ಟೆ, ಕಲ್ಯಾಣಿಗಳ ಸನಿಹದಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಗುಬ್ಬಿ ಹೊಸಳ್ಳಿಯಲ್ಲಿರುವ ಮೂರು ಕೆರೆಗಳು ಇಂದು ಹೇಮಾವತಿ ಕಾಲುವೆ, ಹಾಗೂ ಮಳೆಯ ನೀರು ಕೊಡುವಿಕೆ ಮೂಲಕ ಜಲಭರಿತವಾಗಿರುತ್ತವೆ. ಇಲ್ಲಿ ಪ್ರಮುಖ ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ, ತೋಟದ ಬೆಳೆಗಳು ಜೊತೆಗೆ ರೈತರು ಆಹಾರ ಧಾನ್ಯಗಳು, ಹೂವು ಹಣ್ಣು ತರಕಾರಿ ಬೆಳೆದು ಸಂಬಂಧಪಟ್ಟ ಮಾರ್ಕೆಟ್‌ಗಳಲ್ಲಿ ಮಾರಾಟ ಮಾಡುತ್ತಾರೆ.

ಮೂರು ಕೆರೆಗಳು ಹಾಗೂ ಕಲ್ಯಾಣಿಗಳು ಇದ್ದರು ಎಲ್ಲಿಯು ಶಾಸನಗಳು ಕಾಣುತ್ತಿಲ್ಲ. ಗುಬ್ಬಿ ನೆರೆಯ ಪ್ರಮುಖ ನಗರಗಳ ಸುತ್ತಮುತ್ತ ಇರುವ ಕೆಲವು ಕೆರೆಗಳ ಬಳಿ, ಅರಳಗುಪ್ಪೆ, ನೊಣವಿನಕೆರೆ, ಆಲ್ಬೂರು ಮುಂತಾದಕಡೆ ಶಾಸನಗಳ ಲಭ್ಯವಿದೆ. ಹೊಸಳ್ಳಿಯಲ್ಲಿ ಕೆರೆಗಳ ಸನಿಹ ಯಾವ ಶಿಲಾಶಾಸನಗಳು ಸಿಗದ ಕಾರಣ ನಿಖರವಾಗಿ ಯಾವ ಕೆರೆ ಯಾವ ಕಾಲದಲ್ಲಾಗಿವೆ ಎಂದು ಹೇಳಲಾಗದು. ಮಹಾನಾಡ ಪ್ರಭುಗಳಾದ ಕಾಳ ಚಿಕ್ಕಪ್ಪಗೌಡ, ಹಾಗು ಹೊನ್ನಪ್ಪಗೌಡರ ಆಡಳಿತಾವಧಿಯಲ್ಲಿ ಕೆರೆ ನಿರ್ಮಾಣ ಹಾಗೂ ಜೀರ್ಣೋದ್ಧಾರವಾಗಿರುವ ಬಗ್ಗೆ ಹಿರಿಯರು ಹೇಳುತ್ತಿದ್ದ ಮಾತುಗಳು ಹಾಗೂ ಇತಿಹಾಸ ಕೃತಿಗಳ ಮೂಲಕ ತಿಳಿಯುತ್ತದೆ.

ಈಶಾನ್ಯಭಾಗದ ಕೆರೆಯ ಸನಿಹದಲ್ಲಿ ಸಿಹಿನೀರಿನ ಕಲ್ಯಾಣಿಯನ್ನು ನಿರ್ಮಿಸಿದ್ದಾರೆ. ಕಲ್ಯಾಣಿಯ ನೀರು ಸದಾ ಹಾಲಿನಂತೆ ಬಿಳುಪಾಗಿ ಔಷಧಿಗುಣವನ್ನು ಹೊಂದಿದ್ದು ಅಂದಿನ ಜನರು ಔಷಧಿರೂಪದಲ್ಲಿ ಹಾಗೂ ಆರೋಗ್ಯವರ್ಧಕವಾಗಿ ಪುಣ್ಯತೀರ್ಥವೆಂದು ಸೇವಿಸುತ್ತಿದ್ದರು. ಈ ಕಲ್ಯಾಣಿ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಗುಬ್ಬಿ ಶರಣ ಶ್ರೀಚನ್ನಬಸವೇಶ್ವರರು ಅಂದು ತಮ್ಮ ಪಾದದಲ್ಲಿ ಗುರುತು ಮಾಡಿದ್ದ ಜಾಗವಿದು. ಅಂದಿನ ಭಕ್ತರು, ಶರಣರು ಸೇರಿ ವಿಶೇಷವಾಗಿ ನಿರ್ಮಾಣ ಮಾಡಿರುತ್ತಾರೆ. ಇಂದು ಕಲ್ಯಾಣಿ ಇರುವುದನ್ನು ಕಾಣಬಹುದು. ಇದೇರೀತಿ ಗುಬ್ಬಿ ಹೊಸಹಳ್ಳಿಯಲ್ಲಿ ಮೂರು ಕಲ್ಯಾಣಿಗಳ ಜೊತೆಗೆ ಹಲವಾರು ಸೇದೋಬಾವಿಗಳು ಸಹ ಇವೆ.



ಶಿವಕುಮಾರ್ .ಎಸ್
ಈಡೇನಹಳ್ಳಿ, ತಿಪಟೂರು ತಾ.
ತುಮಕೂರು ಜಿಲ್ಲೆ.

ಮಹಾನಾಡಪ್ರಭುಗಳು ಮುಖ್ಯವಾಗಿ ರಕ್ಷಣಾ ದೃಷ್ಟಿಯಿಂದ ನಿರ್ಮಿಸಿದ್ದ ಕಾಲುವೆಯು ತುಂಬಿದಾಗ ಹೆಚ್ಚುವರಿಯಾದ ನೀರು ಹರಿದುಹೋಗಲು ಈಶಾನ್ಯ ಭಾಗದಲ್ಲಿ ಕೋಡಿಯನ್ನು ನಿರ್ಮಿಸುತ್ತಾರೆ. ಕಾಲುವೆ ಹಳ್ಳವಾಗಿ ಪರಿವರ್ತನೆಯಾಗಿ ಈಶಾನ್ಯ ಭಾಗಕ್ಕೆ ನೀರು ಹರಿದು ಹೋಗುತ್ತದೆ. ನಾಗರೀಕತೆ ಹಾಗೂ ವ್ಯವಸ್ಥೆಯ ಬೆಳವಣಿಗೆ, ಸುಧಾರಣೆಯ ಕಾರಣದಿಂದ ಹಲವಾರು ರೂಪದ ಬದಲಾವಣೆ ಸುಧಾರಣೆಯಾಗಿರುವುದನ್ನು

ಕಾಣಬಹುದು. ಎಲ್ಲಾ ಬೆಳವಣಿಗೆಗಳ ಪರಿಣಾಮದಿಂದ ನೊಳಂಬರ ಸಾಂಸ್ಕೃತಿಕ ಮಹಾಗ್ರಾಮ ಜಲಸಮೃದ್ಧಿಯಿಂದ ಹಸಿರು ಹಾಗೂ ಹಿತವಾತಾವರಣದ ಭೂಮಾತೆಯ ಮಡಿಲಲ್ಲಿದೆ. ಇದೇ ರೀತಿ ಸುತ್ತಮುತ್ತಲಿನ ಕೆರೆಗಳು ಹೇಮಾವತಿ ನಾಲೆಯ ನೀರಿನ ಸೌಲಭ್ಯಪಡೆದು ಜನಜೀವನಕ್ಕೆ ಸಹಕಾರಿಯಾಗಿರುವುದು. ಹೊಸಹಳ್ಳಿಯನ್ನು ಕೇಂದ್ರವಾಗಿಟ್ಟು ಕೊಂಡು ರಾಜ್ಯಾಡಳಿತ ನಡೆಸುತ್ತಿದ್ದ ನೊಳಂಬ ಅರಸರು ಜನರ ಜೀವನಕ್ಕೆ ಅನುಕೂಲವಾಗಲು ಅಮರಗೊಂಡ ಗ್ರಾಮವನ್ನು ಆ ಗ್ರಾಮದ ಅನುಕೂಲಕ್ಕಾಗಿ ಕೆರೆಯನ್ನು ನಿರ್ಮಿಸುತ್ತಾರೆ. ಮುಂದೆ ಗ್ರಾಮವು ಶರಣರ ಪುಣ್ಯಯಾತ್ರಾ ಸ್ಥಳವಾಗಿ ಬೆಳೆದು ರಾಜ್ಯದ ತಾಲ್ಲೂಕು ಕೇಂದ್ರವಾಗಿದೆ. ಶರಣರಾದ ಮಲ್ಲಣ್ಣಾರಾಧ್ಯರು ಅಮರಗೊಂಡದಲ್ಲಿ ಪ್ರವಚನ ಮಾಡುತಿದ್ದ ಸಮಯದಲ್ಲಿ ಪ್ರತಿದಿನವು ಎರಡು ಗುಬ್ಬಿಗಳೂ ಅಲ್ಲಿ ಬಂದು ಕೂರುತ್ತಿದ್ದವು. ಪ್ರವಚನ ಕಾರ್ಯಕ್ರಮ ಮುಗಿದ ನಂತರದ ದಿನ ಎರಡು ಗುಬ್ಬಿಗಳು ಅಲ್ಲಿ ಪ್ರಾಣಾರ್ಪಣೆ ಮಾಡುತ್ತವೆ.

ವಿಷಯ ತಿಳಿದ ಪೂಜ್ಯ ಮಲ್ಲಣ್ಣಾರಾಧ್ಯರು ಈ ಊರಿಗೆ ಗುಬ್ಬಿ ಎಂದು ಮರುನಾಮಕರಣ ಮಾಡಿದ್ದಾರೆ. ಗುಬ್ಬಿ ಪಟ್ಟಣವಾಗಿ ಬೆಳೆದು ಇಂದು ರಾಷ್ಟ್ರ ಹಾಗೂ ರಾಜ್ಯದ ಪ್ರಮುಖ ರೈಲ್ವೆ ಹಾಗೂ ರಸ್ತೆ ಸಂಚಾರದ ಸಂಪರ್ಕವನ್ನು ಪಡೆದಿದೆ. ಇಲ್ಲಿ ಪ್ರಮುಖ ಇಂಜಿನಿಯರಿಂಗ್ ಕಾಲೇಜು ಹಾಗು ರಾಷ್ಟ್ರದ ರಕ್ಷಣಾ ಇಲಾಖೆಗೆ ಸೇರಿದ ಎಲಿಕಾಪ್ಟರ್ ಕಾರ್ಖಾನೆ ಸ್ಥಾಪನೆಯಾಗಿ ರಾಷ್ಟ್ರದ ಗಮನ ಸೆಳೆದಿದೆ. ಕೃಷಿಯ ಜೊತೆ ಕೈಗಾರಿಕ ತಾಣವಾಗಲೆಂದು ಸ್ಥಳೀಯರ ಬಯಕೆ.

ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧು ಬಳಗ

ಅಕ್ಟೋಬರ್, ನವೆಂಬರ್, ಡಿಸೆಂಬರ್ – 2025ರ (ಸಂಪುಟ–15, ಸಂಚಿಕೆ–4) ನೊಳಂಬವಾಣಿ ತ್ರೈಮಾಸಿಕದಲ್ಲಿ "ಕುರುಬರ ರೇವಣಸಿದ್ಧ ವೀರಶೈವರ ರೇಣುಕಾಚಾರ್ಯರಾದ ಕಥೆ" ಎಂಬ ಪ್ರಬುದ್ಧ ಲೇಖನವನ್ನು ಪ್ರಕಟಿಸಿದ್ದೀರಿ. ಇದನ್ನು ಹಿರಿಯರೂ, ಜ್ಞಾನಿಗಳೂ ಆದ ಶ್ರೀಯುತ ಚಂದ್ರಶೇಖರ ತಿ. ಚಿಂದಾಳ ಇವರು ಬರೆದಿದ್ದಾರೆ. ಲೇಖಕರಿಗೂ, ಸಂಪಾದಕರಿಗೂ ತುಂಬು ಹೃದಯದ ಧನ್ಯವಾದಗಳು.

ಲೇಖನದಲ್ಲಿ ಬರೆದಿರುವ ವಿಷಯವು ಸಂಪೂರ್ಣ ಸತ್ಯವಾಗಿದೆ. ಇದನ್ನು ಎಂ.ಎಂ.ಕಲಬುರ್ಗಿಯವರು ತಮ್ಮ ಸಂಶೋಧನಾ ಗ್ರಂಥದಲ್ಲಿ ದಾಖಲಿಸಿ, ಪ್ರಕಟಿಸಿದ್ದಾರೆ. ಡಾ. ಎಂ.ಚಿದಾನಂದಮೂರ್ತಿ, ಎನ್.ಬಸವಾರಾಧ್ಯ, ಡಾ. ಎಲ್.ಬಸವರಾಜು, ಡಾ॥ ಜಿ.ಎಸ್.ಸಿದ್ಧಲಿಂಗಯ್ಯ, ಡಾ. ವಿದ್ಯಾಶಂಕರ ಮುಂತಾದ ಶ್ರೇಷ್ಠ ವಿದ್ವಾಂಸರು ಇದನ್ನು ಅನೇಕ ಲೇಖನ ಗ್ರಂಥಗಳಲ್ಲಿ ದಾಖಲಿಸಿದ್ದಾರೆ. ಡಾ. ಎಂ.ಚಿದಾನಂದಮೂರ್ತಿಯವರು ಮತ್ತು ಡಾ. ಜಿ.ಎಸ್.ಸಿದ್ಧಲಿಂಗಯ್ಯನವರು ಅನೇಕ ವೇದಿಕೆಗಳಲ್ಲಿ ಇದನ್ನು ವಿವರಿಸಿದ್ದಾರೆ. ಡಾ. ಹೆಚ್.ದೇವೀರಪ್ಪನವರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಕುರುಬರ ಹಾಲುಮತ ಪುರಾಣದಲ್ಲಿಯೂ ದಾಖಲಾಗಿದೆ. 1980ರಿಂದ 1990 ದಶಕದಲ್ಲಿ ನಾನು ಅನೇಕ ಕುರುಬ ಸಾಹಿತಿಗಳೂ, ಗೊರವಯ್ಯಗಳೂ, ವಿದ್ವಾಂಸರು, ಲೇಖಕರೊಂದಿಗೆ ಮಾತನಾಡಿದಾಗ ಈ ವಿಷಯವನ್ನು ಖಚಿತಪಡಿಸಿದ್ದಾರೆ. ಸಾಂಪ್ರದಾಯಿಕ ಹಾಲುಮತ ಗುರುಗಳಾಗಿರುವ (ಒಡೆಯರ್ ಎಂದು ಕರೆಯುತ್ತಾರೆ.) ಅನೇಕ ಹಿರಿಯರು ಈ ವಿಷಯವನ್ನು ಹಂಚಿಕೊಂಡಿದ್ದಾರೆ. ತುಮಕೂರಿನ ಹಿರೇಮಠದ (ತಪೋವನ) ಅಧ್ಯಕ್ಷರಾಗಿರುವ ಪೂಜ್ಯಶ್ರೀ ಶಿವಾನಂದ ಶಿವಾಚಾರ್ಯ ಮಹಾಸ್ವಾಮಿಗಳು ಅನೇಕ ಸಭೆ–ಸಮಾರಂಭಗಳಲ್ಲಿ ರೇಣುಕಾಚಾರ್ಯರು ಲಿಂಗೋದ್ಭವರಲ್ಲ, ಅವರು ಲಿಂಗವಂತ ತಂದೆ–ತಾಯಿಗೆ ಜನಿಸಿದ ಮಗ ಎಂದು ದೃಢಪಡಿಸಿದ್ದಾರೆ.

ಅದರಿಂದಾಗಿ ಲಿಂಗಾಯತ ಧರ್ಮ ಸಂಸ್ಥಾಪಕರಾದ ಜಗಜ್ಯೋತಿ ಬಸವಣ್ಣನವರನ್ನು ನೆನೆಯುವಾಗ ಬೇರೆ ಯಾರ ಜೊತೆಗೂ ಸೇರಿಸಿ ಸ್ಮರಿಸುವ ಅಗತ್ಯವಿಲ್ಲವೆಂದು ನಾನೂ ಒಪ್ಪುತ್ತೇನೆ.

– ಈ.ಲೋಕೇಶ್ವರಪ್ಪ
ವಕೀಲರು, ತುಮಕೂರು.

ಕೃತಕ ಬುದ್ಧಿಮತ್ತೆ ಮತ್ತು ಭವಿಷ್ಯದ ಜೀವನ ಕೌಶಲ್ಯಗಳು

ಕೃತಕ ಬುದ್ಧಿಮತ್ತೆ (Artificial Intelligence - AI)

ಇಂದಿನ ಜಗತ್ತಿನಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ತಂತ್ರಜ್ಞಾನವಾಗಿದೆ. ಇದು ನಮ್ಮ ದೈನಂದಿನ ಜೀವನದ ಪ್ರತಿಹಂತದಲ್ಲೂ ಹಾಸುಹೊಕ್ಕಾಗಿದೆ, ಸ್ಮಾರ್ಟ್ ಫೋನ್‌ಗಳಲ್ಲಿನ ವೈಯಕ್ತಿಕ ಸಹಾಯಕರಿಂದ ಹಿಡಿದು, ಆರೋಗ್ಯ ರಕ್ಷಣೆ ಮತ್ತು ಹಣಕಾಸು ವಲಯಗಳಲ್ಲಿನ ಸಂಕೀರ್ಣ ನಿರ್ಧಾರ ತೆಗೆದುಕೊಳ್ಳುವ ವ್ಯವಸ್ಥೆಗಳವರೆಗೆ ಇದರ ಬಳಕೆ ವಿಸ್ತರಿಸಿದೆ. AI ತಂತ್ರಜ್ಞಾನವು ಮುಂಬರುವ ದಿನಗಳಲ್ಲಿ ಇನ್ನಷ್ಟು ಪ್ರಬಲವಾಗಲಿದ್ದು, ಇದು ಉದ್ಯೋಗದ ಸ್ವರೂಪ ಮತ್ತು ನಾವು ಬದುಕುವ ರೀತಿಯನ್ನು ಆಮೂಲಾಗ್ರವಾಗಿ ಬದಲಾಯಿಸಲಿದೆ. ಈ ಬದಲಾವಣೆಗೆ ಹೊಂದಿಕೊಳ್ಳಲು, ನಾವು ಹೊಸ ಜೀವನ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯ.

AIಯು ತರುವ ಬದಲಾವಣೆಗಳು : AI ಪುನರಾವರ್ತಿತ ಮತ್ತು ಯಾಂತ್ರಿಕ ಕೆಲಸಗಳನ್ನು (routine tasks) ಸ್ವಯಂಚಾಲಿತ ಗೊಳಿಸುತ್ತದೆ, ಇದರಿಂದಾಗಿ ಅನೇಕ ಸಾಂಪ್ರದಾಯಿಕ ಉದ್ಯೋಗಗಳು ಕಣ್ಮರೆಯಾಗಬಹುದು. ಅದೇ ಸಮಯದಲ್ಲಿ, ಇದು ಹೊಸ ಉದ್ಯೋಗಾವಕಾಶಗಳು ಮತ್ತು ಪಾತ್ರಗಳನ್ನು ಸೃಷ್ಟಿಸುತ್ತದೆ, ಉದಾಹರಣೆಗೆ AI ನೀತಿಶಾಸ್ತ್ರಜ್ಞರು (Al ethicists), ದತ್ತಾಂಶ ವಿಜ್ಞಾನಿಗಳು (data scientists) ಮತ್ತು AI ಸಿಸ್ಟಮ್ ವಿನ್ಯಾಸಕರು. ಈ ಹೊಸ ಪರಿಸರದಲ್ಲಿ ಯಶಸ್ವಿಯಾಗಲು, ತಾಂತ್ರಿಕ ಜ್ಞಾನದ ಜೊತೆಗೆ ಮಾನವ–ಕೇಂದ್ರಿತ ಕೌಶಲ್ಯಗಳು ಹೆಚ್ಚು ಮಹತ್ವ ಪಡೆಯುತ್ತವೆ.

ಭವಿಷ್ಯಕ್ಕೆ ಅಗತ್ಯವಾದ ಪ್ರಮುಖ ಜೀವನ ಕೌಶಲ್ಯಗಳು : Al–ಚಾಲಿತ ಭವಿಷ್ಯದಲ್ಲಿ ಪ್ರತಿಯೊಬ್ಬರೂ ಕಲಿಯಬೇಕಾದ ಕೆಲವು ಪ್ರಮುಖ ಕೌಶಲ್ಯಗಳು ಹೀಗಿವೆ:

ವಿಮರ್ಶಾತ್ಮಕ ಚಿಂತನೆ (Critical Thinking) ಮತ್ತು ಸಮಸ್ಯೆ ಪರಿಹಾರ (Problem-Solving) : Al ನಮಗೆ ದತ್ತಾಂಶ ಆಧಾರಿತ ಒಳನೋಟಗಳನ್ನು ನೀಡಬಹುದಾದರೂ, ಆ ಮಾಹಿತಿಯನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿ, ಪಕ್ಷಪಾತಗಳನ್ನು ಗುರುತಿಸಿ ಮತ್ತು ನೈತಿಕ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮಾನವನಿಗೆ ಸೇರಿದೆ. ಸಂಕೀರ್ಣ ಸಮಸ್ಯೆಗಳಿಗೆ ಸೃಜನಶೀಲ ಪರಿಹಾರಗಳನ್ನು ಕಂಡುಕೊಳ್ಳುವ ಸಾಮರ್ಥ್ಯವು ಅತ್ಯಮೂಲ್ಯವಾಗಿರುತ್ತದೆ.

ದತ್ತಾಂಶ ಸಾಕ್ಷರತೆ (Data Literacy) : AI ಯಶಸ್ಸಿಗೆ ಉತ್ತಮ ಗುಣಮಟ್ಟದ ದತ್ತಾಂಶ (data) ಮುಖ್ಯವಾಗಿದೆ. ಪ್ರತಿಯೊಬ್ಬರೂ AI ಹೇಗೆ ಕಾರ್ಯನಿರ್ವಹಿಸುತ್ತದೆ, ದತ್ತಾಂಶವನ್ನು ಹೇಗೆ ಅರ್ಥೈಸಿಕೊಳ್ಳಬೇಕು ಮತ್ತು ಅದನ್ನು ಪರಿಣಾಮಕಾರಿಯಾಗಿ ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ತಿಳಿದಿರಬೇಕು.

ಸೃಜನಶೀಲತೆ (Creativity) : ಯಂತ್ರಗಳು ಮಾಹಿತಿಯನ್ನು ಸಂಸ್ಕರಿಸುವಲ್ಲಿ ಮತ್ತು ಮಾದರಿಗಳನ್ನು ಗುರುತಿಸುವಲ್ಲಿ ಉತ್ತಮವಾಗಿದ್ದರೂ, ವಿಶಿಷ್ಟವಾದ ಆಲೋಚನೆಗಳು, ಕಲ್ಪನೆಗಳು ಮತ್ತು ಕಲಾತ್ಮಕ ಅಭಿವ್ಯಕ್ತಿಗಳಿಗೆ ಮಾನವನ ಸೃಜನಶೀಲತೆ ಅನಿವಾರ್ಯ.

ಭಾವನಾತ್ಮಕ ಬುದ್ಧಿಮತ್ತೆ (Emotional Intelligence) ಮತ್ತು ಸಹಯೋಗ (Collaboration) : ಪರಾನುಭೂತಿ ಸಂವಹನ ಮತ್ತು ತಂಡದ ಕೆಲಸದಂತಹ ಮಾನವ ಕೌಶಲ್ಯಗಳನ್ನು AI ಸುಲಭವಾಗಿ ಪುನರಾವರ್ತಿಸಲು ಸಾಧ್ಯವಿಲ್ಲ. ಮಾನವರು ಮತ್ತು AI ವ್ಯವಸ್ಥೆಗಳ ನಡುವೆ, ಹಾಗೂ ಮನುಷ್ಯರ ನಡುವೆ ಪರಿಣಾಮಕಾರಿ ಸಹಯೋಗವು ಕೆಲಸದ ಸ್ಥಳದಲ್ಲಿ ನಿರ್ಣಾಯಕವಾಗಿರುತ್ತದೆ.

ಹೊಂದಿಕೊಳ್ಳುವಿಕೆ (Adaptability) ಮತ್ತು ಆಜೀವ ಕಲಿಕೆ (Lifelong Learning) : ತಂತ್ರಜ್ಞಾನವು ಅನಿರೀಕ್ಷಿತ ವೇಗದಲ್ಲಿ ಬದಲಾಗುತ್ತಿರುವುದರಿಂದ, ಹೊಸಪರಿಕರಗಳು ಮತ್ತು ಕಾರ್ಯ ತಂತ್ರಗಳಿಗೆ ಹೊಂದಿಕೊಳ್ಳುವ ಮನಸ್ಥಿತಿ ಮತ್ತು ನಿರಂತರವಾಗಿ ಕಲಿಯುವ ಇಚ್ಛೆ ಅತ್ಯಗತ್ಯ.

AI ಸಾಕ್ಷರತೆ ಮತ್ತು ನೈತಿಕತೆ : Al ಪರಿಕರಗಳನ್ನು ಜವಾಬ್ದಾರಿಯುತವಾಗಿ ಬಳಸುವುದು ಮತ್ತು ಅದರ ನೈತಿಕ ಪರಿಣಾಮಗಳ ಬಗ್ಗೆ ಅರಿವು ಹೊಂದಿರುವುದು ಮುಖ್ಯ. ಕೃತಕ ಬುದ್ಧಿಮತ್ತೆಯು ನಮ್ಮ ಜೀವನ ಮತ್ತು



ಪ್ರಸಾದ್ ಎಂ.ಎನ್.
#751, 10ನೇ ಮುಖ್ಯರಸ್ತೆ, 3ನೇ ಹಂತ,
3ನೇ ವಿಭಾಗ, ಬಸವೇಶ್ವರನಗರ,
ಬೆಂಗಳೂರು–79.
ಮೊ : 9845983757

ಕೆಲಸದ ಭವಿಷ್ಯವನ್ನು ಬದಲಾಯಿಸಲಿದೆ ಎಂಬುದು ಸ್ಪಷ್ಟ, ಯಂತ್ರಗಳು ಮತ್ತು ಮಾನವರು ಒಟ್ಟಾಗಿ ಕೆಲಸ ಮಾಡುವ 'ಬುದ್ಧಿವಂತ ವರ್ಧನೆ' ಯುಗ ಇದಾಗಿದೆ. ಈ ಹೊಸ ಜಗತ್ತಿನಲ್ಲಿ ನಾವು ಕೇವಲ ತಾಂತ್ರಿಕ ಕೌಶಲ್ಯಗಳ ಮೇಲೆ ಮಾತ್ರವಲ್ಲದೆ, ನಮ್ಮ ವಿಶಿಷ್ಟ ಮಾನವ ಸಾಮರ್ಥ್ಯಗಳಾದ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ಭಾವನಾತ್ಮಕ ಬುದ್ಧಿಮತ್ತೆಯನ್ನು ಬೆಳೆಸಿಕೊಳ್ಳಬೇಕು. ನಿರಂತರ ಕಲಿಕೆ ಮತ್ತು ಹೊಂದಿಕೊಳ್ಳುವ ಮನೋಭಾವದಿಂದ, AIಯು ಸಮಾಜಕ್ಕೆ ಮತ್ತು ಪ್ರತಿಯೊಬ್ಬ ವ್ಯಕ್ತಿಗೆ ಪ್ರಯೋಜನಕಾರಿಯಾಗುವಂತೆ ನಾವು ಭವಿಷ್ಯವನ್ನು ರೂಪಿಸಬಹುದು.

ಭವಿಷ್ಯದ ಮಕ್ಕಳು ಮತ್ತು ಕೃತಕ ಬುದ್ಧಿಮತ್ತೆ (AI): ಸವಾಲುಗಳು ಮತ್ತು ಸಾಧ್ಯತೆಗಳು : ಕೃತಕ ಬುದ್ಧಿಮತ್ತೆ ತಂತ್ರಜ್ಞಾನವು ಇಂದು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗುತ್ತಿದೆ. ಗೂಗಲ್‌ನಲ್ಲಿ ಮಾಹಿತಿಯನ್ನು ಹುಡುಕುವುದರಿಂದ ಹಿಡಿದು, ಆನ್‌ಲೈನ್ ಶಾಪಿಂಗ್ ಸಲಹೆಗಳನ್ನು ಪಡೆಯುವವರೆಗೆ ಎಲ್ಲದರಲ್ಲೂ AI ಬಳಕೆಯಾಗುತ್ತಿದೆ. ಈ ತಂತ್ರಜ್ಞಾನವು ನಮ್ಮ ಕೆಲಸ ಮಾಡುವ, ಕಲಿಯುವ ಮತ್ತು ಬದುಕುವ ವಿಧಾನವನ್ನು ವೇಗವಾಗಿ ಬದಲಾಯಿಸುತ್ತಿದೆ ಮತ್ತು ಇದು ಮುಂದಿನ ಪೀಳಿಗೆಯಾದ ನಮ್ಮ ಮಕ್ಕಳ ಭವಿಷ್ಯದ ಮೇಲೆ ಭಾರಿ ಪರಿಣಾಮ ಬೀರಲಿದೆ. ಭವಿಷ್ಯದ ಮಕ್ಕಳು AI ಯುಗದಲ್ಲಿ ಹೇಗೆ ಬೆಳೆಯುತ್ತಾರೆ, ಅವರು ಎದುರಿಸ ಬಹುದಾದ ಸವಾಲುಗಳು ಮತ್ತು ಈ ತಂತ್ರಜ್ಞಾನವನ್ನು ಅವರ ಉಜ್ವಲ ಭವಿಷ್ಯಕ್ಕಾಗಿ ಹೇಗೆ ಬಳಸಿಕೊಳ್ಳಬಹುದು ಎಂಬುದನ್ನು ಚರ್ಚಿಸಲಾಗಿದೆ.

ಶಿಕ್ಷಣದಲ್ಲಿ AI ಪಾತ್ರ : AI ಮಕ್ಕಳ ಕಲಿಕೆಯ ಅನುಭವವನ್ನು ವೈಯಕ್ತೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ಮಗುವಿನ ಕಲಿಕೆಯ ವೇಗ ಮತ್ತು ಶೈಲಿ ವಿಭಿನ್ನವಾಗಿರುತ್ತದೆ. AI–ಚಾಲಿತ ಕಲಿಕಾ ವೇದಿಕೆಗಳು ಪ್ರತಿ ವಿದ್ಯಾರ್ಥಿಯ ಅಗತ್ಯಕ್ಕೆ ಅನುಗುಣವಾಗಿ ವಿಷಯವನ್ನು ನೀಡುತ್ತವೆ, ಇದರಿಂದಾಗಿ ಕಲಿಕೆಯು ಹೆಚ್ಚು ಪರಿಣಾಮಕಾರಿಯಾಗುತ್ತದೆ. ಉದಾಹರಣೆಗೆ, ಗಣಿತದಂತಹ ವಿಷಯಗಳನ್ನು ಕಲಿಯಲು ಕಷ್ಟಪಡುವ ಮಕ್ಕಳಿಗೆ, AI ಹಂತ ಹಂತವಾಗಿ, ಉದಾಹರಣೆಗಳೊಂದಿಗೆ ಕಲಿಸುವ ಮೂಲಕ ಆಸಕ್ತಿಯನ್ನು ಹೆಚ್ಚಿಸುತ್ತದೆ. ಇದು ಶಿಕ್ಷಣವನ್ನು ಹೆಚ್ಚು ಸುಲಭ ಮತ್ತು ಆಸಕ್ತಿದಾಯಕವಾಗಿಸುತ್ತದೆ.

ದೈನಂದಿನ ಜೀವನ ಮತ್ತು ಬೆಳವಣಿಗೆ : ಮಕ್ಕಳ ಆಟಿಕೆಗಳು, ಸ್ಮಾರ್ಟ್ ಅಸಿಸ್ಟೆಂಟ್‌ಗಳು ಮತ್ತು ಇತರ ಎಲೆಕ್ಟ್ರಾನಿಕ್ ಸಾಧನಗಳಲ್ಲಿ AI ಬಳಕೆಯು ಸಾಮಾನ್ಯವಾಗುತ್ತಿದೆ. ಇದು ಮಕ್ಕಳ ಬೆಳವಣಿಗೆಯ ಮೇಲೆ ಧನಾತ್ಮಕ ಮತ್ತು ಋಣಾತ್ಮಕ ಪರಿಣಾಮಗಳನ್ನು ಬೀರಬಹುದು. ಒಂದು ಕಡೆ, AI ಆಧಾರಿತ ಅಪ್ಲಿಕೇಶನ್‌ಗಳು ಮತ್ತು ಆಟಗಳು ಮಕ್ಕಳಲ್ಲಿ ಸಮಸ್ಯೆ–ಪರಿಹರಿಸುವ ಕೌಶಲ್ಯ ಮತ್ತು ಕುತೂಹಲವನ್ನು ಹೆಚ್ಚಿಸಬಹುದು. ಮತ್ತೊಂದೆಡೆ, ಮಕ್ಕಳು ತಮ್ಮ ಸುತ್ತಮುತ್ತಲಿನ ಜನರೊಂದಿಗೆ ಸಂವಹನ ನಡೆಸುವುದಕ್ಕಿಂತ AI ಜೊತೆಗೆ ಹೆಚ್ಚು ಲಗತ್ತಿಸುವ ಅಪಾಯವಿದೆ, ಇದು ಅವರ ಸಾಮಾಜಿಕ ಮತ್ತು ಭಾವನಾತ್ಮಕ ಬೆಳವಣಿಗೆಯ ಮೇಲೆ ಪರಿಣಾಮ ಬೀರಬಹುದು.

ಎದುರಾಗಬಹುದಾದ ಸವಾಲುಗಳು : AI ತಂತ್ರಜ್ಞಾನವು ಬೆಳೆದಂತೆ, ಕೆಲವು ನೈತಿಕ ಮತ್ತು ಸಾಮಾಜಿಕ ಸವಾಲುಗಳು ಉದ್ಭವಿಸುತ್ತವೆ. ಮಕ್ಕಳ ಡೇಟಾ ಗೌಪ್ಯತೆ, AI ಮೂಲಕ ತಪ್ಪು ಮಾಹಿತಿ ಹರಡುವ ಸಾಧ್ಯತೆ ಮತ್ತು ಸೈಬರ್ ಬೆದರಿಕೆಗಳು ಗಂಭೀರ ಕಾಳಜಿಗಳಾಗಿವೆ. ಮಕ್ಕಳು ಆನ್‌ಲೈನ್‌ನಲ್ಲಿ Al–ನಿರ್ಮಿತ ವಿಷಯಗಳ (Al-generated content) ಬಲಿಪಶುಗಳಾಗದಂತೆ ಜಾಗರೂಕರಾಗಿರ ಬೇಕು. ಅಲ್ಲದೆ, ತಂತ್ರಜ್ಞಾನದ ಮೇಲಿನ ಅತಿಯಾದ ಅವಲಂಬನೆಯು ಅವರಲ್ಲಿ ಸ್ವತಂತ್ರ ಚಿಂತನೆ ಮತ್ತು ವಿಮರ್ಶಾತ್ಮಕ ವಿಶ್ಲೇಷಣೆಯ ಕೌಶಲ್ಯಗಳನ್ನು ಕಡಿಮೆ ಮಾಡಬಹುದು.

ಭವಿಷ್ಯಕ್ಕಾಗಿ ಮಕ್ಕಳನ್ನು ಸಿದ್ಧಪಡಿಸುವುದು : AI ಯುಗದಲ್ಲಿ ಯಶಸ್ವಿಯಾಗಲು, ಮಕ್ಕಳಿಗೆ ಕೆಲವು ಪ್ರಮುಖ ಕೌಶಲ್ಯಗಳು ಅಗತ್ಯವಾಗಿವೆ. ಕೇವಲ ಕೋಡಿಂಗ್ ಅಥವಾ ತಾಂತ್ರಿಕ ಜ್ಞಾನವಲ್ಲದೆ, ಕುತೂಹಲ, ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಮತ್ತು ತಂಡದ ಕೆಲಸದಂತಹ ಮಾನವೀಯ ಕೌಶಲ್ಯಗಳು ಹೆಚ್ಚು ಮುಖ್ಯವಾಗುತ್ತವೆ. ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ AI ಅನ್ನು ಕೇವಲ ಒಂದು ಸಾಧನವಾಗಿ ಬಳಸಲು ಕಲಿಸಬೇಕು, ಸಂಪೂರ್ಣವಾಗಿ ಅದರ ಮೇಲೆ ಅವಲಂಬಿತರಾಗಬಾರದು. ಕೃತಕ ಬುದ್ಧಿಮತ್ತೆಯು ಭವಿಷ್ಯದ ಮಕ್ಕಳ ಜೀವನದಲ್ಲಿ ಅಳಿಸಲಾಗದ ಛಾಪು ಮೂಡಿಸಲಿದೆ. ಇದು ಅಪಾರ ಅವಕಾಶಗಳನ್ನು ಒದಗಿಸಿದರೂ, ಅದರ ಬಳಕೆಯಲ್ಲಿ ಎಚ್ಚರಿಕೆ ಮತ್ತು ಮಾರ್ಗದರ್ಶನ ಅಗತ್ಯ. AI ಅನ್ನು ಜವಾಬ್ದಾರಿಯುತವಾಗಿ ಬಳಸಿಕೊಂಡು, ನಮ್ಮ ಮಕ್ಕಳು ತಂತ್ರಜ್ಞಾನದೊಂದಿಗೆ ಸಹಬಾಳ್ವೆ ನಡೆಸಲು ಮತ್ತು ಉಜ್ವಲ ಭವಿಷ್ಯವನ್ನು ನಿರ್ಮಿಸಲು ಸಾಧ್ಯವಾಗುತ್ತದೆ. ಮಾನವ ಮತ್ತು AI ನಡುವಿನ ಸಹಯೋಗವು ಮುಂದಿನ ಪೀಳಿಗೆಯ ಉಳಿವಿಗಾಗಿ ಏಕೈಕ ಪರಿಹಾರವಾಗಿದೆ.

ಎಚ್ಚರ ! ನಕಲಿ ಔಷಧ ನುಂಗಿ ನುಗ್ಗಾದೀರಿ....!!

ಯಾವುದೇ ಚಿಕಿತ್ಸಕ ಸ್ವಾರ್ಥವಿರದ ಮತ್ತು ಹಲವಾರು ಪ್ರಕರಣಗಳಲ್ಲಿ ಅಸುರಕ್ಷಿತವೂ ಆಗಿದ್ದ 156 ಔಷಧಿಗಳನ್ನು ಕೇಂದ್ರೀಯ ಔಷಧಿಗಳ ಗುಣಮಟ್ಟ ನಿಯಂತ್ರಣ ಸಂಸ್ಥೆ ಇತ್ತೀಚೆಗೆ (ಆಗಸ್ಟ್ ತಿಂಗಳಲ್ಲಿ) ನಿಷೇಧಿಸಿರುವುದಾಗಿ ಸಂಸ್ಥೆಯ ಅಧಿಕಾರಿಯೋರ್ವರು ಮಾಹಿತಿ ನೀಡಿದ್ದರು. ಇಂತಹ ಇನ್ನೂ 34 ಔಷಧಗಳ ಮೇಲೆ ಶೀಘ್ರವೇ ನಿಷೇಧ ಹೇರುವ ಸಾಧ್ಯತೆಗಳಿವೆ ಎಂದು ತಿಳಿಸಿದ್ದಾರೆ. ಅಚ್ಚರಿಗೊಂಡಿರೇನು ? 2018ರಲ್ಲಿ 344 ಔಷಧಗಳನ್ನು ನಿಷೇಧಿಸಿದ್ದರು. ಹೀಗೆ ಆದೇಶ ಬಂದಾಗಲೆಲ್ಲ ನಿಷೇಧಿತ ಔಷಧಿಗಳ ಡ್ರಗ್ ಕಂಪನಿಗಳು ಕೋರ್ಟ್ ಮೆಟ್ಟಲು ಹತ್ತುತ್ತಾರೆ. ಈ ಔಷಧ ತಯಾರಿಸಲು ಪರವಾನಿಗೆ ಕೊಟ್ಟವರೂ ಇವರೇ. ಈಗ ನಿಷೇಧಿಸಿದರೆ, ನಮ್ಮ ದಾಸ್ತಾನಿನಲ್ಲಿ ಇರುವ ಔಷಧಗಳ ಹಾನಿಯನ್ನು ತುಂಬುವವರು ಯಾರು ? ಎಂದು ಕೋರ್ಟಿನಲ್ಲಿ ವಾದ ಮಂಡಿಸುತ್ತಾರೆ.

ದಾಸ್ತಾನಿನಲ್ಲಿ ಇರುವ ಔಷಧಗಳು ಮಾರಾಟ ವಾಗುವವರೆಗೆ ಈ ಅರ್ಜಿಗೆ ತಡೆಯಾಜ್ಞೆ ತರುತ್ತಾರೆ. ಟಬ್ ಮೆಮೊರಿ ಈಸ್ ವೈರಿ ಶಾರ್ಟ್ ಎಂಬುದು ಔಷಧ ಕಂಪನಿಯವರಿಗೆ ಗೊತ್ತು. ಮುಂದೆ ನಿರುಪಯುಕ್ತ ಔಷಧಗಳ ಮಾರಾಟ ಎಗ್ಗಿಲ್ಲದೇ ನಡೆಯುತ್ತದೆ. ಉತ್ಪಾದನೆಯನ್ನೂ ನಿಲ್ಲುವುದಿಲ್ಲ, ಗೋದಾಮು ಖಾಲಿಯಾಗುವುದಿಲ್ಲ. ತಡೆಯಾಜ್ಞೆ ತೆರವುಮಾಡಲು ಸರಕಾರವೂ ಪ್ರಯತ್ನಿಸುವುದಿಲ್ಲ. ಕಂಪನಿಗಳ ಕಪ್ಪ ಕಾಣಿಕೆಗಳು ಎಲ್ಲರ ಬಾಯಿಗೆ ಬೀಗ ಹಾಕುತ್ತವೆ.

ಕಾಲ ಉರುಳುತ್ತದೆ. ವೇಷ ಬದಲಿಸುತ್ತಾರೆ. ಮತ್ತೆ ಬಣ್ಣ ಬಳಿಯುತ್ತಾರೆ. ರಂಗತಾಲೀಮು ಮಾಡಿ ಮತ್ತೊಂದು ಹೊಸ ನಾಟಕ ಆಡುತ್ತಾರೆ. ಪೇಪರಿನವರಿಗೆ ಸುದ್ದಿ ಆಗುತ್ತದೆ. ಮಾಧ್ಯಮದವರಿಗೆ 'ಬ್ರೇಕಿಂಗ್ ನ್ಯೂಸ್' ಆಗುತ್ತದೆ. 24/7 ಚೀರಿ ಚೀರಿ ಕಿವಿ ಮರ್ ಅನ್ನುವಂತೆ ಬಿತ್ತರಿಸುತ್ತಾರೆ. ಟಿಆರ್‌ಪಿ ಹೆಚ್ಚಿಸಿಕೊಳ್ಳುತ್ತಾರೆ. ಗುಣಮಟ್ಟವಿಲ್ಲದ, ಪರಿಣಾಮಕಾರಿಯಲ್ಲದ ಔಷಧ ಸೇವನೆ ಯಥಾಪ್ರಕಾರ ಮುಂದುವರಿಯುತ್ತದೆ. ಈ ದೇಶದಲ್ಲಿ ಬಡವರ ಜೀವಕ್ಕೆ ಕಾಸಿನ ಕಿಮ್ಮತ್ತಿಲ್ಲ. ಮಂತ್ರಿ ಮಹೋದಯರು ಸಕ್ಕರೆ ಲೇಪಿತ ಕಹಿ ಗುಳಿಗೆ ನೀಡುವುದು ನಿಲ್ಲುವುದಿಲ್ಲ. ರೋಗಿಗಳ ಕಿಸೆ ಖಾಲಿಯಾಗುವುದು ತಪ್ಪುವುದಿಲ್ಲ. ನಿಷೇಧಿತ, ನಕಲಿ ಔಷಧಗಳು ಮಾರುಕಟ್ಟೆಯಲ್ಲಿ ಮಾರಾಟವಾಗುವುದು ಕೊನೆಗೊಳ್ಳುವುದಿಲ್ಲ.....

ನಕಲಿ ಔಷಧ ಜಾಲ : ರಾಜ್ಯದ ಆಸ್ಪತ್ರೆಗಳಲ್ಲಿ ಬಳಸುತ್ತಿರುವ ಕೆಲವು ಔಷಧಗಳಲ್ಲಿ ಪ್ರಮಾಣಿತ ಗುಣಮಟ್ಟ ಇಲ್ಲದಿರುವುದು ಒಂದು ಸಮಸ್ಯೆಯಾದರೆ, ಮತ್ತೊಂದೆಡೆ ಔಷಧ ಮಾರುಕಟ್ಟೆಯಲ್ಲಿ ಪ್ರತಿಷ್ಠಿತ ಕಂಪನಿಗಳ ಔಷಧದ ಹೆಸರು ನಕಲುಮಾಡಿ ಮಾರಾಟ ಮಾಡುವ ಜಾಲ ವ್ಯಾಪಕವಾಗಿದೆ. ನಕಲಿ ಔಷಧಗಳ ಮಾರಾಟದಲ್ಲಿ ಹೊರ ರಾಜ್ಯಗಳ ಕಂಪನಿಗಳು ಸಕ್ರಿಯವಾಗಿವೆ. ಇದು ರಾಜ್ಯದ ವಿವಿಧೆಡೆ ಔಷಧ ನಿಯಂತ್ರಕರು ನಡೆಸಿದ ತಪಾಸಣೆಯಿಂದ ದೃಢಪಟ್ಟಿದೆ. ಔಷಧಗಳ ಹೆಸರು ಒಂದೇ ಆಗಿದ್ದರೂ, ಉತ್ಪಾದಕರು ಬೇರೆ ಬೇರೆ ಆಗಿರುವುದರಿಂದ ಔಷಧಗಳ ಮಾದರಿಗಳ ಸಂಗ್ರಹಿಸಿ, ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಇದರಿಂದ ಅಸಲಿ–ನಕಲಿಯ ಪತ್ತೆ ಸಾಧ್ಯವಾಗುತ್ತಿದೆ.

ಕಳೆದ ಎರಡು ಮೂರು ವರ್ಷಗಳಲ್ಲಿ ಔಷಧ ನಿಯಂತ್ರಕರು ನಡೆಸಿದ ತಪಾಸಣೆಯಲ್ಲಿ 40ಕ್ಕೂ ಹೆಚ್ಚು ನಕಲಿ ಔಷಧಗಳು ಪತ್ತೆಯಾಗಿವೆ. ಅವುಗಳಲ್ಲಿ ಮೂಗಿಗೆ ಹಾಕುವ ದ್ರಾವಣ, ವಿಟಮಿನ್ ಡಿ 3 ಮಾತ್ರೆಗಳು, ನೋವು ನಿವಾರಕ ಔಷಧ ಹಾಗೂ ಸೋಂಕು ನಿವಾರಕ ದ್ರಾವಣಗಳು (ಸ್ಯಾನಿಟೈಸರ್) ಹೆಚ್ಚಾಗಿ ಸೇರಿವೆ. ಔಷಧಗಳು ಮತ್ತು ಕಾಂತಿವರ್ಧಕ ಕಾಯ್ದೆ 1940ರ ಪರಿಚ್ಛೇದ 27ರ ಅಡಿ ನಕಲಿ ಔಷಧಗಳ ತಯಾರಿಕೆ, ವಿತರಣೆ ಮತ್ತು ಮಾರಾಟ ಶಿಕ್ಷಾರ್ಹ ಅಪರಾಧವಾಗಿದೆ.

ವಿಶ್ವ ಆರೋಗ್ಯ ಸಂಸ್ಥೆಯ ಆತಂಕ : ಹಾನಿಕಾರಕ ಕಲಬೆರಕೆಗಳನ್ನು ಹೊಂದಿದ ನಕಲಿ ಔಷಧಗಳು ನಿಮ್ಮ ಆರೋಗ್ಯವನ್ನು ಸುಧಾರಿಸುವ ಬದಲು ಅದನ್ನು ಮತ್ತಷ್ಟು ಹದಗೆಡಿಸಬಹುದು. ಭಾರತ ಮೂಲದ ಕಂಪನಿಯ ಕೆಮ್ಮಿನ ಸಿರಪ್ ಸೇವಿಸಿ ಆಫ್ರಿಕಾದಲ್ಲಿ 18 ಮಕ್ಕಳ ಸಾವಿನ ವರದಿ ಬೆನ್ನಲ್ಲೇ ವಿಶ್ವ ಆರೋಗ್ಯ ಸಂಸ್ಥೆ ಎಚ್ಚರಿಕೆ ನೀಡಿತು. ದೇಶದಲ್ಲಿ ಹಲವು ನಕಲಿ ಔಷಧಿಗಳು ಮಾರುಕಟ್ಟೆ ಸೇರಿರುವ ಆತಂಕಕಾರಿ. ವಿಶ್ವ ಆರೋಗ್ಯ ಸಂಸ್ಥೆ ಅಂದಾಜಿನಂತೆ, ನಕಲಿ ಮತ್ತು ಕಳಪೆ ಗುಣಮಟ್ಟದ ಔಷಧಿಗಳಿಂದ ವಾರ್ಷಿಕವಾಗಿ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಸಾವುಗಳು ಸಂಭವಿಸುತ್ತವೆ. ಮುಂದುವರಿಯುವುದು...

– ಡಾ. ಕರವೀರಪ್ರಭು ಕ್ಯಾಲಕೊಂಡ
ನಿ. ಜಿಲ್ಲಾ ಶಸ್ತ್ರಚಿಕಿತ್ಸಕರು, ಕ್ಯಾಲಕೊಂಡ ಆಸ್ಪತ್ರೆ,
ಬಾದಾಮಿ, ಬಾಗಲಕೋಟೆ. ಮೊ : 9448036207

ಮಾಹೆವಾರು ಕೈಗೊಳ್ಳಬೇಕಾದ ಸೂಕ್ತ ಬೇಸಾಯ ಕ್ರಮಗಳು

ಜನೆವರಿ ತಿಂಗಳಿಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ದಾಳಿಂಬೆ ಬೆಳೆಯಲ್ಲಿ ಅಂಬೆ ಬಹಾರ ಆರಂಭಿಸುವುದು ಮಾವು ಹಾಗೂ ಬಾಳೆಹಣ್ಣು ಉತ್ತಮ ಕಟ್ಟುವಿಕೆಗಾಗಿ ಪ್ಲಾನೋಪಿಕ್ಸ 0.4 ಮಿಲಿ/ಲೀಟರ್ ಹಾಗೂ ಮ್ಯಾಂಗೊ ಸ್ಪೆಷಲ್ 5 ಗ್ರಾಂ/ಲೀ ಸಿಂಪಡಿಸಬೇಕು. ಮಾವಿನಲ್ಲಿ ದೋಷಪೂರಿತ ಕವಲೊಡೆದ ಹೂ ಗೊಂಚಲುಗಳನ್ನು ಕಿತ್ತೊಗೆಯಬೇಕು ಮಾವಿನಲ್ಲಿ ಜಿಗಿಹುಳು ಹಾಗೂ ಬೂದಿರೋಗ ನಿರ್ವಹಣೆಗೆ ಇಮಿಡಾಕ್ಲೋಪ್ರಿಡ್ 1 ಮಿಲೀ/ಲೀ ಹಾಗೂ ಕರಗುವ 2 ಮಿ.ಲೀ/ಲೀ ಗಂಧಕ ಸಿಂಪರಣೆ ಮಾಡಬೇಕು. ಮಾವಿನ ತೋಟದಲ್ಲಿ ಹೂವಾಡುವ ಹಂತದಲ್ಲಿ ಎಕರೆಗೆ 4–5 ಜೇನು ಪೆಟ್ಟಿಗೆ ಸಾಕಾಣಿಕೆ ಹೆಚ್ಚು ಪರಾಗಸ್ಪರ್ಶ, ಕಾಯಿ ಕಟ್ಟುವಿಕೆಗೆ ಸಹಾಯ ಮಾಡುತ್ತದೆ. ನೇರಳೆ ಬೆಳೆಗೆ ನೀರು ಕೊಡುವುದನ್ನು ತಡೆಹಿಡಿಯಬೇಕು. ನೀರಾವರಿಯಲ್ಲಿ ಸಲ್ಫೇಟ್ ಆಫ್ ಪೊಟ್ಯಾಷ್ ಕೊಡುವುದು ಉತ್ತಮ.

ಫೆಬ್ರವರಿಯಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ಮಾವಿನ ಬೆಳೆಯಲ್ಲಿ ಕಾಯಿ ಜೋಳದ ಕಾಳಿನ ಗಾತ್ರದ ಹಂತದಲ್ಲಿ ನೀರು ನೀಡಬೇಕು. ದಾಳಿಂಬೆ ಮತ್ತು ಪೇರಲ ಬೆಳೆಯಲ್ಲಿ ಅಂಬೆ ಬಾಹರ ಆರಂಭಿಸುವುದು ಮಾವಿನಲ್ಲಿ ಹಣ್ಣಿನ ನೊಣದ ನಿರ್ವಹಣೆಗೆ ಮಿಥೈಲ್ ಯುಜಿನಾಲ್‌ನ 8–10 ಬಲೆಗಳನ್ನು ಪ್ರತಿ ಎಕರೆಗೆ ನೇತು ಹಾಕಬೇಕು. ದ್ರಾಕ್ಷಿ ಬೆಳೆಯ ಬೇರುಕಾಂಡ ನಾಟಿಗಾಗಿ ಭೂಮಿ ತಯಾರಿಕೆ ಕೈಗೊಳ್ಳಬೇಕು ಮಾವಿಗೆ ಮ್ಯಾಂಗೊ ಸ್ಪೆಷಲ್ 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಸಿಂಪಡಿಸಬೇಕು ದ್ರಾಕ್ಷಿ ಕಟಾವು ಕೈಗೊಳ್ಳಬೇಕು. ಮಾವು ಹಾಗೂ ಬಾಳೆ ಬೆಳೆಗೆ ಮ್ಯಾಂಗೊ ಹಾಗೂ ಬಾಳೆ ಸ್ಪೆಷಲ್ ಸಿಂಪಡಿಸಬೇಕು. ದಾಳಿಂಬೆ ಹಣ್ಣು ಕೊಯ್ಲು ನಂತರ ಬೆಳೆಯನ್ನು ವಿಶ್ರಾಂತಿಗೆ ಬಿಡುವ ಮುನ್ನ ಗಿಡಗಳಲ್ಲಿ ಸೊರಗು ರೋಗದ ನಿರೋಧಕತೆ ಹೆಚ್ಚಿಸಲು ಟ್ರೈಕೋ ಕವಚ 2 ಕೆ.ಜಿ/ಎಕರೆ ಹಾಗೂ ಬೇವಿನ ಹಿಂಡಿ 100 ಕೆ.ಜಿ/ಎಕರೆ ಅಥವಾ ಕೊಟ್ಟಿಗೆ ಗೊಬ್ಬರ ಜೊತೆಗೆ ಮಿಶ್ರಣ ಮಾಡಿ ಬಳಸಬೇಕು.

ಫೆಬ್ರವರಿಯಲ್ಲಿ ಬೀನ್ಸ್, ಈರುಳ್ಳಿ, ಹೂಕೊಸು, ಕ್ಯಾರೆಟ್ ಮತ್ತು ಆಲೂಗಡ್ಡೆಯಂತಹ ಹಲವಾರು ಬೆಳೆಗಳು ನೋಡಬಹುದು. ತೋಟಗಾರಿಕೆಯಲ್ಲಿ ಸಾಮಾನ್ಯವಾಗಿ ಕೀಟ ಮತ್ತು ರೋಗ ನಿರೋಧಕತೆಗೆ ಬಳಸುವ ಜೈವಿಕ ಕೀಟನಾಶಕಗಳೆಂದರೆ ಬೇವಿನ ಎಣ್ಣೆ, ಬೇವಿನ ಹಿಂಡಿ ಬಿಟಿ ಟ್ರೈಕೋಡರ್ಮ ಹಾಗೂ ಸುಡುಮೋನಾಸ್‌ನಂತಹ ಜೈವಿಕ ಪೀಡೆನಾಶಕಗಳನ್ನು ಬಳಸುವುದು ಸೂಕ್ತ.



ಡಾ. ಶಶಿಕುಮಾರ್ ಎಸ್.
ಪ್ರಾಧ್ಯಾಪಕರು ಹಾಗೂ ಸಂಪಾದಕರು,
ಸಂವಹನ ಕೇಂದ್ರ ತೋವಿವಿ, ಬಾಗಲಕೋಟ.
Email: shashikumar2482@gmail.com
Cell: 9741900255

ಮಾರ್ಚ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ಬೇಸಿಗೆ ಉಳುಮೆ ಮಾಡಿ ಕ್ಷೇತ್ರ ಸ್ವಚ್ಛಗೊಳಿಸಿ, ಗುಣಿ ತೆಗೆದು, ಮಾವು, ನಿಂಬೆ, ಸಸಿ ನಡುವಿಕೆ ನೀರಾವರಿ ಕ್ಷೇತ್ರಗಳಲ್ಲಿ ಚಿಕ್ಕು ಬೆಳೆ ನಿರ್ವಹಣೆ ದ್ರಾಕ್ಷಿ ಕಟಾವಿನ ನಂತರ ನೀರನ್ನು ತಡೆಹಿಡಿಯುವುದು.

ಮಾವಿನ ಬೆಳೆಗೆ ನೀರು ಹಾಯಿಸುವದು

ಈ ತಿಂಗಳಲ್ಲಿ ಕಾಯಿ ಬಲಿಯುವ ಪ್ರಕ್ರಿಯೆ ಮುಂದುವರೆದಿರುತ್ತದೆ. ನೀರನ್ನು ಹಾಯಿಸುವದನ್ನು ಮುಂದುವರಿಸಬೇಕು. ಈ ಹಂತದಲ್ಲಿ ಸೂಕ್ತ ಸಿಂಪರಣೆಯಿಂದ ಅಳಿದುಳಿದ ಜಿಗಿಹುಳು, ಕಾಡಿಗೆರೋಗ (ಜಿಗಿಹುಳು ಕಾರಣದಿಂದ), ಹೂ ತೆನೆ ಒಣಗುವ ರೋಗ ಮತ್ತು ಬೂದಿರೋಗ ಮತ್ತೊಮ್ಮೆ ಕಂಡುಬಂದರೆ ಹತೋಟಿಯಾಗುತ್ತದೆ.

ಮಾವಿನ ಬೆಳೆಯಲ್ಲಿ ಮಾರ್ಚ್ ಹಾಗೂ ಎಪ್ರಿಲ್ ತಿಂಗಳಲ್ಲಿ ಅಡ್ಡ ಮಳೆ ಬಂದರೆ, ಸಾಕಷ್ಟು ಸಂಖ್ಯೆಯಲ್ಲಿ ಹಣ್ಣಿನ ನೊಣಗಳು ಭೂಮಿಯಿಂದ ಎದ್ದು ಬಂದು ಕಾಯಿಗಳ ಮೇಲೆ ಒಮ್ಮಿಂದೊಮ್ಮೆಲೇ ತತ್ತಿ ಇಟ್ಟು ದಾಳಿ ಮಾಡುವದರಿಂದ, ಕೂಡಲೇ ಬೆಲ್ಲ ಅಥವಾ ಸಕ್ಕರೆ @ 10 ಗ್ರಾಂ + ಡೈಮಿಥೋಯೇಟ್ @ 2.0 ಮಿ.ಲೀ. ಮಿಶ್ರಣವನ್ನು ಗಿಡದ ಬುಡದಿಂದ ಸುಮಾರು 4–5 ಅಡಿ ಎತ್ತರ ಮಾತ್ರ ಸಿಂಪರಣೆ ಮಾಡುವುದರಿಂದ ಆಗ ತಾನೇ ನೆಲದಿಂದ ಎದ್ದು ಬಂದ ನೊಣಗಳು ಆಕರ್ಷಿತಗೊಂಡು ಬೆಲ್ಲದ ಜೊತೆಗೆ ವಿಷವನ್ನು ತಿಂದು ಸಾಯುತ್ತವೆ.

ಎಪ್ರಿಲ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ದ್ರಾಕ್ಷಿ ಬೆಳೆಯಲ್ಲಿ ಎಲೆಗಳನ್ನು

ಸವರಿ, ಕಡ್ಡಿ ಚಾಟ್ನಿ ಕೈಗೊಳ್ಳುವುದು ದಾಳಿಂಬೆ ಮ್ರಿಗ ಬಹಾರ ಕಟಾವಿನ ನಂತರ ಚಾಟ್ನಿ ಮಾಡಿ, ವಿಶ್ರಾಂತಿ ನೀಡಬೇಕು. ತಿಂಗಳ ಕೊನೆಯಲ್ಲಿ ಹಸ್ತಬಹಾರ ದಾಳಿಂಬೆಗೆ ಹಗುರು ನೀರಾವರಿ ನೀಡುವುದು.

ಹಣ್ಣಿನ ಬೆಳೆಗಳಿಗೆ ಅತೀ ಹೆಚ್ಚು ತಾಪಮಾನ ತಡೆದುಕೊಳ್ಳಲು – ಆ್ಯಂಟಿ ಟ್ರಾನ್ಸ್‌ಪರೆಂಟ್ (ಕೆಯೋಲನ್ ಹಾಗೂ ಹಸಿರು ಮಿರಾಕಲ್) ಉಪಯೋಗಿಸಿ ಗಿಡಗಳಿಗೆ ನೆರಳನ್ನು ನೀಡುವ ಮುಂಜಾಗ್ರತೆ ಕೈಗೊಳ್ಳಬೇಕು. ಬಾರೆಯಲ್ಲಿ ಬೇಸಿಗೆ ಚಾಟ್ನಿ ಕೈಗೊಳ್ಳುವುದು ನೀರಳೆಯಲ್ಲಿ ನಿರ್ವಹಣೆ ಕೈಗೊಳ್ಳುವುದು. ನೇರಳೆಯಲ್ಲಿ ಗೊಣ್ಣೆಹುಳುವಿನ ನಿಯಂತ್ರಣಕ್ಕಾಗಿ 5 ಕೆ.ಜಿ. ಪ್ರತಿ ಎಕರೆಗೆ ಮೆಟಾರೈಜಿಯಮ್ ಶಿಲೀಂಧ್ರವನ್ನು ಮಣ್ಣಿಗೆ ಸೇರಿಸಬೇಕು.

ದ್ರಾಕ್ಷಿಯಲ್ಲಿ ಬೇಸಿಗೆ ಚಾಟನಿ :

ಇದನ್ನು ಏಪ್ರಿಲ್ ತಿಂಗಳಲ್ಲಿ ಕೈಗೊಳ್ಳುತ್ತಾರೆ. ಸಾಮಾನ್ಯವಾಗಿ ಬಳ್ಳಿಯ ಮುಖ್ಯ ರೆಂಬೆಗಳು ಹಾಗೂ ಸಣ್ಣ ರೆಂಬೆಗಳ ಮೇಲೆ ಒಂದು ವರ್ಷ ಹಳೆಯ ಮತ್ತು ಹೊಸದಾಗಿ ಬೆಳೆದ ಕಡ್ಡಿಗಳನ್ನು ಒಂದು ಕಣ್ಣು ಬಿಟ್ಟು ಕತ್ತರಿಸಬೇಕು. ನಂತರ ಬಳ್ಳಿಯ ಮೇಲೆ ಉಳಿದ ಎಲ್ಲ ಎಲೆಗಳನ್ನು ತೆಗೆದು ಹಾಕಬೇಕು. ಮಾವಿನ ಬೆಳೆಯಲ್ಲಿ ಎಪ್ರಿಲ್ ತಿಂಗಳು ಕಾಯಿ ಬಲಿಯುವ ಪ್ರಕ್ರಿಯೆ ಮುಂದುವರೆಯುತ್ತದೆ. ಈ ತಿಂಗಳ ಕೊನೆಗೆ ಶೇ. 40–45ರಷ್ಟು ಕಾಯಿಗಳು ಬಲಿಯುವದರಿಂದ ಕಾಯಿಗಳನ್ನು ಸುಧಾರಿತ ಪದ್ಧತಿಯಿಂದ ಕೊಯ್ಲು ಮಾಡಬೇಕು. ಕಾಯಿಗಳನ್ನು ಕೋಲಿನಿಂದ ಬಡಿಯಬಾರದು. ಬಲಿತ ಕಾಯಿಗಳನ್ನು ಧೋಟಿಯಂತ್ರವನ್ನು ಬಿದಿರು ಕೋಲಿಗೆ ಕಟ್ಟಿ ಒಂದು ಇಂಚು ದೇಟು ಬಿಟ್ಟು ಹರಿಯಬೇಕು.

ಮೇನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ಅಧಿಕೃತ ಸಸ್ಯೋತ್ಪಾದನಾ ಕೇಂದ್ರಗಳನ್ನು ಗುರುತಿಸಿ, ಕಸಿ ಸಸಿಗಳನ್ನು ಪಡೆದುಕೊಳ್ಳಬೇಕು. ಕಸಿ ಸಸಿಗಳ ನೆಡುವಿಕೆಗೆ ಗುಣಿಗಳಿಗೆ ಕೊಟ್ಟಿಗೆ ಗೊಬ್ಬರ ಹಾಗೂ ಮಿಶ್ರ ಗೊಬ್ಬರ ಹಾಕುವುದು ದ್ರಾಕ್ಷಿ ಬೆಳೆ ನಿರ್ವಹಣೆ ಹಾಗೂ ಹಣ್ಣಿನ ಗಾತ್ರಕ್ಕಾಗಿ GA3 ಮತ್ತು ಯುರಾಸಿಲ್ PGR ಸಿಂಪರಣೆ ಕೈಗೊಳ್ಳಬೇಕು.

ಮಾವಿನ – ಕಟಾವು ಹಾಗೂ ಕಟಾವಿನ ನಂತರದ ಕ್ರಮ ಕೈಗೊಳ್ಳುವುದು. ಪೇರಲ ಬೆಳೆಗೆ ಚಾಟನಿ ಮಾಡಿ ಮೃಗ ಬಹಾರ ಪ್ರೇರೆಪಿಸುವದು. ದ್ರಾಕ್ಷಿ ಬೆಳೆಯಲ್ಲಿ ಎಪ್ರಿಲ್ ಚಾಟ್ನಿಯಾದ 45–60 ದಿನಗಳ ನಂತರ ಶೇಕಡಾ 50 ರಷ್ಟು ನೀರನ್ನು ಕಡಿತಗೊಳಿಸುವುದು. ಮಾವು ಹಾಗೂ ಬಾಳೆ ಬೆಳೆಗಳಿಗೆ – ಮ್ಯಾಂಗೊ ಹಾಗೂ ಬಾಳೆ ಸ್ಪೆಷಲ್ 5–10 ಗ್ರಾಂ/ಲೀ ಸಿಂಪರಣೆ ಕೈಗೊಳ್ಳಬೇಕು.

ಜೂನ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ತೋಟಗಳಲ್ಲಿ ಬೇಸಾಯ ಕ್ರಮಗಳ ಅಳವಡಿಕೆ ಅತೀ ಸಾಂದ್ರ ಮಾವಿನ ತೋಟದ ಚಾಟ್ನಿ ಮಾಡಬೇಕು ಕಸಿ ಸಸಿಗಳನ್ನು ನೆಡುವುದು ಮಳೆಗಾಲದ ಪೇರಲ ಬೆಳೆಯಲ್ಲಿ ಹಣ್ಣು ನೊಣದ ನಿರ್ವಹಣೆಗೆ ಎಕರೆಗೆ 8–10 ಮಿಥೈಯುಜೆನಾಲ್ ಮೋಹಕ ಬಲೆ ಹಾಕಬೇಕು. ಜೂನ್ ದಲ್ಲಿ ದಾಳಿಂಬೆ ಹಾಗೂ ಪೇರಲ ಬೆಳೆಗಳಿಗೆ ಸ್ಪೆಂಗ್ನಂಮಾಸ್ ಅನ್ನು ಐಬಿಎ (5000ಪಿಪಿಎಮ್) ದ್ರಾವಣದಲ್ಲಿ ಅದ್ದಿ ಗೂಟಿ ಕಟ್ಟಬೇಕು.

ಜುಲೈನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ಪ್ರಮುಖ ಹಣ್ಣಿನ ಬೆಳೆಗಳಾದ ಮಾವು, ಚಿಕ್ಕು, ನೇರಳೆ, ಹಲಸಿನಲ್ಲಿ ಕಸಿ ಕಟ್ಟುವುದು. ದಾಳಿಂಬೆಯಲ್ಲಿ ಚಾಟ್ನಿ. ಎಲೆ ಸವರುವಿಕೆಯೊಂದಿಗೆ ಹಸ್ತ ಬಹಾರ ಹೂವಾಡುವಿಕೆಗೆ ಪ್ರೇರೇಪಿಸುವುದು. ಮಾವು ಹಾಗೂ ತೆಂಗಿನ ತೋಟಗಳಿಗೆ ಮೊದಲು ಮೇಲುಗೊಬ್ಬರ, ಕೊಟ್ಟಿಗೆಗೊಬ್ಬರ ನೀಡುವುದು. ಬಾರೆಯಲ್ಲಿ ಶೇಕಡಾ 50ರಷ್ಟು ಹೂವಾಡುವಾಗ NAA 15 PPM ಸಿಂಪಡಿಸುವುದು. ನೇರಳೆಯಲ್ಲಿ ಗೂಟಿ ಕಸಿ ಕಟ್ಟುವುದು.

ಹಣ್ಣಿನ ಕಸಿ ಸಸಿಗಳು (ತಳಿಗಳು)

ಲಿಂಬೆ (ಕಾಗ್ಜಿ, ಬಾಲಾಜಿ), ಸೀತಾಫಲ (ಬಾಲನಗರ, ಎನ್‌ಎಮ್‌ಕೆ ಗೋಲ್ಡ್), ರಾಮಫಲ (ಲೋಕಲ್), ಹನುಮಫಲ (ಲೋಕಲ್), ನೆಲ್ಲಿ (ಕೃಷ್ಣಾ, ಕಾಂಚನಾ, ಚಕಯ್ಯ), ಚಿಕ್ಕು (ಕಾಲಿಪತ್ತಿ, ಕ್ರಿಕೇಟ್ ಬಾಲ್), ಮಾವು (ಅಲ್ಫಾನ್ಸೊ, ಬನೇಶಾನ್, ದಶಹರಿ, ಕೇಸರ್, ಖಾದರ್, ಮಾಲಗೋವಾ, ನೀಲಂ, ಪೈರಿ, ತೋತಾಪುರಿ, ಆಮ್ರಪಾಲಿ, ಮಲ್ಲಿಕಾ, ಸಿಂಧು, ಅಪ್ಪಿಮಿಡಿ, ಅರ್ಕಾ ಅರುಣ), ಪೇರು (ಲಕ್ನೋ–49 ಕಸಿ, ಲಕ್ನೋ –49 ಗೂಟಿ, ಅಲಹಾಬಾದ್ ಸಫೇದ, ಲಲಿತ್, ಅರ್ಕಾ ಕಿರಣ, ವಿಎನ್‌ಆರ್‌ಬಿಹಿ), ನೇರಳೆ (ಬಹಾಡೋಲಿ, ಎಜೆಜಿ 85, ದುಪದಾಳ), ಹುಣಸೆ (ಡಿಟಿಎಸ್–1, ಕೆಂಪು ಹುಣಸೆ, ಸಿಹಿ ಹುಣಸೆ), ಪಪ್ಪಾಯ (ನಂ. 15), ಹಲಸು (ಸಿದ್ದು, ಶಂಕರ, ಚಂದ್ರ, ರುದ್ರಾಕ್ಷಿ, ಜಿಕೆವಿಕೆ ರೆಡ್, ಬೈರಚಂದ್ರ, ಲಾಲ್‌ಬಾಗ ಮಧುರಾ), ಬಳುವಲ (ಲೋಕಲ್), ಪೆನ್ನೇರಳೆ

(ಗುಲಾಬಿ ತಿರುಳು, ಬಿಳಿ ತಿರುಳು), ಕದಂಬ (ಸಹಿ), ಡ್ರ್ಯಾಗನ್ ಕಡ್ಡಿಗಳು (ಪಿಂಕ್, ವೈಟ್), ದಾಳಿಂಬೆ (ಬಾಗ್ವಾ), ಅಂಜೂರ (ಪೂನಾ, ಬಳ್ಳಾರಿ, ದಿನಕರ, ಬ್ರೌನ್‌ಟಕಿ, ಡಿಯಾನ್, ಕೊನಾಡ್ರಿಯಾ, ಎಕ್ಸಲ್)

ಅಗಷ್ಟ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ದ್ರಾಕ್ಷಿ ಬೆಳೆಯಲ್ಲಿ ನಿರ್ವಹಣೆಗಾಗಿ ಮಂಜಾಗ್ರತೆ ಕ್ರಮ ಅನುಸರಿಸುವುದು ಮಾವಿನಲ್ಲಿ ಎರಡನೇ ಹಂತದ ಗೊಬ್ಬರಗಳನ್ನು ನೀಡುವುದು. ಮಾವಿನ ಬೆಳೆಗೆ ಒಂದು ವೇಳೆ ಅಗಷ್ಟ್ ತಿಂಗಳಲ್ಲಿ ಮಳೆ ಬರದಿದದ್ದರೆ ನೀರಾವರಿಯನ್ನು ಮುಂದುವರಿಸಬೇಕು. ಮೇಲು ಗೊಬ್ಬರವಾಗಿ ಪ್ರತಿ ಗಿಡಕ್ಕೆ ಯೂರಿಯಾ @ 250 ಗ್ರಾಂ. ಸಿಂಗಲ್ ಸೂಪರ್ ಫಾಸ್ಫೇಟ್ @ 500 ಗ್ರಾಂ ಹಾಗೂ ಮೂರೇಟ್ ಆಫ್ ಪೊಟ್ಯಾಶ್ @ 250 ಗ್ರಾಂ ಕೊಡಬೇಕು. ಇದರಿಂದ ಮಂದೆ ಹೂ ಮತ್ತು ಕಾಯಿ ಉದುರುವದು ಕಡಿಮೆಯಾಗುತ್ತದೆ. ಗಿಡಗಳಿಗೆ ಬೇಕಾದ ಪೋಷಕಾಂಶ ಗಳನ್ನು ಒದಗಿಸಿದಂತಾಗಿ ಇಳುವರಿ ಹೆಚ್ಚುತ್ತದೆ. ಬಾರೆಯಲ್ಲಿ ಗೂಟಿ ಕಸಿ ಕಟ್ಟುವುದು ದ್ರಾಕ್ಷಿ ಬೆಳೆಯಲ್ಲಿ ಚಿಕ್ಕಟ ದುಂಬಿ, ಥ್ರಿಪ್ಸ್ ನುಶಿ ನಿರ್ವಹಣೆಗೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು.

ಸೆಪ್ಟೆಂಬರ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ಅಂಜೂರ ಗಿಡಗಳಲ್ಲಿ ಚಾಟ್ನಿ ಕೈಗೊಳ್ಳುವುದು. ಪ್ರಮುಖ ಹಣ್ಣಿನ ಬೆಳೆಗಳ ಮಾವು, ಚಿಕ್ಕು, ನೇರಳೆ, ಹಲಸಿನಲ್ಲಿ ಕಸಿ ಕಟ್ಟುವುದು. ಕಲ್ಟಾರ (ಪಾಕ್ಲೋಬೂಟ್ರಾಜೊಲ್) ದ್ರಾವಣವನ್ನು ಮಾವು ಹಾಗೂ ನೇರಳೆಗೆ ನೀಡಬೇಕು. ಮಾವು ಹಾಗೂ ಬಾಳೆ ಬೆಳೆಗಳಿಗೆ ಮ್ಯಾಂಗೋ ಸ್ಪೆಷಲ್ ನೀಡಬೇಕು. ನಿಂಬೆ ಬೆಳೆಯಲ್ಲಿ ಅಗತಿ ಮಾಡಿ, ನೀರು ಕೊಡುವುದನ್ನು ತಡೆ ಹಿಡಿಯಬೇಕು. ಬೇಸಿಗೆ ಹಂಗಾಮಿನಲ್ಲಿ ಲಿಂಬೆಯಲ್ಲಿ ಉತ್ತಮ ಇಳುವರಿಗಾಗಿ ಸೈಕೊಸಿಲ್ 1ಮಿ.ಲೀ/ ಲೀ ಸಿಂಪರಣೆ ಕೈಗೊಳ್ಳಬೇಕು.

ಅಕ್ಟೋಬರ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ನೇರಳೆ ಗಿಡಕ್ಕೆ ಕಸಿ ಕಟ್ಟುವುದು. ದ್ರಾಕ್ಷಿ ಬಳ್ಳಿಗಳಿಗೆ ಸವರುಕವಿಕೆ ಕೈಗೊಳ್ಳಬೇಕು. ಮಾವಿನ ಬೆಳೆಯಲ್ಲಿ ಅಕ್ಟೋಬರ್ ತಿಂಗಳಲ್ಲಿ ಗಿಡಗಳಿಗೆ ನೀರು ಕೊಡುವದನ್ನು ಮುಂದುವರೆಸಬೇಕು. ಅಕ್ಟೋಬರ್ ತಿಂಗಳ ಕೊನೆಯ ವಾರದಲ್ಲಿ ಮ್ಯಾಂಗೋ ಸ್ಪೆಷಲ್ ಲಘು ಪೋಷಕಾಂಶ ಮಿಶ್ರಣವನ್ನು ಪ್ರತಿ ಲೀ. ನೀರಿಗೆ 5.0 ಗ್ರಾಂ ನಂತೆ ಬೆರೆಸಿ ಸಿಂಪಡಿಸುವದು. ಇದರ ಜೊತೆಗೆ ಪೋಟ್ಯಾಶಿಯಂ ನೈಟ್ರೇಟ್, KNO3 (13:0:45) ಅನ್ನು ಪ್ರತಿ ಲೀ. ನೀರಿಗೆ 20 ಗ್ರಾಂ ನಂತೆ ಬೆರೆಸಿ ಸಿಂಪಡಿಸಿದರೆ ಎಲ್ಲ ಮಾವಿನ ಗಿಡಗಳು ಒಂದೇ ಸಲಕ್ಕೆ ಒಂದೇ ಸಮನೆ ಹೂ ಬಿಡಲು ಸೂಚನೆ ಕೊಟ್ಟಂತಾಗುತ್ತದೆ. ಅಲ್ಲದೇ ಮ್ಯಾಂಗೋ ವಿರೂಪತೆ ಹಣ್ಣಿನ ಒಳಗೆ ಗರ್ಭ ಧರಿಸುವುದು (Spongy tissue) ಕಡಿಮೆಯಾಗುತ್ತದೆ ಹಾಗೂ ಗುಣಮಟ್ಟದ ಇಳುವರಿ ಪಡೆಯಬಹುದು.

ದ್ರಾಕ್ಷಿಯ ಕೀಟ ನಿರ್ವಹಣೆಗಾಗಿ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ದ್ರಾಕ್ಷಿಯಲ್ಲಿ ಸೂಕ್ತ ಕಸಿ ಕುಡಿಯಿಂದ ಗಿಡದಲ್ಲಿಯೇ ಮೃದು ಬಳ್ಳಿ ಕಸಿ ಕಟ್ಟಬೇಕು ಬೇಸಿಗೆ ಹಂಗಾಮಿನಲ್ಲಿ ಹೆಚ್ಚಿನ ಇಳುವರಿಗಾಗಿ ಸೈಕೊಸಿಲ್ 1 ಮಿಲೀ/ ಲೀ. ನೀರಿಗೆ ಹಾಕಿ ಸಿಂಪಡಿಸಬೇಕು. ಇದನ್ನು ಅಕ್ಟೋಬರ್ ತಿಂಗಳಲ್ಲಿ ಕೈಗೊಳ್ಳಬೇಕು. ಬಳ್ಳಿ ಕತ್ತರಿಸುವದಕ್ಕೆ ಮೂರು ವಾರ ಮುಂಚೆ ನೀರು ಹಾಯಿಸುವದನ್ನು ನಿಲ್ಲಿಸಿ ಬಳ್ಳಿಗೆ ವಿಶ್ರಾಂತಿ ಕೊಡಬೇಕು. ಬಳ್ಳಿಗಳ ಬುಡದ ಸುತ್ತಲೂ 10 ರಿಂದ 15 ಸೆಂ. ಮೀ ಆಳದ ಪಾತಿ ಮಾಡಬೇಕು. ಚೆನ್ನಾಗಿ ಬಲಿತ ಕಂದು ಬಣ್ಣದ ಪೆನ್ಸಿಲ್ ಗಾತ್ರದ ಕಡ್ಡಿಗಳಲ್ಲಿ ಥಾಮ್ಸನ್ ಸಿಡಲೆಸ್ ತಳಿಯಾದಲ್ಲಿ 8 ರಿಂದ 10 ಕಣ್ಣು ಬಿಟ್ಟು ಮತ್ತು ಸಂಕರಣ ತಳಿಗಳಲ್ಲಿ 5 ರಿಂದ 6 ಕಣ್ಣು ಬಿಟ್ಟು ಮೇಲ್ಭಾಗವನ್ನು ಚಾಟನಿ ಮಾಡಬೇಕು

ನವೆಂಬರ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ಮಾವಿನ ಬೆಳೆಗೆ ನವೆಂಬರ್ ಹಾಗೂ ಡಿಸೆಂಬರನಲ್ಲಿ ನೀರನ್ನು ತಡೆಹಿಡಿಯಬೇಕು ಸೀತಾಫಲ ಗಿಡಗಳಿಗೆ ಚಾಟನಿ ಕೈಗೊಳ್ಳಬೇಕು ದ್ರಾಕ್ಷಿ ಬೆಳೆಗೆ ಜಿಬ್ಬರಲಿಕ್ ಆಸಿಡ್ ದ್ರಾವಣ ಸಿಂಪಡಿಸಬೇಕು. ದ್ರಾಕ್ಷಿ ಬೆಳೆಯ ಬೂಜು ತುಪ್ಪಟರೋಗ (ದಾನಿ) ನಿರ್ವಹಣೆಗಾಗಿ ಮುಂಜಾಗ್ರತ ಕ್ರಮ ಅನುಸರಿಸಬೇಕು. ಮಾವು ಹಾಗೂ ಬಾಳೆ ಬೆಳೆಗೆ ಮ್ಯಾಂಗೋ ಸ್ಪೆಷಲ್ ಹಾಗೂ ಪೊಟ್ಯಾಸಿಯಂ ನೈಟ್ರೈಟ್ ಸಿಂಪಡಿಸಬೇಕು.

ಡಿಸೆಂಬರ್‌ನಲ್ಲಿ ಕೈಗೊಳ್ಳಬೇಕಾದ ಕ್ರಮಗಳು

ನೆಲ್ಲಿ ಗಿಡಗಳಿಗೆ ಸವರುವಿಕೆ ಕೈಗೊಳ್ಳಬೇಕು ದ್ರಾಕ್ಷಿ ಗೊಂಚಲುಗಳನ್ನು ಜಿಬ್ಬರಲಿಕ್ ದ್ರಾವಣದಲ್ಲಿ ಅದ್ದುವುದು ದ್ರಾಕ್ಷಿ ಬೆಳೆಯ ಬೂದು ರೋಗ ನಿರ್ವಹಣೆಗಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು ನೇರಳೆ ಹಣ್ಣಿನ ಗಿಡಗಳಿಗೆ ಡಿಸೆಂಬರ್‌ನಿಂದ ಜನೆವರಿ ಕೊನೆಯವರೆಗೆ ನೀರು ಕೊಡುವುದನ್ನು ತಡೆಹಿಡಿಯಬೇಕು.

853ನೇ ಶ್ರೀಗುರು ಸಿದ್ಧರಾಮೇಶ್ವರರ ಜಯಂತಿ, ಹೊಳಲ್ಕೆರೆ. ಜನವರಿ 2026

















853ನೇ ಶ್ರೀಗುರು ಸಿದ್ಧರಾಮೇಶ್ವರರ ಜಯಂತಿ, ಹೊಳಲ್ಕೆರೆ. ಜನವರಿ 2026










ನೊಳಂಬ ಲಿಂಗಾಯತ ಸಂಘದ ಕಾರ್ಯಚಟುವಟಿಕೆಗಳು










Vol-16 Issue No. : 1 Periodical

RNI No. KARKAN-2012/53684/Dtd. 19-12-2013, Nolamba Vani - Kannada Quarterly
January, February, March 2026, Number of Pages 56









ಹೇಮಾವತಿ ಮ್ಯೂಸಿಯಂನಲ್ಲಿರುವ
ನೊಳಂಬರ ಲಾಂಛನ

Published, Printer and Owner : B.K.Chandrashekar, NOLAMBA ADHYAYANA KENDRA
Owned by on behalf of Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Published from : Nolamba Lingayatha Sangha (R.), # 1/A, 1st Cross, 3rd Stage, 4th Block, Basaveshwaranagar, Bengaluru-79, Karnataka.
Printed at : Kala Offset Printers, # 1203, 1st Main, 1st Cross, M.C.Layout, Vijayanagar, Bengaluru - 560 040.
Editor : Dr. Rakesh B.C.